# ಅಧ್ಯಾಯ–೧೩
# ಶಿಕ್ಷಣ ಮತ್ತು ಕ್ರೀಡೆ

ತುಮಕೂರು ಜಿಲ್ಲೆಯು ಕಲ್ಪತರುನಾಡು ಎಂದು ಪ್ರಸಿದ್ಧಿ ಪಡೆದಿದೆ. ಈ ಜಿಲ್ಲೆಯು ಒಟ್ಟು ೧೦,೫೯೮ ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ತುಮಕೂರು ಜಿಲ್ಲೆಯು ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಗಳನ್ನೊಳಗೊಂಡಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. **ನಹಿ ಜ್ಞಾನೇನ ಸದೃಶಂ** ಎಂಬ ವೇದ ವಾಕ್ಯದಂತೆ ಜ್ಞಾನಕ್ಕೆ ಸಮಾನವಾದುದು ಬೇರೊಂದಿಲ್ಲ. ಈ ಜ್ಞಾನವನ್ನು ಧಾರೆಯೆರೆಯುವ ಕಾರ್ಯವನ್ನು ಶಿಕ್ಷಣ ಇಲಾಖೆ ಮಾಡುತ್ತಿದೆ. ಮಾನವನ ಸರ್ವಾಂಗೀಣ ಬೆಳವಣಿಗೆಗೆ ಶಿಕ್ಷಣ ಅತ್ಯವಶ್ಯವಾಗಿದೆ. ಪ್ರಾಥಮಿಕ ಶಿಕ್ಷಣವು ಶಿಕ್ಷಣದ ಅಡಿಗಲ್ಲಾಗಿರುತ್ತದೆ. ಈ ದಿಸೆಯಲ್ಲಿ ತುಮಕೂರು ಜಿಲ್ಲೆಯ ಶಿಕ್ಷಣದ ಬಗೆಗಿನ ಮಾಹಿತಿ ಈ ಅಧ್ಯಾಯದಲ್ಲಿ ನೀಡಿದೆ.

**ಪ್ರಾರಂಭದ ಶಿಕ್ಷಣ:** ಪ್ರಾಚೀನ ಕಾಲದಲ್ಲಿ ಭಾರತದ ಎಲ್ಲೆಡೆ ಪ್ರಚಲಿತವಿದ್ದ ಗುರುಕುಲ ಪದ್ಧತಿಯು ತುಮಕೂರು ಜಿಲ್ಲೆಯಲ್ಲಿಯೂ ಚಾಲ್ತಿಯಲ್ಲಿತ್ತು. ಗುರುಮುಖೇನ ಮೌಖಿಕವಾಗಿ ವೇದಪಾಠಗಳನ್ನೂ, ವ್ಯಾಕರಣವನ್ನೂ ಬಾಯಿಪಾಠಮಾಡಿ ಅಭ್ಯಾಸ ಮಾಡಲಾಗುತ್ತಿತ್ತು. ತುಮಕೂರು ಜಿಲ್ಲೆಯಲ್ಲಿ ಇಂಥ ಅನೇಕ ಶಿಕ್ಷಣ ಕೇಂದ್ರಗಳಿದ್ದವು. ಇಲ್ಲಿನ ಅನೇಕ ಪ್ರಾಚೀನ ಮಂದಿರಗಳು ಹಾಗೂ ಅಗ್ರಹಾರಗಳಲ್ಲಿ ಇಂಥ ಶಿಕ್ಷಣ ವ್ಯವಸ್ಥೆ ಇರುತ್ತಿತ್ತು. ಆದರೆ ಸಾಂಸ್ಥಿಕ ವ್ಯವಸ್ಥೆಯಲ್ಲಿ ಕಲಿಯುವುದಕ್ಕಿಂತ ಹೆಚ್ಚಾಗಿ ಕೌಟುಂಬಿಕ ವ್ಯವಸ್ಥೆಯಲ್ಲಿ, ಅಂದರೆ ತಂದೆಯಿಂದ ಮಕ್ಕಳು ಕಲಿಯುತ್ತಿದ್ದುದೇ ಹೆಚ್ಚಾಗಿತ್ತು. ಆದ್ದರಿಂದ ಶಿಕ್ಷಣದ ಬಹುಭಾಗ ಔಪಚಾರಿಕವಲ್ಲದ ರೀತಿಯಲ್ಲಿ ನಡೆಯುತ್ತಿತ್ತು. ಮಹಮ್ಮದೀಯ ಶಿಕ್ಷಣ ಕ್ರಮವು ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಹೆಚ್ಚು ಪ್ರೋತ್ಸಾಹ ಕಂಡಿತು. ಇದರಲ್ಲಿ ಮಕ್ತಬ್ ಮತ್ತು ಮದರಸಾ ಎಂಬ ಎರಡು ಬಗೆಯ ಸಂಸ್ಥೆಗಳಿರುತ್ತಿದ್ದವು. ಮಕ್ತಬ್ ಎಂದರೆ ಪ್ರೈಮರಿ ಶಾಲೆ. ಇದು ಸಾಮಾನ್ಯವಾಗಿ ಮಸೀದಿಯಲ್ಲಿ ಅಥವಾ ಅದಕ್ಕೆ ಹೊಂದಿಕೊಂಡ ಭಾಗದಲ್ಲಿ ಇರುತ್ತಿತ್ತು. ಇಲ್ಲಿ ಕುರಾನನ್ನು ಮುಖ್ಯವಾಗಿ ಹೇಳಿಕೊಡಲಾಗುತ್ತಿತ್ತು. ಮದರಸಾ ಎಂಬುದು ಈಗಿನ ಕಾಲೇಜುಗಳಂತೆ ಉನ್ನತ ಕಲಿಕಾ ಕೇಂದ್ರವಾಗಿತ್ತು.

**ಶಾಸನೋಕ್ತ ಶಿಕ್ಷಣ ಕೇಂದ್ರಗಳು:** ತುಮಕೂರು ಜಿಲ್ಲೆಯಲ್ಲಿ ಗಂಗರು, ನೊಳಂಬರು, ಕಲ್ಯಾಣಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು, ಯಲಹಂಕ ಪ್ರಭುಗಳು– ಇತ್ಯಾದಿಯವರು ಆಡಳಿತ ನಡೆಸಿದ್ದಾರೆ. ಈ ಎಲ್ಲರೂ ಶಿಕ್ಷಣ ಪ್ರಸಾರಕ್ಕೆ ಪ್ರೋತ್ಸಾಹ ಕೊಟ್ಟಿದ್ದರು. ಇದರ ಪರಿಣಾಮವಾಗಿ

ಬ್ರಹ್ಮಪುರಿಗಳು ಹಾಗೂ ಅಗ್ರಹಾರಗಳು ಇಲ್ಲಿ ಸ್ಥಾಪನೆಗೊಂಡು ಕೆಲವು ವರ್ಗದ ಜನರಲ್ಲಿ ವಿದ್ಯಾಪ್ರಸಾರ ಮಾಡುತ್ತಾ ಜ್ಞಾನ, ಸಾಕ್ಷರತೆ ಬೆಳೆಯಲು ಕಾರಣೀಭೂತವಾಗಿವೆ. ದೊಡ್ಡ ವಿದ್ಯಾಕೇಂದ್ರಗಳಾದ ಘಟಿಕಾಸ್ಥಾನಗಳು ಈ ಜಿಲ್ಲೆಯಲ್ಲಿ ಇದ್ದ ಬಗ್ಗೆ ಈವರೆಗೂ ಆಧಾರ ದೊರೆತಿಲ್ಲ. ಆದರೆ ಸುಮಾರು ಮೂವತ್ತಮೂರು ವಿದ್ಯಾಕೇಂದ್ರಗಳು (ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳು ಸೇರಿ) ಈ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಇದ್ದದ್ದು ಖಚಿತವಾಗಿದೆ. ಈ ಕೇಂದ್ರಗಳು ಮೂರು ಕಾಲಘಟ್ಟಗಳಲ್ಲಿ ಸ್ಥಾಪನೆಗೊಂಡು ಕಾರ್ಯವೆಸಗಿರುವುದನ್ನು ತಜ್ಞರು ಪತ್ತೆ ಹಚ್ಚಿದ್ದಾರೆ. ಆ ಕಾಲಘಟ್ಟಗಳೆಂದರೆ – ೧) ಹೊಯ್ಸಳರ ಕಾಲ, ೨) ವಿಜಯನಗರ ಕಾಲ ೩) ವಿಜಯನಗರೋತ್ತರ ಕಾಲ, ಈ ಕಾಲಗಳಲ್ಲಿದ್ದ ವಿದ್ಯಾಕೇಂದ್ರಗಳ ವಿವರ ಹೀಗಿದೆ–I ಹೊಯ್ಸಳರ ಕಾಲ: ಈ ಕಾಲಘಟ್ಟದಲ್ಲಿ ಜಿಲ್ಲೆಯಲ್ಲಿ ೧೨ ಅಗ್ರಹಾರಗಳು ಹಾಗೂ ಎರಡು ಬ್ರಹ್ಮಪುರಿಗಳು ಇದ್ದದ್ದು ಶಾಸನಗಳಿಂದ ತಿಳಿದುಬರುತ್ತದೆ. ಇವುಗಳ ವಿವರ ಹೀಗಿದೆ. ಬ್ರಹ್ಮಪುರಿಗಳು –ಹುಳಿಯಾರು (ಕ್ರಿ.ಶ. ೧೧೭೭) ಮತ್ತು ಹೊಸಕೆರೆ (ಕ್ರಿ.ಶ. ೧೨೩೫), ಅಗ್ರಹಾರಗಳು–ಬೆನಚಿಗರೆ (ಕ್ರಿ.ಶ. ೧೧೪೧), ಕೊತ್ತಗೆರೆ, ಸೆಟ್ಟೀಕೆರೆ, ತುರುವೇಕೆರೆ, ಕರಡೀಗ್ರಾಮ, ಅರಸೀಕೆರೆ, ತಂಡಗ, ವಿಘ್ನಸಂತೆ, ಬಿಜ್ಜವರ, ಹೊನ್ನುಡಿಕೆ, ಕಡಬ ಹಾಗೂ ಆತಕೂರು. ಇವುಗಳಲ್ಲಿ– ಬೆನಚಿಗೆರೆಯಲ್ಲಿ ಸ್ಥಾಪಿತವಾದ ಅಗ್ರಹಾರವೇ ಶಾಸನೋಕ್ತ ಶಿಕ್ಷಣ ಕೇಂದ್ರಗಳಲ್ಲಿ ಅತಿ ಹಿಂದಿನದು. ಇದು ಹೊಯ್ಸಳ ವಿಷ್ಣುವರ್ಧನನ ಪತ್ನಿ ಬೊಮ್ಮಲಾದೇವಿಯು ಕ್ರಿ.ಶ. ೧೧೪೧ರ ಅಗ್ರಹಾರವಾಗಿ ಬ್ರಾಹ್ಮಣರಿಗೆ ಬಿಟ್ಟುಕೊಟ್ಟಳೆಂಬುದನ್ನು ಗುಬ್ಬಿ ತಾಲೂಕಿನ ೧೩ನೇ ಶಾಸನ ತಿಳಿಸುತ್ತದೆ. ಉಳಿದವೆಲ್ಲಾ ಅನಂತರದ ಕಾಲದಲ್ಲಿ ಸ್ಥಾಪಿತವಾದವುಗಳು. ಈಗ ತಿಳಿದಿರುವ ತೇದಿಯಂತೆ ಅರಸೀಕೆರೆ ಅಗ್ರಹಾರವೇ ಈ ಘಟ್ಟದ ಶಿಕ್ಷಣ ಕೇಂದ್ರಗಳಲ್ಲಿ ಕೊನೆಯದು (೧೩೧೪). ತಂಡಗ, ವಿಘ್ನಸಂತೆ, ಬಿಜ್ಜವರ (ಮಧುಗಿರಿ ತಾಲೂಕು), ಕಡಬ ಮತ್ತು ಆತಕೂರು ಶಾಸನಗಳ ಕಾಲ ತಿಳಿದುಬಂದಿಲ್ಲ. ಈ ಉಲ್ಲೇಖಿತ ಸ್ಥಳಗಳ ಪೈಕಿ ಅರಸೀಕೆರೆ ಮತ್ತು ತಂಡಗಗಳು ಈಗ ತುಮಕೂರು ಜಿಲ್ಲೆಯಲ್ಲಿ ಉಳಿದಿಲ್ಲ. ಅವು ಹಾಸನ ಜಿಲ್ಲೆಗೆ ಸೇರಿವೆ.

**ವಿಜಯನಗರ ಕಾಲ:** ಈ ಕಾಲಘಟ್ಟದಲ್ಲಿ ಹನ್ನೊಂದು ಅಗ್ರಹಾರಗಳು ಜಿಲ್ಲೆಯಲ್ಲಿದ್ದ ಬಗ್ಗೆ ಮಾಹಿತಿ ದೊರಕಿದೆ. ಇವುಗಳಲ್ಲಿ ಮೊದಲನೆಯದಾದ ಬೆನಕನಕೆರೆಯ ಕೇಂದ್ರವು ಕ್ರಿ.ಶ. ೧೩೭೯ರಲ್ಲಿ ಸ್ಥಾಪಿತವಾಗಿದ್ದರೆ ಕೊನೆಯದಾದ ಅಡಗೂರಿನ ಅಗ್ರಹಾರವು ಕ್ರಿ.ಶ. ೧೫೭೧ರಲ್ಲಿ ಸ್ಥಾಪಿತವಾದದ್ದು ತಿಳಿಯುತ್ತದೆ. ಬೆನಕನಕೆರೆ, ಮಾವಿನಹಳ್ಳಿ, ಅಯ್ಯರಸನಹಳ್ಳಿ, ಗಾರೆಗೊಂಡನಹಳ್ಳಿ, ಸೀಗಲಗುದ್ದೆ, ಅರೇಹಳ್ಳಿ, ಯಲವಿಗೆ, ನಲಿಂಜಿ, ಬೂದಿಹಾಳು, ಕಂನಮೇಟಿ, ಅಡಗೂರು ಇವು ಈ ಕೇಂದ್ರಗಳಿದ್ದ ಗ್ರಾಮಗಳು.

**ವಿಜಯನಗರೋತ್ತರ ಕಾಲ:** ಈ ಕಾಲಘಟ್ಟದಲ್ಲಿ ಕೇವಲ ಎಂಟು ಅಗ್ರಹಾರಗಳು ಸ್ಥಾಪನೆಯಾಗಿದ್ದನ್ನು ತಿಳಿಸುವ ಶಾಸನಗಳು ದೊರೆತಿವೆ. ಇವುಗಳಲ್ಲಿ ಎರಡನ್ನು ಯಲಹಂಕ ನಾಡ ಪ್ರಭುಗಳೂ, ಇನ್ನೆರಡನ್ನು ಮೈಸೂರು ಸಂಸ್ಥಾನದವರೂ ಸ್ಥಾಪಿಸಿದ್ದು ತಿಳಿಯುತ್ತದೆ. ಉಳಿದ ನಾಲ್ಕರ ಸ್ಥಾಪಕರು ಯಾರು ಎಂಬುದು ತಿಳಿಯುವುದಿಲ್ಲ. ವೆಂಕಟಕೃಷ್ಣಸಾಗರ, ಶೃಂಗಾರಸಾಗರ, ತೊಟ್ಟಿನಕೆರೆ, ಸೋಮಸಾಗರ, ಕೊರಟಗೆರೆ, ತಿಮ್ಮನಾಯಕನಕುಂಟೆ, ಹಂದಿಕುಂಟೆ, ಅರೇಹಳ್ಳಿ (ಪಾವಗಡ ತಾಲೂಕು)ಯ ಶಾಸನಗಳಲ್ಲಿ ಇವುಗಳಲ್ಲಿ ಕೊನೆಯ ಮೂರು ಶಾಸನಗಳ ಕಾಲ ನಿರ್ಧರಿಸಲು ಸಾಧ್ಯವಾಗಿಲ್ಲ. ಮೊದಲಿನೆರಡರ ಶಾಸನದ ಕಾಲ–೧೮೯೯. ಈಗ ಲಭ್ಯವಾಗಿರುವ ಕಾಲದಂತೆ ಕೊರಟಗೆರೆ ಅಗ್ರಹಾರವೇ (ಕ್ರಿ.ಶ. ೧೭೭೬) ಈ ಘಟ್ಟದಲ್ಲಿ ನಿರ್ಮಾಣವಾದ ಕೊನೆಯ ಅಗ್ರಹಾರವಾಗಿದೆ. ಈ ರೀತಿ ತುಮಕೂರು ಜಿಲ್ಲೆಯ ಬಹುಮಟ್ಟಿನ ಎಲ್ಲ ತಾಲೂಕುಗಳಲ್ಲೂ ಕಾಲಕಾಲಕ್ಕೆ ಶಿಕ್ಷಣ ಕೇಂದ್ರಗಳು ಸ್ಥಾಪಿತವಾಗಿದ್ದದ್ದು ಕಂಡು ಬರುತ್ತದೆ. ಕ್ರಿ.ಶ. ೧೧೪೧ಕ್ಕಿಂತ ಹಿಂದಿನ ಅಗ್ರಹಾರ/ಬ್ರಹ್ಮಪುರಿಗಳ ಬಗ್ಗೆ ಹೇಳುವ ಶಾಸನಗಳು ಲಭ್ಯವಿಲ್ಲ.

**ಆಧುನಿಕ ಯುಗ:** ಕರ್ನಾಟಕದಲ್ಲಿ ೧೮೩೩ರ ವರೆಗೂ ಶಿಕ್ಷಣವು ಬಹುಮಟ್ಟಿಗೆ ಒಂದು ಖಾಸಗೀ ಚಟುವಟಿಕೆಯಾಗಿತ್ತು. ಅಂದರೆ ಆಡಳಿತಗಾರರ ಬೆಂಬಲ ಅಥವಾ ಪಾಲ್ಗೊಳ್ಳುವಿಕೆ ಅಷ್ಟಾಗಿ ಇರಲಿಲ್ಲ. ಆ ದಿನಗಳಲ್ಲಿ ಶಿಕ್ಷಣವು ಧಾರ್ಮಿಕ ಮುಖಂಡರಿಂದ ಹಾಗೂ ಪುರೋಹಿತರಿಂದ ನೀಡಲ್ಪಡುತ್ತಿತ್ತು. ೧೮೩೩ರಲ್ಲಿ ಆಗಿನ ಮೈಸೂರು ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಒಂದು 'ಫ್ರೀ ಇಂಗ್ಲೀಷ್ ಸ್ಕೂಲ್' (ಉಚಿತ ಆಂಗ್ಲಶಾಲೆ) ತೆರೆದರು. ಅದು ತುಮಕೂರು ಜಿಲ್ಲೆಯನ್ನು ಒಳಗೊಂಡಿದ್ದ ಮೈಸೂರು ಸಂಸ್ಥಾನಕ್ಕೆ ಆ ಮಾದರಿಯ ಮೊಟ್ಟ ಮೊದಲ ಶಾಲೆಯಾಗಿತ್ತು. ಆದರೆ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಆಧುನಿಕ ಕಾಲದಲ್ಲಿ ಕ್ರಮಬದ್ಧವಾದ ಶೈಕ್ಷಣಿಕ ಚಟುವಟಿಕೆ ಪ್ರಾರಂಭವಾದದ್ದು ೧೮೫೪ರ ಸರ್ ಚಾರ್ಲ್ಸ್‌ವುಡ್‌ರ ವರದಿಯ ನಂತರವೇ, ಮೈಸೂರು ಸಂಸ್ಥಾನದಲ್ಲಿ ಹಾಗೂ ಅದೇ ಸಂಸ್ಥಾನಕ್ಕೆ ಸೇರಿದ್ದ ತುಮಕೂರು ಜಿಲ್ಲೆಯಲ್ಲಿಯೂ ಸಹ ಅಕಾಲದಲ್ಲಿ ಪ್ರಾರಂಭವಾಯಿತು. ಆ ಕಾಲದಲ್ಲಿ (೧೮೩೧–೧೮೮೧) ಮೈಸೂರು

ಸಂಸ್ಥಾನವು ಬ್ರಿಟೀಷರ ನೇರ ಆಡಳಿತದಲ್ಲಿತ್ತು. ಆಗ ಸಂಸ್ಥಾನದ ಜ್ಯುಡಿಷಿಯಲ್ ಕಮೀಷನರ್ ಆಗಿದ್ದ ಮಿ. ದೇವರಾ (Mr. Devereux) ಅವರು ರಾಜ್ಯದ ಶೈಕ್ಷಣಿಕ ಪ್ರಗತಿಗೆ ಯೋಜನೆಯೊಂದನ್ನು ತಯಾರಿಸಿ ಅದನ್ನು ಸರ್ಕಾರಕ್ಕೆ ಸಲ್ಲಿಸಿದರು. ಅದನ್ನು ತುಸು ಮಾರ್ಪಾಡಿನೊಂದಿಗೆ ಬ್ರಿಟಿಷ್ ಸರ್ಕಾರವು ಒಪ್ಪಿತು. ಮುಂದೆ, ಶಿಕ್ಷಣ ಇಲಾಖೆಯ ಉಚ್ಚ ಅಧಿಕಾರಿಯಾಗಿದ್ದ ಬಿ. ಲೂಯಿರೈಸ್ ಅವರ ಸಲಹೆಯಂತೆ ೧೮೬೮ರಲ್ಲಿ ಪ್ರತಿ 'ಹೋಬಳಿಗೊಂದು ಶಾಲೆ' ಎಂಬ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯಂತೆ ಪ್ರತಿ ಹೋಬಳಿಗೊಂದು ಶಾಲೆಯನ್ನು ಅಲ್ಲಿನ ಜನ ಬಯಸುವ ಕಡೆ ಸ್ಥಾಪಿಸಿ ಅದಕ್ಕೆ ಕಟ್ಟಡವನ್ನು ಕಟ್ಟಿಸಿಕೊಡಲು ಸರ್ಕಾರ ಮುಂದಾಯಿತು. ಮುಂದೆ ೧೮೭೧–೭೨ರಲ್ಲಿ ಪ್ರತಿ ತಾಲೂಕಿಗೊಂದರಂತೆ ಉನ್ನತ ಮಟ್ಟದ 'ವರ್ನಾಕ್ಯುಲರ್ ಸ್ಕೂಲ್' ಗಳನ್ನೂ ಸಹಾ ಪ್ರಾರಂಭಿಸಲಾಯಿತು.

ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಈ ಕಾಲಘಟ್ಟದಲ್ಲಿ ಅಂದರೆ ೧೯೦೦ ರವರೆಗೆ ನಡೆದ ಶೈಕ್ಷಣಿಕ ಪ್ರಗತಿಯ ಮುಖ್ಯಾಂಶಗಳೆಂದರೆ:– ೧)ತುಮಕೂರು ನಗರದಲ್ಲಿ ಪ್ರೌಢಶಾಲಾ ಹಂತದವರೆಗಿನ ಶಿಕ್ಷಣ ಕೊಡುವ ಶಾಲೆಯೊಂದರ ಸ್ಥಾಪನೆ, ೨)ಬಾಲಕಿಯರ ಶಿಕ್ಷಣಕ್ಕಾಗಿ ತುಮಕೂರಿನಲ್ಲಿ 'ಎಂಪ್ರೆಸ್ ಬಾಲಕಿಯರ ಶಾಲೆ'ಯ ಸ್ಥಾಪನೆ. ಇದು ಸಂಸ್ಥಾನದಲ್ಲಿ ಸ್ಥಾಪನೆಯಾದ ಅತ್ಯಂತ ಹಳೆಯ ಬಾಲಕಿಯರ ಶಾಲೆಗಳಲ್ಲೊಂದು. ೧೯೨೨–೨೩ರಲ್ಲಿ ಇದನ್ನು ಪ್ರೌಢಶಾಲೆಯ ಮಟ್ಟಕ್ಕೆ ಏರಿಸಲಾಯಿತು, ೩)ಈ ಶಾಲೆಯ ಅಧ್ಯಾಪಕರ ತರಬೇತಿಗಾಗಿ 'ಜಿಲ್ಲಾ ನಾರ್ಮಲ್ ಸ್ಕೂಲ್' ನ ಸ್ಥಾಪನೆ.

ಮೈಸೂರು ಸಂಸ್ಥಾನದ ಆಡಳಿತವನ್ನು ೧೮೮೧ರಲ್ಲಿ ಪುನಃ ರಾಜವಂಶಕ್ಕೆ ಒಪ್ಪಿಸಿದ ನಂತರ ನಿಧಾನವಾದ ಆದರೆ ದೃಢವಾದ ಶೈಕ್ಷಣಿಕ ಪ್ರಗತಿ ಮೈಸೂರು ರಾಜ್ಯದಲ್ಲಿ ಹಾಗೂ ತುಮಕೂರು ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಮೈಸೂರು ಸಂಸ್ಥಾನದಲ್ಲಿ ಗಮನಾರ್ಹ ಪ್ರಗತಿ ಆರಂಭವಾದದ್ದು ೧೯೧೧–೧೬ರ ಅವಧಿಯಲ್ಲಿ. ಶಿಕ್ಷಣ ಕ್ಷೇತ್ರದ ವಿಸ್ತರಣೆ ಮತ್ತು ಸುಧಾರಣೆಗಾಗಿ ಕೆಲವು ಹೊಸ ಚಿಂತನೆಗಳನ್ನು ಈ ಅವಧಿಯಲ್ಲಿ ಜಾರಿಗೊಳಿಸಲಾಯಿತು. ಕೆಲವು ಆಯ್ದ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದ್ದು, ಇದೇ ಅವಧಿಯಲ್ಲಿ ಎಸ್.ಎಸ್.ಎಲ್.ಸಿ., ಪರೀಕ್ಷಾ ವ್ಯವಸ್ಥೆಯನ್ನೂ ಸಹ ಜಾರಿಗೆ ತರಲಾಯಿತು. ಈ ವ್ಯವಸ್ಥೆ ದೇಶದ ಹಲವು ಭಾಗಗಳಲ್ಲಿ ಆಗಲೇ ಜಾರಿಗೆ ಬಂದಿತ್ತು. ಇಡೀ ಭಾರತದಲ್ಲಿ ದೇಸೀ ಸಂಸ್ಥಾನದ ವತಿಯಿಂದ ಪ್ರಾರಂಭವಾದ ಮೊಟ್ಟ ಮೊದಲ ವಿಶ್ವವಿದ್ಯಾಲಯವೆಂಬ ಹೆಗ್ಗಳಿಕೆಯ ಮೈಸೂರು ವಿಶ್ವವಿದ್ಯಾಲಯ ಪ್ರಾರಂಭಗೊಂಡಿದ್ದೂ ಸಹ ಇದೇ ಅವಧಿಯಲ್ಲಿ (೧೯೧೬). ಇದಲ್ಲದೆ, ಶಿಕ್ಷಣ ಇಲಾಖೆಯನ್ನು ಪುನರ್ ವ್ಯವಸ್ಥೆಗೊಳಿಸಿ ಶಿಕ್ಷಕರ ವೇತನವನ್ನು ಗಮನಾರ್ಹವಾಗಿ ಪರಿಷ್ಕರಿಸಲಾಯಿತು. ಈ ಎಲ್ಲ ಸುಧಾರಣೆಗಳ ಫಲ ತುಮಕೂರು ಜಿಲ್ಲೆಗೂ ಧಕ್ಕಿತು.

**ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ:** ಜನಸಂಖ್ಯೆ ಒಂದೇ ಸಮನೆ ಹೆಚ್ಚುತ್ತಿದ್ದರೂ ಸಹಾ ವ್ಯಾಪಕಗೊಳ್ಳುತ್ತಾ ಬಂದಿರುವ ಶೈಕ್ಷಣಿಕ ಸೌಲಭ್ಯಗಳಿಂದಾಗಿ ತುಮಕೂರು ಜಿಲ್ಲೆಯಲ್ಲಿಯೂ ಸಾಕ್ಷರತೆಯ ಪ್ರಮಾಣ ಏರುತ್ತಲೇ ಬಂದಿದೆ. ೧೯೫೧ರ ಜನಗಣತಿಯಲ್ಲಿ ಒಂದು ಸರಳ ಸಂದೇಶವನ್ನು ಯಾವುದಾದರೊಂದು ಭಾಷೆಯಲ್ಲಿ ಬರೆಯಬಲ್ಲ ಸಾಮರ್ಥ್ಯವನ್ನೇ ಸಾಕ್ಷರತೆ ಎಂದು ತೀರ್ಮಾನಿಸಿ, ಓದುವ ಬರೆಯುವ ಶಕ್ತಿಯುಳ್ಳ ಆದರೆ ಯಾವುದೇ ಪರೀಕ್ಷೆಯಲ್ಲೂ ಉತ್ತೀರ್ಣರಾಗದವರನ್ನೂ ಸಾಕ್ಷರರೆಂದು ಪರಿಗಣಿಸಲಾಯಿತು. ಓದಬಲ್ಲ ಆದರೆ ಬರೆಯಲಾಗದವರನ್ನು 'ಭಾಗಶಃ ಸಾಕ್ಷರರು' ಎಂದು ಪರಿಗಣಿಸಲಾಯಿತು. ೧೯೬೧ರ ಜನಗಣತಿಯಲ್ಲಿ 'ಓದು ಬರಹ ಎರಡೂ ಬಲ್ಲವರನ್ನು ಸಾಕ್ಷರರು ಎಂದು ವ್ಯಾಖ್ಯಾನಿಸಲಾಯಿತು. ಓದುವ ಸಾಮರ್ಥ್ಯ ಎಂದರೆ ಯಾವುದೇ ಮುದ್ರಿತ ಅಥವಾ ಹಸ್ತಲಿಖಿತ ಸರಳ ಪತ್ರವೊಂದನ್ನು ಓದಬಲ್ಲ ಸಾಮರ್ಥ್ಯ. ಬರಹದ ಸಾಮರ್ಥ್ಯ ಎಂದರೆ–ಸರಳ ಪತ್ರವೊಂದನ್ನು ಬರೆಯಬಲ್ಲ ಸಾಮರ್ಥ್ಯ ಎಂದು ಪರಿಗಣಿಸಲಾಯಿತು. ತುಮಕೂರು ಜಿಲ್ಲೆಯಲ್ಲಿ ಸಾಕ್ಷರತೆಯ ಶೇಕಡಾವಾರು ಪ್ರಮಾಣ ೧೯೪೧ರವರೆಗೂ ತುಂಬ ಕಡಿಮೆ ಪ್ರಮಾಣದಲ್ಲಿದ್ದು ನಂತರ ತೀವ್ರವಾಗಿ ಏರುತ್ತಾ ಬಂದಿದ್ದು ಅವುಗಳ ವಿವರ ಈ ಕೆಳಕಂಡಂತಿದೆ.

**ಕೋಷ್ಟಕ ೧೩.೦೧ ಜಿಲ್ಲೆಯ ಸಾಕ್ಷರತೆ ವಿವರ**

| ವರ್ಷ | ಜನಸಂಖ್ಯೆ | ಅಕ್ಷರಸ್ಥರು | ಸಾಕ್ಷರತೆಯ ಶೇಕಡಾವಾರು ಪ್ರಮಾಣ |
|---|---|---|---|
| ೧೯೧೧ | ೭,೫೯,೨೭೬ | ೪೨,೯೮ | ೫.೮ |
| ೧೯೨೧ | ೭,೭೬,೯೭೧ | ೫೨,೩೬೭ | ೬.೭ |

| | | | |
|---|---|---|---|
| ೧೯೩೧ | ೮,೬೩,೨೨೭ | ೭೨,೩೦೮ | ೮.೩ |
| ೧೯೪೧ | ೯,೫೫,೮೯೯ | ೧೦೯,೦೬೦ | ೧೧.೪ |
| ೧೯೫೧ | ೧೧,೩೧,೩೬೨ | ೨,೦೧,೨೮೫ | ೧೭.೫ |
| ೧೯೬೧ | ೧೩,೬೭,೪೦೨ | ೩,೦೯,೫೯೨ | ೨೨.೬೪ |
| ೧೯೭೧ | ಲಭ್ಯವಿಲ್ಲ | ೨೯.೩೬ | ಲಭ್ಯವಿಲ್ಲ |
| ೧೯೮೧ | ಲಭ್ಯವಿಲ್ಲ | ಲಭ್ಯವಿಲ್ಲ | ೩೬.೯೨ |
| ೧೯೯೧ | ಲಭ್ಯವಿಲ್ಲ | ಲಭ್ಯವಿಲ್ಲ | ೫೪.೪೮ |
| ೨೦೦೧ | ೨೫,೮೪,೭೧೧ | ೧೫,೨೫,೪೮೫ | ೬೭.೦೦ |
| ೨೦೧೧ | ಲಭ್ಯವಿಲ್ಲ | ಲಭ್ಯವಿಲ್ಲ | ೭೪.೩೨ |

**ಆಧಾರ: ೧. ತುಮಕೂರು ಜಿಲ್ಲಾ ಗ್ಯಾಸೆಟಿಯರ್ – ೧೯೬೯, ಪುಟ. ೪೬೮–೯, ೨. ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ–೨೦೦೯–೧೦, ಪುಟ ೯೬:**

೧೯೫೧ ರಿಂದ ಶಿಕ್ಷಣವು ಈ ಜಿಲ್ಲೆಯಲ್ಲಿ ಹೆಚ್ಚು ವೇಗದಲ್ಲಿ ಪಸರಿಸಿರುವುದು ಕಂಡುಬರುತ್ತದೆ. ವಿಶೇಷವಾಗಿ ೧೯೬೧ರಿಂದ ೨೦೦೧ರವರೆಗಿನ ನಲವತ್ತು ವರ್ಷಗಳ ಅವಧಿಯಲ್ಲಿ ಸಾಕ್ಷರತೆಯ ಪ್ರಮಾಣ ೨೨.೬% ದಿಂದ ೬೭%ಕ್ಕೆ ಏರಿದೆ. ೧೯೧೧–೧೯೫೧ರ ನಲವತ್ತು ವರ್ಷಗಳ ಅವಧಿಯಲ್ಲೂ ಶೇ. ೫.೮ ರಿಂದ ಶೇ. ೧೭.೫ರ ಮಟ್ಟಕ್ಕೆ ಏರಿದ್ದು, ಈ ಎರಡೂ ಕಾಲಘಟ್ಟಗಳಲ್ಲಿನ ಶಿಕ್ಷಣದ ಪ್ರಗತಿಯಲ್ಲಿ ವ್ಯತ್ಯಾಸವಿರುವುದು ಈ ಕೆಳಗಿನ ಕಾರಣಗಳಿಂದ ಕಂಡುಬರುತ್ತದೆ.

೧)೧೯೧೧–೫೧ರ ಅವಧಿಯಲ್ಲಿ 'ಸಾಕ್ಷರತೆ'ಯ ವ್ಯಾಖ್ಯೆ ಪದೇ ಪದೇ ಬದಲಾಗಿದೆ. ೨) ೧೯೫೧ರಿಂದ ಜನಸಂಖ್ಯೆ ತೀವ್ರಗತಿಯಲ್ಲಿ ಏರಿದೆ. ಆದರೂ ಹಿಂದಿನ ಶೇಕಡಾವಾರು ಪ್ರಮಾಣದಲ್ಲೇ ಸಾಕ್ಷರತೆ ಏರಿದೆ ಎಂದರೆ ಏರಿಕೆಯಾದ ಜನಸಂಖ್ಯೆಯ ಪ್ರಮಾಣದಲ್ಲೇ ಶೈಕ್ಷಣಿಕ ಸೌಲಭ್ಯಗಳನ್ನೂ ವಿಸ್ತಾರಗೊಳಿಸಲಾಗಿದೆ. ೩) ಕೇವಲ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸುವುದಷ್ಟೇ ಅಲ್ಲ, ೧೯೬೧–೨೦೧೧ರ ಅವಧಿಯಲ್ಲಿ ಅದನ್ನು ವೈವಿಧ್ಯಮಯವೂ ಶ್ರೀಮಂತವೂ ಆಗುವಂತೆ ಮಾಡಲಾಗಿದೆ. ಹಿಂದಿನ ಅವಧಿಯಲ್ಲಿ (೧೯೧೧–೫೧) ಇಲ್ಲದಿದ್ದ ಎಂಜಿನಿಯರಿಂಗ್, ವೈದ್ಯಕೀಯ, ದಂತವೈದ್ಯಕೀಯ ಶಿಕ್ಷಣಗಳು, ವಿವಿಧ ಬಗೆಯ ಸ್ನಾತಕೋತ್ತರ ಕೋರ್ಸುಗಳು, ವ್ಯವಹಾರ ಆಡಳಿತ (ಬಿಸಿನೆಸ್ ಮ್ಯಾನೇಜ್‌ಮೆಂಟ್) ಹಾಗೂ ಕಂಪ್ಯೂಟರ್ ಶಿಕ್ಷಣದ ಕೋರ್ಸುಗಳು ಈ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟು ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿವೆ. ತುಮಕೂರು ಜಿಲ್ಲೆಗಾಗಿಯೇ ಒಂದು ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ (೨೦೦೪). ಇದಲ್ಲದೆ– ಶಾಲೆಗಳು, ಪದವಿ ಪೂರ್ವ ಕಾಲೇಜುಗಳು ಹಾಗೂ ಪದವಿ ಕಾಲೇಜುಗಳ ಸಂಖ್ಯೆಯೂ ಹೆಚ್ಚಾಗಿದೆ. ಆದ್ದರಿಂದ ೧೯೬೧–೨೦೧೧ರ ಅವಧಿಯಲ್ಲಿನ ಸಾಕ್ಷರತೆಯ ಏರಿಕೆಯ ಪ್ರಮಾಣವು ೧೯೧೧–೫೧ರ ನಡುವಿನ ಅವಧಿಯ ಏರಿಕೆಯ ಪ್ರಮಾಣದಷ್ಟೇ ಇದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದರೂ ಇವುಗಳ ನಡುವೆ ಅಂತರವಿರುವುದನ್ನು ಕಾಣಬಹುದಾಗಿದೆ. ಗಹನವಾಗಿ ವಿಶ್ಲೇಷಿಸಿದಾಗ ೧೯೬೧–೨೦೧೧ರ ಅವಧಿಯಲ್ಲಿನ ಶಿಕ್ಷಣ ಹೆಚ್ಚು ಕ್ಲಿಷ್ಟವೂ ಗುಣಾತ್ಮಕವಾಗಿ ಶ್ರೀಮಂತವೂ ಆದುದಾಗಿದೆ.

ಗಂಡು–ಹೆಣ್ಣುಗಳ ಸಾಕ್ಷರತಾ ಪ್ರಮಾಣದಲ್ಲಿ ೧೯೫೧–೨೦೦೧ರ ನಡುವೆ ಗಮನಾರ್ಹ ಏರಿಕೆಯಾಗಿರುವುದಷ್ಟೇ ಅಲ್ಲದೆ, ಸಾಕ್ಷರತೆಯಲ್ಲಿಯ ಅಂತರ ಐವತ್ತು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ಸ್ವಲ್ಪ ಮಾತ್ರ ಕಡಿಮೆಯಾಗಿದೆ ಎಂಬುದು ಕಂಡುಬರುತ್ತದೆ. ವಿವರ ಈ ಕೆಳಗಿನಂತಿದೆ.

**ಕೋಷ್ಟಕ ೧೩.೦೧ ಜಿಲ್ಲೆಯ ಸಾಕ್ಷರತೆ ವಿವರ (ಮುಂದುವರೆದಿದೆ)**

| ವರ್ಷ | ಒಟ್ಟು ಸಾಕ್ಷರತೆಯ ಪ್ರಮಾಣ | ಪುರುಷರಲ್ಲಿ ಸಾಕ್ಷರತೆ | ಸ್ತ್ರೀಯರಲ್ಲಿ ಸಾಕ್ಷರತೆ | ವ್ಯತ್ಯಾಸ |
|---|---|---|---|---|
| ೧೯೫೧ | ೧೭.೪೮ | ೨೭.೫ | ೬.೯ | ೨೦.೬ |
| ೧೯೬೧ | ೨೨.೬೪ | ೮೩.೯ | ೧೦.೭ | ೨೩.೨ |

| | | | | |
|---|---|---|---|---|
| ೧೯೭೧ | ೨೯.೩೬ | ವಿವರ ಲಭ್ಯವಿಲ್ಲ | | |
| ೧೯೮೧ | ೩೬.೯೨ | | | |
| ೧೯೯೧ | ೫೪.೪೮ | ೬೬.೪೯ | ೪೧.೯೩ | ೨೪.೬೬ |
| ೨೦೦೧ | ೬೭.೦೦ | ೫೮.೧೬ | ೪೧.೮೩ | ೧೬.೩೩ |

**ಆಧಾರ : ೧.ತುಮಕೂರು ಜಿಲ್ಲಾ ಗೆಜೆಟಿಯರ್–೧೯೬೯. ೨. ತುಮಕೂರು ಜಿಲ್ಲಾ ಅಂಕಿ–ಅಂಶಗಳ ನೋಟ–೨೦೦೯–೧೦**

ಪುರುಷರು ಮತ್ತು ಸ್ತ್ರೀಯರ ಸಾಕ್ಷರತೆಯ ಶೇಕಡಾವಾರು ಪ್ರಮಾಣದ ಅಂತರವು ೧೯೫೧ ರಿಂದ ೧೯೯೧ರ ಅವಧಿಯಲ್ಲಿ ಏರಿಕೆಯಾಗಿದ್ದು, ೨೦೦೧ರ ವೇಳೆಗೆ ಈ ಅಂತರ ಸಾಕಷ್ಟು ಕಡಿಮೆಯಾಗಿರುವುದು ಕಂಡುಬರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಶಾಲೆಗಳ ಸ್ಥಾಪನೆ, ಬಡ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕಗಳ ವಿತರಣೆ, ಸಮವಸ್ತ್ರಗಳ ವಿತರಣೆ, ಬಸ್‌ಪಾಸ್ ಮುಂತಾದ ಸೌಲಭ್ಯಗಳು ಸಾಕ್ಷರತೆಯಲ್ಲಿಯ ಅಂತರದ ಇಳಿಕೆಗೆ ಕಾರಣವಾಗಿದೆ.

೨೦೦೧ ರಿಂದ ೨೦೧೧ರ ಅವಧಿಯಲ್ಲಿ ಹೆಚ್ಚು ಮಕ್ಕಳನ್ನು ಶಾಲೆಗೆ ಕರೆತರಲು ವಿದ್ಯಾರ್ಥಿನಿಯರಿಗೆ ಬೋಧನಾ ಶುಲ್ಕ ಮನ್ನಾ ಮಾಡಿರುವುದು, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಏರ್ಪಾಟನ್ನು ಕೇಂದ್ರ ಸರ್ಕಾರದ ನೆರವಿನಿಂದ ರಾಜ್ಯ ಸರ್ಕಾರ ವ್ಯಾಪಕವಾಗಿ ಕೈಗೊಂಡಿರುವುದು. ಹೈಸ್ಕೂಲು ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಣೆ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರವು ಹಮ್ಮಿಕೊಂಡಿದೆ. ಇವುಗಳಿಂದಾಗಿ ಶಾಲೆಯಲ್ಲಿ ಹಾಜರಾತಿ ಪ್ರಮಾಣ ಏರಿಕೆಯಾಗಿದೆ. ೨೦೧೧ರ ಗಣತಿಯ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿನ ಪುರುಷರ ಸಾಕ್ಷರತಾ ಪ್ರಮಾಣ ಶೇ. ೮೨.೮ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. ೬೭.೩೮ ಆಗಿದೆ. ಜಿಲ್ಲೆಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿನ ಸಾಕ್ಷರತೆಯಲ್ಲಿ ಅಂತರವಿರುವುದು ಕಂಡುಬರುತ್ತದೆ. ಆದರೆ ೧೯೯೧ ಮತ್ತು ೨೦೦೧ರ ಜನಗಣತಿಯ ಅಂಕಿ ಅಂಶಗಳನ್ನು ಹೋಲಿಸಿದಾಗ ಈ ಅಂತರ ಗಮನಾರ್ಹವಾಗಿ ಕಡಿಮೆಯಾಗಿರುವುದು ಕಂಡು ಬರುತ್ತದೆ. ವಿವರಗಳು ಈ ಕೆಳಕಂಡಂತಿದೆ.

### ಕೋಷ್ಟಕ ೧೩.೦೧ ಜಿಲ್ಲೆಯ ಸಾಕ್ಷರತೆ ವಿವರ (ಮುಂದುವರೆದಿದೆ)

| | ಗ್ರಾಮೀಣ ಸಾಕ್ಷರತೆ | | | ನಗರ ಸಾಕ್ಷರತೆ | | |
|---|---|---|---|---|---|---|
| **ವರ್ಷ** | **ಪುರುಷರು** | **ಮಹಿಳೆಯರು** | **ಒಟ್ಟು** | **ಪುರುಷ** | **ಮಹಿಳೆ** | **ಒಟ್ಟು** |
| ೧೯೯೧ | ೬೩.೧೨ | ೩೬.೯೮ | ೫೦.೨೩ | ೮೨.೫೧ | ೬೭.೭೯ | ೭೫.೬೧ |
| ೨೦೦೧ | ೭೪.೨೫ | ೫೨.೩ | ೬೩.೩೯ | ೮೬.೯ | ೭೬.೩೦ | ೮೧.೮೦ |
| ೨೦೧೧ | ೮೦.೪೮ | ೬೨.೭೧ | ೭೧.೬೬ | ೯೦.೯೩ | ೮೩.೬೭ | ೮೭.೩೨ |

**(ಆಧಾರ: ಸೆನ್ಸ್‌ಸ್ ಆಫ್ ಇಂಡಿಯಾ–೨೦೧೧).**

೧೯೯೧–೨೦೦೧ರ ಅವಧಿಯಲ್ಲಿ ಜಿಲ್ಲೆಯಲ್ಲಿ ಗ್ರಾಮೀಣ ಪುರುಷ ಸಾಕ್ಷರತೆ ಶೇ. ೧೧ರಷ್ಟು ಏರಿಕೆಯಾಗಿದ್ದರೆ, ನಗರದಲ್ಲಿ ಕೇವಲ ೪.೪ರಷ್ಟು ಏರಿಕೆಯಾಗಿದೆ. ಅದೇ ರೀತಿ ಮಹಿಳಾ ಸಾಕ್ಷರತೆ ಈ ಒಂದು ದಶಕದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ. ೧೬ರಷ್ಟು ಏರಿಕೆಯಾಗಿದ್ದರೆ, ನಗರ ಪ್ರದೇಶದಲ್ಲಿ ಕೇವಲ ಶೇ. ೯.೪೯ರಷ್ಟು ಏರಿಕೆಯಾಗಿದೆ. ಈ ದಶಕದಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ವ್ಯವಸ್ಥೆ ಹೆಚ್ಚು ವ್ಯಾಪಕವಾಗಿದೆ ಹಾಗೂ ಗ್ರಾಮೀಣ ಜನತೆ ಶಿಕ್ಷಣದ ಬಗ್ಗೆ ಹೆಚ್ಚು ಜಾಗೃತರಾಗಿದ್ದಾರೆ ಎಂದು ಇದರಿಂದ ಅರ್ಥವಾಗುತ್ತದೆ. ನಗರ ಪ್ರದೇಶದಲ್ಲಿ ಸಹಾ ೧೯೫೧ರ ಗಣತಿಯಂತೆ ಸಾಕ್ಷರರು ಶೇ. ೪೪.೩ ಹಾಗೂ ೧೯೬೧ರ ಗಣತಿ ಪ್ರಕಾರ ೪೮.೭ ರಷ್ಟಿದ್ದರು. ಅಂದರೆ ಆ ದಶಕದಲ್ಲಿ ನಗರದಲ್ಲಿ ಸಾಕ್ಷರರ ಸಂಖ್ಯೆ ಕೇವಲ ಶೇ. ೪೪ರಷ್ಟು ಮಾತ್ರ ಏರಿಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ೧೯೯೧ರಲ್ಲಿದ್ದ ಶೇ. ೭೫.೬೧ಕ್ಕಿಂತ ೨೦೦೧ರಲ್ಲಿದ್ದ ೮೧.೮ರ ಸಾಕ್ಷರತೆಯು ಶೇ. ೬.೨ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಶಿಕ್ಷಣವು ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ೧೯೬೧ರಿಂದ ೨೦೦೧ರ ಅವಧಿಯಲ್ಲಿ ಏರಿಕೆಯಾಗಿದೆ. ೨೦೦೧–೨೦೧೧ರ ದಶಕದಲ್ಲಿ ಇದು ಮತ್ತಷ್ಟು ಏರಿಕೆಯನ್ನು ಹೊಂದಿದೆ.

## ಕೋಷ್ಟಕ ೧೩.೦೨ ಜಿಲ್ಲೆಯ ತಾಲೂಕುವಾರು ಸಾಕ್ಷರತೆ ವಿವರ

| ಕ್ರಮ ಸಂಖ್ಯೆ | ತಾಲೂಕುಗಳು | ಅಕ್ಷರಸ್ಥರು | | | | | | | | |
|---|---|---|---|---|---|---|---|---|---|---|
| | | ಗ್ರಾಮೀಣ | | | ನಗರ | | | ಒಟ್ಟು | | |
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಚಿಕ್ಕನಾಯಕನ ಹಳ್ಳಿ | ೬೪೬೫೬ | ೫೨೬೫೭ | ೧೧೭೩೧೩ | ೧೫೦೪೯ | ೧೩೮೨೫ | ೨೮೮ | ೭೯೭೦೫ | ೬೬೪೮೨ | ೧೪೬೧೮೭ |
| ೨ | ಗುಬ್ಬಿ | ೮೯೬೯೦ | ೭೨೨೯೫ | ೧೬೧೯೮೫ | ೭೭೬೨ | ೭೨೫೦ | ೧೫೦೧೨ | ೯೭೪೫೨ | ೭೯೫೪೫ | ೧೭೬೯೯೭ |
| ೩ | ಕೊರಟಗೆರೆ | ೫೪೪೩೩ | ೪೨೦೬೨ | ೯೬೪೯೫ | ೬೦೫೭ | ೫೪೮೨ | ೧೧೫೩೯ | ೬೦೪೯೦ | ೪೭೫೪೪ | ೧೦೮೦೩೪ |
| ೪ | ಕುಣಿಗಲ್ | ೬೫೮೬೨ | ೪೮೭೮೨ | ೧೧೪೬೪೪ | ೧೩೬೨೮ | ೧೨೦೩೮ | ೨೫೬೬೬ | ೭೬೪೯೦ | ೬೦೮೨೦ | ೧೪೦೩೧೦ |
| ೫ | ಮಧುಗಿರಿ | ೮೪೧೦೦ | ೬೧೭೫೩ | ೧೪೫೮೫೩ | ೧೧೬೬೩ | ೧೦೫೦೮ | ೨೨೧೭೧ | ೯೫೭೬೩ | ೭೨೨೬೧ | ೧೬೮೦೨೪ |
| ೬ | ಪಾವಗಡ | ೭೩೭೦೬ | ೫೨೩೨೯ | ೧೨೬೦೩೫ | ೧೧೨೨೧ | ೯೬೦೮ | ೨೦೮೨೯ | ೮೪೯೨೭ | ೬೧೯೩೭ | ೧೪೬೮೬೪ |
| ೭ | ಶಿರಾ | ೯೧೪೪೯ | ೬೭೬೨೮ | ೧೫೯೦೭೭ | ೨೨೪೪೩ | ೨೦೧೩೫ | ೪೨೫೭೮ | ೮೭೭೬೩ | ೮೭೭೬೩ | ೨೦೧೬೫೫ |
| ೮ | ತಿಪಟೂರು | ೬೪೫೭೪ | ೫೪೦೪೬ | ೧೧೮೬೨೦ | ೨೪೬೮೫ | ೨೨೬೭೩ | ೪೭೩೫೮ | ೭೬೭೧೯ | ೭೬೭೧೯ | ೧೬೫೯೭೮ |
| ೯ | ತುಮಕೂರು | ೧೧೩೬೧೯ | ೮೫೨೯೯ | ೧೯೮೯೧೮ | ೧೨೬೦೬೫ | ೧೧೫೨೦೫ | ೨೪೧೨೭೦ | ೨೦೦೫೦೪ | ೨೦೦೫೦೪ | ೪೪೦೧೮೮ |
| ೧೦ | ತುರುವೇಕೆರೆ | ೫೮೨೩೩ | ೪೭೨೬೫ | ೧೦೫೪೯೮ | ೭೧೨೯ | ೬೫೨೭ | ೧೩೬೫೬ | ೫೩೭೯೨ | ೫೩೭೯೨ | ೧೧೯೧೫೪ |
| ಒಟ್ಟು | | ೭೬೦೩೨೨ | ೫೮೪೧೧೬ | ೧೩೪೪೪೩೮ | ೨೪೫೭೦೨ | ೨೨೩೨೫೧ | ೪೬೮೯೫೩ | ೮೦೭೩೬೭ | ೮೦೭೩೬೭ | ೧೮೧೩೯೧ |

## ಕೋಷ್ಟಕ ೧೩.೦೨ ಜಿಲ್ಲೆಯ ತಾಲೂಕುವಾರು ಸಾಕ್ಷರತೆ ವಿವರ (ಮುಂದುವರೆದಿದೆ)

| ಕ್ರಮ ಸಂಖ್ಯೆ | ತಾಲೂಕುಗಳು | ಸಾಕ್ಷರತಾ ಪ್ರಮಾಣ | | | | | | | | | |
|---|---|---|---|---|---|---|---|---|---|---|---|
| | | ಗ್ರಾಮೀಣ | | | ನಗರ | | | ಒಟ್ಟು | | | ರ್‍ಯಾಂಕ್ |
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | |
| ೧ | ಚಿಕ್ಕನಾಯಕನಹಳ್ಳಿ | ೮೨.೫೮ | ೬೬.೭೮ | ೭೪.೬೫ | ೯೦.೫೭ | ೮೦.೮೬ | ೮೫.೬೪ | ೮೩.೯೮ | ೬೯.೨೯ | ೭೬.೫೯ | ೪ |
| ೨ | ಗುಬ್ಬಿ | ೮೦.೯೬ | ೬೬.೦೭ | ೭೩.೫೬ | ೯೩.೨೫ | ೮೬.೪೩ | ೮೯.೮೩ | ೮೧.೮೨ | ೬೭.೫೨ | ೭೪.೭೧ | ೫ |
| ೩ | ಕೊರಟಗೆರೆ | ೭೯.೧೪ | ೬೧.೯೫ | ೭೦.೬೦ | ೮೯.೮೩ | ೮೦.೨೮ | ೮೫.೦೨ | ೮೦.೦೯ | ೬೩.೬೩ | ೭೧.೯೦ | ೬ |
| ೪ | ಕುಣಿಗಲ್ | ೭೬.೨೭ | ೫೫.೬೫ | ೬೫.೮೯ | ೮೯.೦೯ | ೮೦.೪೬ | ೮೪.೮೨ | ೭೮.೨೦ | ೫೯.೨೭ | ೬೮.೬೯ | ೮ |
| ೫ | ಮಧುಗಿರಿ | ೭೮.೦೭ | ೫೭.೮೯ | ೬೮.೦೩ | ೮೯.೪೨ | ೮೦.೧೯ | ೮೪.೭೯ | ೭೯.೩೦ | ೬೦.೩೩ | ೬೯.೮೫ | ೭ |
| ೬ | ಪಾವಗಡ | ೭೫.೦೫ | ೫೪.೦೦ | ೬೪.೬೦ | ೮೮.೩೩ | ೭೫.೩೬ | ೮೧.೮೩ | ೭೬.೫೭ | ೫೬.೪೮ | ೬೪.೩೨ | ೧೦ |
| ೭ | ಶಿರಾ | ೭೮.೬೧ | ೫೯.೬೩ | ೬೯.೨೪ | ೮೭.೪೭ | ೭೯.೯೯ | ೮೩.೭೭ | ೮೦.೨೧ | ೬೩.೩೨ | ೬೬.೫೮ | ೯ |
| ೮ | ತಿಪಟೂರು | ೮೭.೨೨ | ೭೨.೪೩ | ೭೯.೮೦ | ೯೧.೭೨ | ೮೪.೮೬ | ೮೮.೩ | ೮೮.೪೨ | ೭೫.೭೧ | ೮೨.೦೫ | ೨ |
| ೯ | ತುಮಕೂರು | ೮೩.೭೭ | ೬೭.೭೪ | ೭೬.೦೫ | ೯೧.೮೩ | ೮೫.೯೨ | ೮೮.೯೧ | ೮೭.೮೨ | ೭೭.೧೧ | ೮೨.೬೦ | ೧ |
| ೧೦ | ತುರುವೇಕೆರೆ | ೮೪.೯೧ | ೬೭.೩೯ | ೭೬.೦೫ | ೯೩.೫೦ | ೮೪.೬೫ | ೮೯.೦೫ | ೮೫.೭೭ | ೬೯.೧ | ೭೭.೩೪ | ೩ |
| ಒಟ್ಟು | | ೮೦.೪೮ | ೬೨.೭೧ | ೭೧.೬೬ | ೯೦.೯೩ | ೮೩.೬೭ | ೮೭.೩೨ | ೮೨.೮೧ | ೬೭.೩೮ | ೭೫.೧೪ | – |

**ಜಿಲ್ಲೆಯಲ್ಲಿ ಶೈಕ್ಷಣಿಕ ಆಡಳಿತ:–** ಹತ್ತು ತಾಲೂಕುಗಳನ್ನೊಳಗೊಂಡ ತುಮಕೂರು ಜಿಲ್ಲೆಯು ಒಂದೇ ಕಂದಾಯ ಜಿಲ್ಲೆಯಾಗಿದ್ದರೂ ಶೈಕ್ಷಣಿಕ ಆಡಳಿತದ ಅನುಕೂಲಕ್ಕಾಗಿ ತುಮಕೂರು ಜಿಲ್ಲೆಯನ್ನು ದಕ್ಷಿಣ ಮತ್ತು ಉತ್ತರ ವಲಯಗಳನ್ನಾಗಿ ವಿಂಗಡಿಸಿದೆ. ತುಮಕೂರು ಉತ್ತರ ವಲಯಕ್ಕೆ ಮಧುಗಿರಿ, ಶಿರಾ, ಪಾವಗಡ ಹಾಗೂ ಕೊರಟಗೆರೆ ತಾಲೂಕುಗಳು ಸೇರಿದ್ದು, ಮಧುಗಿರಿ ಆಡಳಿತ ಕೇಂದ್ರವಾಗಿದೆ. ಮಧುಗಿರಿಯಲ್ಲಿ ಉಪನಿರ್ದೇಶಕರ ಕಛೇರಿ ಮಾರ್ಚ್ ೨೦೦೧ ರಂದು

ಆರಂಭಗೊಂಡಿರುತ್ತದೆ. ತುಮಕೂರು ದಕ್ಷಿಣ ವಲಯಕ್ಕೆ ಉಳಿದ ಆರು ತಾಲೂಕುಗಳಾದ ತುಮಕೂರು, ಗುಬ್ಬಿ, ತುರುವೇಕೆರೆ, ತಿಪಟೂರು, ಕುಣಿಗಲ್, ಚಿಕ್ಕನಾಯ್ಕನಹಳ್ಳಿ ತಾಲೂಕುಗಳು ಸೇರಿದ್ದು ತುಮಕೂರು ಆಡಳಿತ ಕೇಂದ್ರವಾಗಿದೆ.

ಪ್ರತಿ ಶೈಕ್ಷಣಿಕ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು ಜಿಲ್ಲೆಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾರೆ. ಇವರ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಲಸ್ಟರ್ (ಸಮುದಾಯ) ಹಂತದಲ್ಲಿ ಸಮೂಹ ಸಹಾಯಕ ಶಿಕ್ಷಣಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ. ಜಿಲ್ಲಾ ಉಪನಿರ್ದೇಶಕರಿಗೆ ಕಾರ್ಯಾಲಯ ಸಹಾಯಕರಾಗಿ, ಪತ್ರಾಂಕಿತ ಸಹಾಯಕರು, ಕಾರ್ಯಾಲಯ ವ್ಯವಸ್ಥಾಪಕರಲ್ಲದೆ ಅಗತ್ಯವಾದ ಕಚೇರಿ ಸಿಬ್ಬಂದಿ, ಕಂಪ್ಯೂಟರ್ ಹಾಗೂ ಇಂಟರ್‌ನೆಟ್ ವ್ಯವಸ್ಥೆ, ಪ್ರಿಂಟರ್ ಹಾಗೂ ಬೆರಳಚ್ಚಿನ ಯಂತ್ರಗಳನ್ನು ಒದಗಿಸಲಾಗಿದೆ.

ಶೈಕ್ಷಣಿಕ ಆಡಳಿತಕ್ಕೆ ಸಹಕಾರಿಯಾಗುವಂತೆ ಪ್ರತಿ ಉಪನಿರ್ದೇಶಕರ ಕಚೇರಿಯಲ್ಲೂ ಇರುವ ವಿಷಯ ತಪಾಸಣಾಧಿಕಾರಿಗಳು ವಿವಿಧ ಶಾಲೆಗಳಿಗೆ ಭೇಟಿಕೊಟ್ಟು ಆಯಾ ವಿಷಯದ ಬೋಧನೆಯನ್ನು ವೀಕ್ಷಿಸಿ ಶಿಕ್ಷಕರಿಗೆ ಮಾರ್ಗದರ್ಶನ ಮಾಡುತ್ತಾರೆ ಹಾಗೂ ಕೆಲಸದ ಪ್ರಗತಿಯನ್ನು ಉಪನಿರ್ದೇಶಕರಿಗೆ ವರದಿ ಮಾಡುತ್ತಾರೆ. ತಾಲೂಕು ಮಟ್ಟದಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಯವರ ಆಡಳಿತದಡಿ ಶಾಲಾ ತನಿಖಾಧಿಕಾರಿಗಳು, ಇಬ್ಬರು ಸಹಾಯಕ ಶಿಕ್ಷಣಾಧಿಕಾರಿಗಳು, ತಾಲೂಕು ಮಟ್ಟದಲ್ಲಿ ಇರುವ ಒಂದು 'ಕ್ಷೇತ್ರ ಸಂಪನ್ಮೂಲ ಕೇಂದ್ರ' (ಬಿ.ಆರ್.ಸಿ.)ದ ಮೇಲ್ವಿಚಾರಕರಾಗಿ ಸಹಾಯಕ ಶಿಕ್ಷಣಾಧಿಕಾರಿ ದರ್ಜೆಯ ಅಧಿಕಾರಿ ಇರುತ್ತಾರೆ. ಈ 'ಕ್ಷೇತ್ರ ಸಂಪನ್ಮೂಲ ಕೇಂದ್ರ'ಗಳು ಎರಡು ದಶಕಗಳಿಂದೀಚೆಗೆ ಅಸ್ತಿತ್ವಕ್ಕೆ ಬಂದಿರುವ ತರಬೇತಿ ಕೇಂದ್ರಗಳು ಇವು ನೇರವಾಗಿ ಇಲಾಖೆಯ ಅಧೀನದಲ್ಲಿದ್ದು ತಮ್ಮ ವ್ಯಾಪ್ತಿಯಲ್ಲಿನ ಶಾಲಾ ಶಿಕ್ಷಕರಿಗೆ ಆಗಾಗ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತವೆ. ಇದಕ್ಕಾಗಿ ಅಗತ್ಯ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿಕೊಳ್ಳುತ್ತಾರೆ. ಇಲ್ಲಿ ವಿವಿಧ ಬೋಧನೋಪಕರಣಗಳು ಹಾಗೂ ಪುಸ್ತಕಗಳ ಸಂಗ್ರಹವಿರುತ್ತದೆ.

**ಪೂರ್ವ ಪ್ರಾಥಮಿಕ (ನರ್ಸರಿ) ಶಿಕ್ಷಣ ಸೌಲಭ್ಯಗಳು:** ೧೯೩೬ರಲ್ಲಿ ಸರ್ಕಾರವು ನರ್ಸರಿ ಶಿಕ್ಷಣದ ಸಮಸ್ಯೆ ಕುರಿತು ಅಧ್ಯಯನ ಮಾಡಿ ವರದಿ ನೀಡಲು ವಿಶೇಷ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿ ನೀಡಿದ ವರದಿಯು ಈ ಹಂತದ ಶಿಕ್ಷಣದ ಬುನಾದಿಗೆ ನೆರವಾಯಿತು. ಈ ಹಂತದ ಶಿಕ್ಷಣದಲ್ಲಿ ಮೊದಲು ಸರ್ಕಾರ ನೇರವಾಗಿ ಭಾಗವಹಿಸುತ್ತಿರಲಿಲ್ಲ. ಪ್ರೋತ್ಸಾಹಕನಾಗಿ ಕೆಲಸ ಮಾಡುತ್ತಾ ಮಾನ್ಯತೆ ಪಡೆದ ನರ್ಸರಿ ಶಿಕ್ಷಣ ಶಾಲೆಗಳಿಗೆ ಒಟ್ಟು ಖರ್ಚಿನ ಶೇ. ೭೦ರಷ್ಟು ಸಹಾಯಧನವನ್ನು ನೀಡುವ ನೀತಿ ಹೊಂದಿತ್ತು. ೧೯೬೦ರ ದಶಕದಲ್ಲಿ ರಾಜ್ಯ ಸರ್ಕಾರದ ನೀತಿ ಈ ಬಗ್ಗೆ ಇನ್ನಷ್ಟು ಉದಾರವಾಯಿತು. ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬಾಲವಾಡಿಗಳೆಂಬ ಹೆಸರಿನಲ್ಲಿ ಸರ್ಕಾರವು ಅಲ್ಲಲ್ಲಿ ಪೂರ್ವಪ್ರಾಥಮಿಕ ಶಾಲೆಗಳನ್ನು ತೆರೆಯಿತು. ಮಕ್ಕಳಲ್ಲಿ ಕಲಿಕೆಯ ಬಗ್ಗೆ ಆಸಕ್ತಿ ಬೆಳೆಸುವುದು, ಮುಂದಿನ ಶಾಲಾ ಜೀವನಕ್ಕೆ ಇವರನ್ನು ತಯಾರು ಮಾಡುವುದು ಇದರ ಮುಖ್ಯ ಉದ್ದೇಶವಾಗಿತ್ತು. ೧೯೫೬ ರಿಂದ ೧೯೬೭ರ ತುಮಕೂರು ಜಿಲ್ಲೆಯಲ್ಲಿದ್ದ ಮಾನ್ಯತೆ ಪಡೆದ ಪೂರ್ವಪ್ರಾಥಮಿಕ ಶಿಕ್ಷಣ ಕೇಂದ್ರಗಳ ವಿವರ ಈ ಕೆಳಕಂಡಂತಿದೆ.

| ವರ್ಷ | ಪೂ.ಪ್ರಾ.ಶಿಕ್ಷಣ ಕೇಂದ್ರಗಳ ಸಂಖ್ಯೆ | ಷರಾ |
|---|---|---|
| ೧೯೫೬ | ೦೫ | -- |
| ೧೯೬೧ | ೦೮ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೪೫೦ |
| ೧೯೬೭ | ೧೨ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೯೫೫ |

ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ – ೧೯೬೮. ಪು. ೪೭೨

ತುಮಕೂರು ನಗರ ೦೫, ಮಧುಗಿರಿ ೦೩, ತಿಪಟೂರು ೦೨, ತುರುವೇಕೆರೆ ಪಟ್ಟಣದಲ್ಲಿ ೦೧ ಹಾಗೂ ಅದೇ ತಾಲ್ಲೂಕಿನ ಬಾಣಾವರದಲ್ಲಿ ೦೧

೧೯೭೪ರ ವೇಳೆಗೆ ಪೂರ್ವ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ ೭೮ ಆಗಿತ್ತು. (ಆಧಾರ: ತುಮಕೂರು ಜಿಲ್ಲಾ ದರ್ಶನ ೧೯೮೧. ಪು. ೪೫೭) ೧೯೮೦ರ ದಶಕದಲ್ಲಿ ಕೇಂದ್ರ ಸರ್ಕಾರ ಇತ್ತ ಗಮನಹರಿಸಿ ನೆರವು ನೀಡಿದ್ದರಿಂದ ರಾಜ್ಯ ಸರ್ಕಾರದ ಆಸಕ್ತಿಗೆ ಹೆಚ್ಚಿನ ಬಲ ಬಂದಿತು. ಇದಕ್ಕೂ ಮೊದಲಿನಿಂದಲೇ 'ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ' ರಾಜ್ಯದಲ್ಲಿದ್ದರೂ ಅದಕ್ಕೆ ರಾಜ್ಯ ಸರ್ಕಾರದ ಸೀಮಿತ ಅನುದಾನದಿಂದಾಗಿ ಹೆಚ್ಚಿನ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಕೇಂದ್ರ ಸರ್ಕಾರ ಆ ದಶಕದಲ್ಲಿ 'ಸಮಗ್ರ ಶಿಶು ಕಲ್ಯಾಣ ಯೋಜನೆಯನ್ನು' ಜಾರಿಗೆ ತಂದು ಅನುದಾನವನ್ನೂ ನೀಡಿದ್ದರಿಂದ ತುಂಬಾ ಲಾಭವಾಯಿತು. 'ಅಂಗನವಾಡಿ' ಗಳೆಂಬ ಹೆಸರಿನಲ್ಲಿ ಪೂರ್ವಪ್ರಾಥಮಿಕ ಶಿಕ್ಷಣ ಕೇಂದ್ರಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪಿಸಲಾಯಿತು. ಅಲ್ಲಿ ಕೇವಲ ಶಿಕ್ಷಣವನ್ನೇ ಅಲ್ಲದೆ ಪೌಷ್ಠಿಕ ಆಹಾರ, ಆರೋಗ್ಯ ತಪಾಸಣೆಯಂತಹ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯು ಈ ಕೇಂದ್ರಗಳನ್ನು ನಿರ್ವಹಿಸುತ್ತಿದ್ದು ಇವುಗಳ ಮೇಲ್ವಿಚಾರಣೆಗೆಂದೇ ಪ್ರತ್ಯೇಕ ಅಧಿಕಾರಿಗಳಿದ್ದಾರೆ. ೨೦೧೦ರ ಮಾರ್ಚ್ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿನ ಅಂಗನವಾಡಿಗಳ ಒಟ್ಟು ಸಂಖ್ಯೆ ೪೦೮೧ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ೨೦೧೦ ಮಾರ್ಚ್ ತಿಂಗಳಿನಲ್ಲಿದ್ದ ಅಂಗನವಾಡಿಗಳ ಸಂಖ್ಯೆ ಹೀಗಿದೆ.

ಚಿಕ್ಕನಾಯಕನಹಳ್ಳಿ – ೩೬೫, ಗುಬ್ಬಿ – ೪೬೪, ಕೊರಟಗೆರೆ – ೨೯೦, ಕುಣಿಗಲ್ –೩೯೩, ಮಧುಗಿರಿ – ೪೩೦, ಪಾವಗಡ – ೩೨೯, ಶಿರಾ – ೪೬೩, ತಿಪಟೂರು – ೩೪೩, ತುಮಕೂರು – ೭೨೭, ತುರುವೇಕೆರೆ –೩೨೮, ಒಟ್ಟು– ೪೦೮೧ **(ಆಧಾರ: ತುಮಕೂರು ಜಿಲ್ಲಾ ಅಂಕಿ–ಆಂಶಗಳ ನೋಟ–೨೦೦೯–೧೦: ಪು. ೭೬)**

ಇವುಗಳಲ್ಲದೆ ಖಾಸಗಿಯವರು ನಡೆಸುವ ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರಗಳೂ ಕೆಲಸ ಮಾಡುತ್ತಿವೆ. ಕರ್ನಾಟಕ ಸರ್ಕಾರ ೧೯೭೮ರಲ್ಲಿ ಜಾರಿಗೆ ತಂದ ಸಮಗ್ರ ಶಿಕ್ಷಣ ಕಾಯ್ದೆಯ ಪ್ರಕಾರ ಖಾಸಗಿಯವರೂ ಸಹಾ ಅಂಥ ಶಾಲೆಗಳನ್ನು ಆರಂಭಿಸುವ ಮುನ್ನ ಶಿಕ್ಷಣ ಇಲಾಖೆಗೆ ಐದು ಸಾವಿರ ರೂಪಾಯಿ ಶುಲ್ಕ ಕಟ್ಟಿ ನೋಂದಣಿ ಮಾಡಿಸಿ ಅನುಮತಿ ಪಡೆಯಬೇಕೆಂಬ ನಿಯಮ ಬಂದಿತು.

## ಪ್ರಾಥಮಿಕ ಶಿಕ್ಷಣ

೧೯೩೦ರ 'ಮೈಸೂರು ಪ್ರಾಥಮಿಕ ಶಿಕ್ಷಣ ನಿಯಂತ್ರಣ ಕಾನೂನು' ಪ್ರಕಾರ ಪ್ರಾಥಮಿಕ ಶಿಕ್ಷಣವನ್ನು ವ್ಯಾಪಕಗೊಳಿಸುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಲಾಗಿತ್ತು. ಅದಕ್ಕಾಗಿ ಅವು ತೆರಿಗೆ ವಿಧಿಸಲೂ ಅವಕಾಶ ಕಲ್ಪಿಸಲಾಗಿತ್ತು. ಆದರೆ ಈ ಮೂಲಕ ತೀರಾ ಕಡಿಮೆ ಪ್ರಗತಿ ಆದದ್ದು ಕಂಡು ಬಂದದ್ದರಿಂದ ೧೯೪೧ ಫೆಬ್ರವರಿಯಲ್ಲಿ 'ಪ್ರಾಥಮಿಕ ಶಿಕ್ಷಣ ಕಾಯಿದೆ' ಯನ್ನು ಅನುಮೋದಿಸಲಾಯಿತು. ಅದು ಆ ವರ್ಷದ ಜುಲೈ ಒಂದರಿಂದ ಜಾರಿಗೆ ಬಂದಿತು. ಈ ಕಾಯಿದೆಯು ಬಯಲು ಸೀಮೆಯಲ್ಲಿ ಪ್ರತಿ ಐದುನೂರು ಜನಸಂಖ್ಯೆಗೆ ಒಂದರಂತೆ ಹಾಗೂ ಮಲೆನಾಡಿನಲ್ಲಿ ಪ್ರತಿ ೩೦೦ ಜನರಿಗೆ ಒಂದರಂತೆ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವ ಗುರಿ ಹೊಂದಿತ್ತು. ಈ ಕಾರಣದಿಂದಾಗಿ ಶಾಲೆಗಳ ಸಂಖ್ಯೆ ಹಾಗೂ ಅಲ್ಲಿಗೆ ಸೇರುವ ಮಕ್ಕಳ ಸಂಖ್ಯೆ ಹೆಚ್ಚಾಯಿತು. ಆದರೆ ನಾಲ್ಕು ವರ್ಷಗಳ ಪೂರ್ಣ ಅವಧಿಯನ್ನು ಶಾಲೆಯಲ್ಲಿ ಕಳೆಯದೆ ಮಧ್ಯದಲ್ಲೇ ಬಿಡುವವರ ಸಂಖ್ಯೆಯೂ ಹೆಚ್ಚಿತ್ತು. ಶಾಲೆಯಲ್ಲಿ ಭಾಷೆ, ಚರಿತ್ರೆ ಭೂಗೋಳ, ಪೌರನೀತಿ, ಗಣಿತಗಳ ಜೊತೆಗೆ ಚಿತ್ರಕಲೆ, ಸಂಗೀತ ಹಾಗೂ ಪ್ರಕೃತಿಯ ಅಧ್ಯಯನವನ್ನು ಕೂಡಾ ಹೇಳಿಕೊಡುತ್ತಿದ್ದರು. ಅನಂತರದಲ್ಲಿ ವಿವಿಧ ಆಯೋಗಗಳ ಶಿಫಾರಸುಗಳ ಆಧಾರದ ಮೇಲೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಅನೇಕ ಬದಲಾವಣೆಗಳಾಗಿರುತ್ತವೆ.

ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ೧೯೪೧ರಿಂದಲೂ ಸಾಕಷ್ಟು ಪ್ರಗತಿಯುಂಟಾಗಿದೆ. ೧೯೬೧ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆ ಜಾರಿಗೆ ಬಂದ ನಂತರ ಶಿಕ್ಷಣದಲ್ಲಿ ಪ್ರಗತಿ ಹೆಚ್ಚಾಗಿದೆ. ವಿವಿಧ ವರ್ಷಗಳಲ್ಲಿ ಜಿಲ್ಲೆಯಲ್ಲಿದ್ದ ಪ್ರಾಥಮಿಕ ಶಾಲೆಗಳ ಸಂಖ್ಯೆ ಹೀಗಿದೆ.

**ಕೋಷ್ಟಕ ೧೩.೦೩ ಜಿಲ್ಲೆಯ ಪ್ರಾಥಮಿಕ ಶಾಲೆಗಳ ವಿವರ**

| ವರ್ಷ | ಶಾಲೆಗಳ ಸಂಖ್ಯೆ |
|---|---|
| ೧೯೪೦–೪೧ | ೮೫೧ |
| ೧೯೪೩–೪೪ | ೯೭೭ |
| ೧೯೫೬–೫೭ | ೧೩೮೬ |
| ೧೯೬೦–೬೧ | ೧೪೧೨ |
| ೧೯೬೭–೬೮ | ೧೯೦೩ |
| ೨೦೦೮–೦೯ | ೨೨೯೬ |
| ೨೦೦೯–೧೦ | ೨೩೪೯ |

**ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ: ೨೦೦೮–೦೯. ಪು. ೫೩: ೨೦೦೯–೧೦– ಪು.೬೦**

೧೯೬೦-೬೧ ಮತ್ತು ೨೦೦೯-೧೦ರಲ್ಲಿದ್ದ ಕಿರಿಯ ಪ್ರಾಥಮಿಕ ಶಾಲೆಗಳು ಹಾಗೂ ವಿದ್ಯಾರ್ಥಿಗಳ ಸಂಖ್ಯೆಗಳನ್ನು ತುಲನಾತ್ಮಕವಾಗಿ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೦೩ ಜಿಲ್ಲೆಯ ಪ್ರಾಥಮಿಕ ಶಾಲೆಗಳ ವಿವರ(ಮುಂದುವರೆದಿದೆ)**

| ವರ್ಷ | ಶಾಲೆಗಳ ಒಟ್ಟು ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು |
| ೧೯೬೦-೬೧ | ೧೪೧೨ | ೪೮,೫೪೩ | ೨೧,೭೬೬ | ೭೦,೩೦೯ |
| ೧೯೬೭-೬೮ | ೧೯೦೩ | ೫೮,೮೮೬ | ೪೭,೧೫೦ | ೧೦೬,೦೩೬ |
| ೨೦೦೯-೧೦ | ೨೩೪೯ | ೬೦,೩೫೫ | ೫೭,೫೪೭ | ೧,೧೭,೯೦೨ |

೧೯೭೦ರ ವೇಳೆಗೆ ಕೇವಲ ಕಿರಿಯ ಪ್ರಾಥಮಿಕ ಶಾಲೆಗಳನ್ನು ಮಾತ್ರವೇ ತೆರೆಯುವ ಪದ್ಧತಿ ಬಹುಮಟ್ಟಿಗೆ ಕಣ್ಮರೆಯಾಯಿತು. ಹಿಂದೆ ಇದ್ದ ಕಿರಿಯ ಪ್ರಾಥಮಿಕ ಶಾಲೆಗಳನ್ನೂ ಸಹಾ ೫,೬,೭ನೇ ತರಗತಿಗಳನ್ನು ಸೇರಿಸುವ ಮೂಲಕ ಉನ್ನತೀಕರಿಸುವ ಕೆಲಸ ಭರದಿಂದ ಸಾಗಿತ್ತು. ಆದ್ದರಿಂದ ೧೯೬೮ ರಿಂದ ೨೦೧೦ರವರೆಗಿನ ೪೨ ವರ್ಷಗಳ ಅವಧಿಯಲ್ಲಿ ಕೇವಲ ೪೪೬ ಕಿರಿಯ ಪ್ರಾಥಮಿಕ ಶಾಲೆಗಳು ಮಾತ್ರವೇ ತೆರೆಯಲ್ಪಟ್ಟಿದ್ದಂತೆ ಅನ್ನಿಸಿದರೂ ಕಿರಿಯ ಪ್ರಾಥಮಿಕ ಶಾಲೆಗಳಾಗೇ ಉಳಿದುಕೊಂಡ ಶಾಲೆಗಳ ಸಂಖ್ಯೆಯನ್ನು ಮಾತ್ರ ಇಲ್ಲಿ ಕಾಣಿಸಿದೆ. ನೇರವಾಗಿ ಉನ್ನತ ಪ್ರಾಥಮಿಕ ಶಾಲೆಗಳಾಗಿ ಆರಂಭವಾದ ಅಥವಾ ಹಾಗೆ ಮಾರ್ಪಾಟು ಹೊಂದಿದ ಶಾಲೆಗಳ ಸಂಖ್ಯೆ ಇದರಲ್ಲಿ ಸೇರಿರುವುದಿಲ್ಲ. ಜಿಲ್ಲೆಯಲ್ಲಿ ೧೯೬೮ ಮತ್ತು ೨೦೧೦ರಲ್ಲಿದ್ದ ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶಿಕ್ಷಕರ ತಾಲೂಕವಾರು ವಿವರಗಳನ್ನು ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೦೪: ಜಿಲ್ಲೆಯ ತಾಲೂಕುವಾರು ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶಿಕ್ಷಕರು– ೨೦೦೯–೧೦**

| ಕ್ರ. ಸಂ. | ತಾಲೂಕಿನ ಹೆಸರು | ಕಿ.ಪ್ರಾ. ಶಾಲೆಗಳ ಸಂಖ್ಯೆ | | ಶಿಕ್ಷಕರ ಸಂಖ್ಯೆ | |
|---|---|---|---|---|---|
| | | ೧೯೬೮ | ೨೦೧೦ | ೧೯೬೮ | ೨೦೧೦ |
| ೧ | **ಚಿಕ್ಕನಾಯಕನಹಳ್ಳಿ** | ೧೬೨ | ೨೧೬ | ೨೦೭ | ೪೧೧ |
| ೨ | **ಗುಬ್ಬಿ** | ೧೯೨ | ೨೭೮ | ೨೪೦ | ೫೬೨ |
| ೩ | **ಕೊರಟಗೆರೆ** | ೧೩೦ | ೧೭೭ | ೧೮೩ | ೪೫೭ |
| ೪ | **ಕುಣಿಗಲ್** | ೧೭೩ | ೩೦೫ | ೨೦೮ | ೫೯೩ |
| ೫ | ಮಧುಗಿರಿ | ೧೭೧ | ೨೨೪ | ೨೩೬ | ೫೧೧ |
| ೬ | ಪಾವಗಡ | ೧೩೪ | ೧೨೬ | ೧೬೬ | ೩೦೬ |
| ೭ | ಶಿರಾ | ೨೦೩ | ೨೬೯ | ೨೫೨ | ೪೧೩ |
| ೮ | **ತಿಪಟೂರು** | ೧೫೫ | ೧೮೮ | ೨೦೫ | ೪೨೨ |
| ೯ | **ತುಮಕೂರು** | ೨೨೩ | ೩೩೨ | ೩೬೮ | ೭೮೯ |
| ೧೦ | **ತುರುವೇಕೆರೆ** | ೧೩೮ | ೨೨೮ | ೧೯೭ | ೪೧೪ |
| **ಒಟ್ಟು** | | **೨೩೪೩** | **೨೨೬೨** | **೨೩೦೨** | **೪೮೭೮** |

ಆಧಾರ: ೧. ೧೯೬೯ರ ತುಮಕೂರು ಜಿಲ್ಲಾ ಗ್ಯಾಸೆಟಿಯರ್. ೨. ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೯–೧೦

**ಕೋಷ್ಟಕ ೧೩.೦೫: ಜಿಲ್ಲೆಯ ತಾಲೂಕುವಾರು ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶಿಕ್ಷಕರು– ೨೦೧೩–೧೪**

| ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ | | | | | |
|---|---|---|---|---|---|
| ಕ್ರಮ ಸಂಖ್ಯೆ | ತಾಲೂಕು | | ಕಿರಿಯ ಪ್ರಾಥಮಿಕ ಶಾಲೆಗಳು | | |
| | | | ಒಟ್ಟು ದಾಖಲಾತಿ | | |
| | | | ಹುಡುಗರು | ಹುಡುಗಿಯರು | ಒಟ್ಟು |
| ೧ | **ಚಿಕ್ಕನಾಯಕನಹಳ್ಳಿ** | ೨೧೬ | ೭,೨೪೩ | ೭,೧೪೮ | ೧೪,೩೯೧ |
| ೨ | **ಗುಬ್ಬಿ** | ೨೬೪ | ೮,೯೦೦ | ೮,೫೮೧ | ೧೭,೪೮೧ |
| ೩ | **ಕೊರಟಗೆರೆ** | ೧೮೦ | ೨,೦೫೬ | ೨,೦೬೪ | ೪,೧೨೦ |
| ೪ | **ಕುಣಿಗಲ್** | ೩೦೨ | ೭,೭೪೫ | ೭,೧೬೬ | ೧೪,೯೧೧ |
| ೫ | **ಮಧುಗಿರಿ** | ೨೨೬ | ೨,೫೫೦ | ೨,೬೭೮ | ೫,೨೨೮ |
| ೬ | **ಪಾವಗಡ** | ೧೩೭ | ೨,೪೧೪ | ೨,೦೦೯ | ೪,೪೨೩ |
| ೭ | **ಶಿರಾ** | ೨೮೧ | ೩,೫೪೦ | ೩,೫೧೧ | ೭,೦೫೧ |
| ೮ | **ತಿಪಟೂರು** | ೧೮೭ | ೭,೭೪೧ | ೭,೩೩೧ | ೧೫,೦೭೨ |
| ೯ | **ತುಮಕೂರು** | ೩೧೦ | ೨೩,೮೯೬ | ೨೧,೫೯೬ | ೪೫,೪೯೨ |
| ೧೦ | **ತುರುವೇಕೆರೆ** | ೨೦೫ | ೫,೩೯೪ | ೫,೦೩೦ | ೧೦,೪೨೪ |
| | **ಜಿಲ್ಲಾ ಮೊತ್ತ** | **೨,೩೦೮** | **೭೧,೪೭೯** | **೬೭,೧೧೪** | **೧೩೮,೫೯೩** |

**ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೩–೧೪**

ಈ ತುಲನಾತ್ಮಕ ಅಂಕಿ ಅಂಶಗಳಿಂದ ಕಂಡುಬರುವುದೇನೆಂದರೆ ಪಾವಗಡ ತಾಲೂಕಿನಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೧೯೬೮ರಲ್ಲಿದ್ದುದ್ದಕ್ಕಿಂತ ಎಂಟು ಶಾಲೆಗಳು ಕಡಿಮೆಯಾಗಿದೆ. ಉಳಿದೆಲ್ಲಾ ತಾಲೂಕುಗಳಲ್ಲಿ ಈ ಶಾಲೆಗಳ ಸಂಖ್ಯೆ ವಿವಿಧ ಪ್ರಮಾಣಗಳಲ್ಲಿ ಹೆಚ್ಚಾಗಿದೆ. ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಶೇ. ೩೩.೩ರಷ್ಟು, ಗುಬ್ಬಿಯಲ್ಲಿ ಶೇ.೪೪.೭೯ ರಷ್ಟು, ಕೊರಟಗೆರೆ ತಾಲೂಕಿನಲ್ಲಿ ಶೇ. ೩೬.೧೫ ರಷ್ಟು, ಕುಣಿಗಲ್ ತಾಲೂಕಿನಲ್ಲಿ ಗರಿಷ್ಠ ಎಂದರೆ ಶೇ.೭೬.೩೦ ರಷ್ಟು ಪ್ರಮಾಣದಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಹೆಚ್ಚಾಗಿದೆ. ಮಧುಗಿರಿ ತಾಲೂಕಿನಲ್ಲಿ ಈ ಏರಿಕೆ ಶೇ.೩೧.೯೯ರಷ್ಟಿದ್ದರೆ ಶಿರಾ ತಾಲೂಕಿನಲ್ಲಿ ಶೇ. ೩೧.೦೩ರಷ್ಟು, ತುರುವೇಕೆರೆ ತಾಲೂಕಿನಲ್ಲಿ ಶೇ.೬೫.೨೧ರಷ್ಟು ಹೆಚ್ಚಿದೆ. ತುಮಕೂರು ತಾಲೂಕಿನಲ್ಲಿ ಶೇ.೪೮.೮ರಷ್ಟು ಹೆಚ್ಚಾಗಿದೆ. ತಿಪಟೂರು ತಾಲೂಕಿನಲ್ಲಿ ಕನಿಷ್ಠ ಪ್ರಮಾಣದ ಶೇ. ೨೧.೨೯ರಷ್ಟು ಏರಿಕೆ ಕಂಡುಬಂದಿದೆ. ಪಾವಗಡ ತಾಲೂಕಿನಲ್ಲಿ ಮಾತ್ರ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೧೯೬೮ಕ್ಕೆ ಹೋಲಿಸಿದರೆ ಶೇ. ೫.೯೭ರಷ್ಟು ಕಡಿಮೆಯಾಗಿದೆ.

ಕರ್ನಾಟಕ ಸರ್ಕಾರವು ೧೯೬೧ರಲ್ಲಿ ಜಾರಿಗೆ ತಂದ 'ಮೈಸೂರು ರಾಜ್ಯ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ' ಯಲ್ಲಿ ಪ್ರತಿ ಮಗುವಿನ ಮನೆಯಿಂದ ಒಂದು ಮೈಲಿ (೧.೬ಕಿ.ಮೀ.) ನಡಿಗೆಯ ಅಂತರದಲ್ಲಿ ಪ್ರಾಥಮಿಕ ಶಾಲೆ ಇರಬೇಕು ಎಂಬ ಯೋಜನೆಯನ್ನು ಜಾರಿಗೆ ತಂದ ಪರಿಣಾಮದಿಂದಾಗಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆಯಲ್ಲಿ ಏರಿಕೆಯಾಯಿತು. ಪ್ರತಿಯೊಂದು ಕಲಿಯುವ ವಯಸ್ಸಿನ ಮಗು ವಾಸಿಸುವ ಒಂದು ಕಿ.ಮೀ. ಆಸುಪಾಸಿನಲ್ಲಿ ಕನಿಷ್ಠ ಕಿರಿಯ ಪ್ರಾಥಮಿಕ ಶಾಲೆಯಾದರೂ ಇರಬೇಕು ಎಂಬುದು ಈ ಯೋಜನೆಯ ಉದ್ದೇಶವಾಗಿತ್ತು. ಅಷ್ಟು ಸಮೀಪದಲ್ಲಿ ಶಾಲೆ ತೆರೆಯಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಇದ್ದರೆ ಅಂತಹ ಮಕ್ಕಳನ್ನು ಶಾಲೆಗೆ ಕರೆತರುವ ಸಲುವಾಗಿ ವಾಹನ ವೆಚ್ಚವೆಂದು ಪಾಲಕರಿಗೆ ಪ್ರತಿ ಮಗುವಿಗೆ ತಿಂಗಳಿಗೆ ರೂ.೨೫೦/– ರಂತೆ ಪಾವತಿ ಮಾಡುವ ಅಧಿಕಾರವನ್ನು ಸರ್ಕಾರವು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಇತ್ತೀಚೆಗೆ ನೀಡಿ ಆದೇಶ ಹೊರಡಿಸಿದೆ. ಪ್ರತಿಯೊಂದು ಮಗುವಿಗೂ ಪ್ರಾಥಮಿಕ ಶಿಕ್ಷಣವನ್ನು ದೊರಕಿಸಿಕೊಡಬೇಕೆಂಬುದು ಸರ್ಕಾರದ ಆಶಯವಾಗಿದೆ. ಇಲ್ಲಿಯವರೆಗೆ ಒಂದರಿಂದ ನಾಲ್ಕನೇ ತರಗತಿಯವರೆಗೆ ಕಿರಿಯ ಪ್ರಾಥಮಿಕ ಶಾಲೆಗಳು ಎಂದು ಪರಿಗಣಿಸಿದ್ದನ್ನು ೨೦೧೧–೧೨ನೇ ಸಾಲಿನಿಂದ ಒಂದರಿಂದ ಐದನೇ ತರಗತಿಯವರೆಗೆ ಕಿರಿಯ ಪ್ರಾಥಮಿಕ ಶಾಲೆಗಳು ಎಂದು ಪರಿವರ್ತಿಸಲಾಗಿದೆ.

**ಕೋಷ್ಟಕ ೧೩.೦೬: ಜಿಲ್ಲೆಯ ಪ್ರಾಥಮಿಕ ಶಾಲೆ ಶಿಕ್ಷಕರ ಸಂಖ್ಯೆ ಹಾಗೂ ವಿದ್ಯಾರ್ಥಿ ಶಿಕ್ಷಕರ ಅನುಪಾತ**

| ಕ್ರಮ ಸಂಖ್ಯೆ | ಒಟ್ಟು ದಾಖಲಾತಿಗಳು | ಒಟ್ಟು ದಾಖಲಾತಿಗಳ ಸಂಖ್ಯೆ | ಪ್ರಾಥಮಿಕ ಶಾಲೆ ಶಿಕ್ಷಕರ ಸಂಖ್ಯೆ | | | ವಿದ್ಯಾರ್ಥಿ ಶಿಕ್ಷಕರ ಅನುಪಾತ |
|---|---|---|---|---|---|---|
| | | | ಪುರುಷರು | ಮಹಿಳೆಯರು | ಒಟ್ಟು | |
| ೧ | **ಚಿಕ್ಕನಾಯಕನಹಳ್ಳಿ** | ೧೯,೪೭೦ | ೫೪೪ | ೫೪೫ | ೧,೦೮೯ | ೧೭:೮೮ |
| ೨ | **ಗುಬ್ಬಿ** | ೨೪,೪೧೯ | ೫೯೦ | ೭೩೮ | ೧,೩೨೮ | ೧೮:೩೯ |
| ೩ | **ಕೊರಟಗೆರೆ** | ೧೬,೩೦೩ | ೩೮೯ | ೩೬೦ | ೭೪೯ | ೨೧:೭೭ |
| ೪ | **ಕುಣಿಗಲ್** | ೨೧,೫೬೮ | ೫೫೧ | ೬೨೫ | ೧,೧೭೬ | ೧೮:೩೪ |
| ೫ | **ಮಧುಗಿರಿ** | ೨೬,೨೩೮ | ೬೩೯ | ೪೪೩ | ೧,೦೮೨ | ೨೪:೨೫ |
| ೬ | **ಪಾವಗಡ** | ೨೫,೧೦೬ | ೪೬೧ | ೩೦೬ | ೭೬೭ | ೩೨:೭೩ |
| ೭ | **ಶಿರಾ** | ೩೩,೭೯೮ | ೭೩೧ | ೫೫೬ | ೧,೨೮೭ | ೨೬:೨೬ |
| ೮ | **ತಿಪಟೂರು** | ೨೧,೦೦೮ | ೩೯೦ | ೬೯೮ | ೧,೦೮೮ | ೧೯:೩೧ |
| ೯ | **ತುಮಕೂರು** | ೬೫,೫೩೦ | ೭೩೩ | ೨೨೯೩ | ೩,೦೨೬ | ೨೧:೬೯ |
| ೧೦ | **ತುರುವೇಕೆರೆ** | ೧೪,೯೫೦ | ೪೩೩ | ೪೫೯ | ೮೯೨ | ೧೬:೭೬ |
| | **ಜಿಲ್ಲಾ ಮೊತ್ತ** | **೨,೬೮,೩೯೦** | **೫,೪೬೧** | **೭,೦೨೩** | **೧೨,೪೮೪** | **೨೧:೫೦** |

ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೩–೧೪

## ಉನ್ನತ ಪ್ರಾಥಮಿಕ ಶಾಲೆಗಳು

ಈ ಹಿಂದೆ ಒಂದರಿಂದ ಏಳು ಅಥವಾ ಐದರಿಂದ ಏಳನೇ ತರಗತಿವರೆಗಿನ ಶಿಕ್ಷಣಕ್ಕೆ ಅವಕಾಶವಿದ್ದ ಶಾಲೆಗಳನ್ನು ಉನ್ನತ ಪ್ರಾಥಮಿಕ ಶಾಲೆಗಳೆಂದು ಕರೆಯಲಾಗುತ್ತಿತ್ತು. 'ಸರ್ವ ಶಿಕ್ಷಣ ಅಭಿಯಾನ' ಜಾರಿಗೆ ಬಂದ ನಂತರ ನಿಧಾನವಾಗಿ ಆರು, ಏಳು, ಎಂಟನೇ ತರಗತಿಗಳನ್ನು ಉನ್ನತ ಪ್ರಾಥಮಿಕ ಶಾಲೆಗಳೆಂದು ಕರೆಯಲಾಗುತ್ತಿದೆ. ಹೇಗಿದ್ದರೂ ಸಾಮಾನ್ಯ ವ್ಯವಹಾರದ ದೃಷ್ಟಿಯಿಂದ ಐದು, ಆರು, ಏಳನೇ ತರಗತಿಗಳು ಅಥವಾ ಒಂದರಿಂದ ಏಳು ತರಗತಿಗಳಿರುವ ಶಾಲೆಗಳನ್ನೇ ಉನ್ನತ ಪ್ರಾಥಮಿಕ ಶಾಲೆಗಳೆಂದು ಹೇಳಲಾಗುತ್ತಿದ್ದು, ಮುಂದೆ ಕಾಣಿಸಿರುವ ಅಂಕಿ ಅಂಶಗಳೂ ಸಹ ಆ ತರಗತಿಗಳಿಗೇ ಸಂಬಂಧಿಸಿದ್ದಾಗಿವೆ. ತುಮಕೂರು ಜಿಲ್ಲೆಯಲ್ಲಿ ೧೯೬೯ ರಿಂದ ೨೦೧೦ರವರೆಗಿನ ಅವಧಿಯಲ್ಲಿ ಅಗಾಧವಾದ ಪ್ರಗತಿಯನ್ನು ಸಾಧಿಸಿರುವುದು ಈ ಕೆಳಕಂಡ ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ.

| ವರ್ಷ | ಶಾಲೆಗಳ ಸಂಖ್ಯೆ | ಶಿಕ್ಷಕರು | ಮಕ್ಕಳು |
|---|---|---|---|
| ೧೯೬೭–೬೮ | ೨೯೭ | ೧೧೯೭ | ೪೫,೦೬೮ |
| ೨೦೦೯–೧೦ | ೧೬೮೩ | ೯೫೦೮ | ೨,೩೩,೩೮೧ |

**ಕೋಷ್ಟಕ ೧೩.೦೭: ೧೯೬೮ರಲ್ಲಿ ತುಮಕೂರು ಜಿಲ್ಲೆಯಲ್ಲಿದ್ದ ಉನ್ನತ ಪ್ರಾಥಮಿಕ ಶಿಕ್ಷಣದ ಪರಿಸ್ಥಿತಿ**

| ಕ್ರ.ಸಂ. | ತಾಲೂಕು | ಶಾಲೆಗಳ ಸಂಖ್ಯೆ | ಶಿಕ್ಷಕರು | ವಿದ್ಯಾರ್ಥಿಗಳು |
|---|---|---|---|---|
| ೧ | **ಚಿಕ್ಕನಾಯಕನಹಳ್ಳಿ** | ೩೭ | ೧೩೯ | ೪,೩೯೩ |
| ೨ | **ಗುಬ್ಬಿ** | ೩೧ | ೧೨೭ | ೫,೮೯೫ |
| ೩ | **ಕೊರಟಗೆರೆ** | ೨೪ | ೧೧೦ | ೩,೭೭೯ |
| ೪ | **ಕುಣಿಗಲ್** | ೧೯ | ೭೧ | ೨,೩೩೧ |
| ೫ | **ಮಧುಗಿರಿ** | ೨೪ | ೮೨ | ೪,೧೦೧ |

| | | | | |
|---|---|---|---|---|
| ೬ | **ಪಾವಗಡ** | ೨೩ | ೯೫ | ೩,೪೫೦ |
| ೭ | **ಶಿರಾ** | ೪೨ | ೧೬೮ | ೬,೧೯೨ |
| ೮ | **ತಿಪಟೂರು** | ೩೬ | ೧೩೯ | ೫,೩೨೬ |
| ೯ | **ತುಮಕೂರು** | ೩೧ | ೧೪೭ | ೫,೨೩೯ |
| ೧೦ | **ತುರುವೇಕೆರೆ** | ೩೦ | ೧೧೯ | ೪,೩೭೨ |
| | **ಒಟ್ಟು** | ೨೯೭ | ೧೧೯೭ | ೪೫,೦೬೮ |

**ಆಧಾರ: ಜಿಲ್ಲಾ ಗ್ಯಾಸೆಟಿಯರ್ – ೧೯೬೯, ಪು. ೪೭೬**

ಅಂದರೆ ಆಗ ಜಿಲ್ಲೆಯ ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಅನುಪಾತದ ಸರಾಸರಿಯು ೧:೩೭.೬೫ ಇತ್ತು ಹಾಗೂ ಪ್ರತಿ ಉನ್ನತ ಪ್ರಾಥಮಿಕ ಶಾಲೆಯಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆಯ ಸರಾಸರಿ ೧೫೧ ಆಗಿತ್ತು. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಜಿಲ್ಲಾ ಕೇಂದ್ರವಾದ ತುಮಕೂರು ನಗರವನ್ನೊಳಗೊಂಡಿರುವ ತುಮಕೂರಿನಲ್ಲಿದ್ದ ಶಾಲೆಗಳ ಸಂಖ್ಯೆ (೩೧)ಕ್ಕಿಂತ ಹೆಚ್ಚಿನ ಉನ್ನತ ಪ್ರಾಥಮಿಕ ಶಾಲೆಗಳು ಚಿಕ್ಕನಾಯಕನಹಳ್ಳಿ (೩೭), ತಿಪಟೂರು (೩೬) ಹಾಗೂ ಶಿರಾ (೪೨) ತಾಲೂಕುಗಳಲ್ಲಿದ್ದವು. ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಶಾಲೆಗಳ ಸಂಖ್ಯೆ ಹೆಚ್ಚಿದ್ದರೂ, ವಿದ್ಯಾರ್ಥಿಗಳ ಸಂಖ್ಯೆ ತುಮಕೂರು ತಾಲೂಕಿನಲ್ಲಿದ್ದುದಕ್ಕಿಂತ ೯೦೦ರಷ್ಟು ಕಡಿಮೆ ಇತ್ತು.

## ಕೋಷ್ಟಕ ೧೩.೦೮: ೨೦೦೯–೧೦ನೇ ಸಾಲಿನ ಉನ್ನತ ಪ್ರಾಥಮಿಕ ಶಾಲೆಗಳ ಅಂಕಿ ಅಂಶಗಳು (೩೧–೦೩–೨೦೧೦ ರವರೆಗೆ)

| ಕ್ರ. ಸಂ. | ತಾಲೂಕು | ಶಾಲೆಗಳು | | | | ಶಿಕ್ಷಕರು | ವಿದ್ಯಾರ್ಥಿಗಳು |
|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು | | |
| ೧ | **ಚಿಕ್ಕನಾಯಕನಹಳ್ಳಿ** | ೧೧೭ | ೭ | ೧೬ | ೧೪೦ | ೭೭೬ | ೧೫,೯೪೮ |
| ೨ | **ಗುಬ್ಬಿ** | ೧೫೪ | ೫ | ೧೩ | ೧೭೨ | ೯೨೯ | ೨೦,೭೪೭ |
| ೩ | **ಕೊರಟಗೆರೆ** | ೯೯ | ೩ | ೭ | ೧೦೯ | ೫೯೩ | ೧೨,೮೯೮ |
| ೪ | **ಕುಣಿಗಲ್** | ೧೩೦ | ೧೨ | ೧೯ | ೧೬೧ | ೮೩೯ | ೧೮,೬೨೪ |
| ೫ | **ಮಧುಗಿರಿ** | ೧೫೫ | ೦ | ೨೧ | ೧೭೬ | ೯೮೩ | ೨೪,೯೫೬ |
| ೬ | **ಪಾವಗಡ** | ೧೨೪ | ೨ | ೨೦ | ೧೪೬ | ೯೦೬ | ೨೪,೩೪೫ |
| ೭ | **ಶಿರಾ** | ೧೭೬ | ೧ | ೨೩ | ೨೦೦ | ೧೧೧೩ | ೨೮,೧೮೨ |
| ೮ | **ತಿಪಟೂರು** | ೧೦೩ | ೭ | ೩೩ | ೧೩೩ | ೭೧೦ | ೧೭,೬೯೫ |
| ೯ | **ತುಮಕೂರು** | ೨೧೨ | ೧೬ | ೧೦೩ | ೩೩೧ | ೨೦೭೮ | ೫೭,೫೯೬ |
| ೧೦ | **ತುರುವೇಕೆರೆ** | ೯೬ | ೫ | ೧೪ | ೧೧೫ | ೫೭೧ | ೧೨,೩೯೦ |
| **ಒಟ್ಟು** | | **೧೩೬೬** | **೫೮** | **೨೬೯** | **೧೬೮೩** | **೯೪೯೮** | **೨,೩೩,೩೮೧** |

**ಆಧಾರ: ತುಮಕೂರು ಉತ್ತರ ಹಾಗೂ ದಕ್ಷಿಣ ಶೈಕ್ಷಣಿಕ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಅಂಕಿ ಅಂಶಗಳು–೨೦೧೧**

ಸುಮಾರು ನಾಲ್ಕು ದಶಕಗಳ ಅಂತರದಲ್ಲಿ ತುಮಕೂರು ಜಿಲ್ಲೆಯಲ್ಲಿ ಉನ್ನತ ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚಿನ ಪ್ರಗತಿಯಾಗಿರುವುದು ವ್ಯಕ್ತವಾಗುತ್ತದೆ. ಇದರಿಂದ ತಿಳಿದು ಬರುವ ಅಂಶವೆಂದರೆ ೧) ಉನ್ನತ ಪ್ರಾಥಮಿಕ ಶಾಲೆಗಳ ಸಂಖ್ಯೆ ೧೯೬೮–೨೦೧೦ರವರೆಗಿನ ಅವಧಿಯಲ್ಲಿ ೨೯೭ ರಿಂದ ೧೩೬೬ ಕ್ಕೆ ಏರುವ ಮೂಲಕ ನಾಲ್ಕೂವರೆ ಪಟ್ಟು (ಶೇ. ೪೫೦ ರಷ್ಟು) ಪ್ರಗತಿ ಸಾಧಿಸಿದೆ. ೨) ಈ ಶಾಲೆಗಳ ಸಂಖ್ಯೆಯಲ್ಲಿ ಖಾಸಗಿ ಶಾಲೆಗಳು ೩೧೭ ಮಾತ್ರ ಇವೆ. ಅಂದರೆ ಶಾಲೆಗಳ ಒಟ್ಟು ಸಂಖ್ಯೆಯ ಶೇ. ೩೩.೩೮ರಷ್ಟು ಮಾತ್ರ ಖಾಸಗಿ ಶಾಲೆಗಳಿವೆ. ಸರ್ಕಾರಿ ಶಾಲೆಗಳ ಸಂಖ್ಯೆ ೧೧೪೯ ಇದ್ದು

ಶೇ. ೬೬.೬೨ರಷ್ಟು ಪಾಲು ಅವುಗಳದ್ದೇ ಆಗಿದೆ. ಈ ದಿಸೆಯಲ್ಲಿ ಸರ್ಕಾರದ ಕೆಲಸ ತೃಪ್ತಿಕರವಾಗಿರುವುದು ಕಂಡುಬರುತ್ತದೆ. ೩)ಶಿಕ್ಷಕರ ಸಂಖ್ಯೆ ೧೯೬೮ರಲ್ಲಿ ೧,೧೯೭ ಇದ್ದದ್ದು ೨೦೧೦ರಲ್ಲಿ ೯೫೦೮ ಆಗಿದೆ. ಅಂದರೆ ಎಂಟೂವರೆ ಪಟ್ಟು, (ಶೇ.೮೫೦ರಷ್ಟು) ಹೆಚ್ಚಾಗಿದೆ. ಅಂದರೆ ಶಾಲೆಗಳ ಸಂಖ್ಯೆಯಲ್ಲಿ ಏರಿಕೆಯಾಗಿರುವುದರ ಪ್ರಮಾಣದ ಹೆಚ್ಚೂ ಕಡಿಮೆ ಎರಡರಷ್ಟು ಪ್ರಮಾಣದಲ್ಲಿ ಶಿಕ್ಷಕರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ೪) ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಐದು ಪಟ್ಟಿಗಿಂತ ಸ್ವಲ್ಪ ಹೆಚ್ಚು ವೃದ್ಧಿಯಾಗಿದೆ.

ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೧೯೬೦–೨೦೧೦ರ ಅವಧಿಯಲ್ಲಿ ಎರಡು ಪಟ್ಟು (ಶೇ. ೨೦೦) ಕ್ಕಿಂತ ಕಡಿಮೆ ವೃದ್ಧಿಸಿದ್ದರೆ (೧೯೬೧ ರಲ್ಲಿ ೧೪೧೨; ೨೦೧೦ ರಲ್ಲಿ ೨೩೪೯), ಉನ್ನತ ಪ್ರಾಥಮಿಕ ಶಾಲೆಗಳ ಸಂಖ್ಯೆ ನಾಲ್ಕೂವರೆ ಪಟ್ಟು ವೃದ್ಧಿಸಿರುವುದು ಕಂಡುಬರುತ್ತದೆ. ಇದರಿಂದ ಕೇವಲ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಬದಲು ಉನ್ನತ ಪ್ರಾಥಮಿಕ ಶಾಲೆಗಳನ್ನು ತೆರೆಯುವತ್ತ ಹಾಗೂ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸುವತ್ತ ಗಮನ ಕೊಟ್ಟಿರುವುದು ಕಂಡುಬರುತ್ತದೆ.

## ಪ್ರೌಢಶಾಲೆಗಳು

ಜಿಲ್ಲೆಯಲ್ಲಿ ಪ್ರೌಢಶಾಲೆಗಳ ಸಂಖ್ಯೆ ಕೂಡಾ ಏರಿಕೆಯಾಗಿದೆ. ಈ ಹಂತದಲ್ಲಿ ಹಲವಾರು ಸುಧಾರಣೆಗಳನ್ನು ಸ್ವಾತಂತ್ರ್ಯನಂತರ ಪ್ರಯತ್ನಿಸಲಾಯಿತು. ಐಚ್ಛಿಕ ವಿಷಯಗಳ ಆಯ್ಕೆ, ಅವಕಾಶ, ವೃತ್ತಿ ತರಬೇತಿ ಕಲಿಯಲು ಅವಕಾಶ–ಇತ್ಯಾದಿಗಳನ್ನು ಕೆಲಕಾಲ ಒದಗಿಸಿ, ಬಳಿಕ ಕೊಠಾರಿ ಆಯೋಗದ ಶಿಫಾರಸ್ಸಿನನ್ವಯ ಅದನ್ನೆಲ್ಲಾ ೧೯೬೮–೭೦ರಲ್ಲಿ ತೆಗೆದು ಹಾಕಿ ಹತ್ತು ವರ್ಷಗಳ ಸಾಮಾನ್ಯ ಶಿಕ್ಷಣದ ಕೊನೆಯ ಭಾಗವಾಗಿ ಈ ಶಿಕ್ಷಣವನ್ನು ಇರಿಸಲಾಯಿತು. ಈಗಲೂ ಈ ಹಂತ ಅದೇ ರೀತಿ ಇದ್ದು (೮, ೯, ೧೦ನೇ ತರಗತಿಗಳ ಶಿಕ್ಷಣ ಇದರಲ್ಲಿ ಬರುತ್ತಿದೆ). ೧೯೪೩–೪೪ರಲ್ಲಿ ಇಡೀ ಜಿಲ್ಲೆಯಲ್ಲಿ ಕೇವಲ ನಾಲ್ಕು ಪ್ರೌಢಶಾಲೆಗಳಿದ್ದವು. ಇದರಲ್ಲಿ ಒಂದು ಬಾಲಕಿಯರ ಶಾಲೆಯಾಗಿತ್ತು. ೨೦೧೦ರ ಮಾರ್ಚ್ ೩೧ಕ್ಕೆ ಇವುಗಳ ಸಂಖ್ಯೆ ೬೭೪ಕ್ಕೆ ಏರಿದೆ. ೧೯೬೬–೬೭ರಲ್ಲಿ ಜಿಲ್ಲೆಯಲ್ಲಿದ್ದ ಪ್ರೌಢಶಾಲೆಗಳ ಸಂಖ್ಯೆ ೧೦೦. ಇದರಲ್ಲಿ ೯೦ ಶಾಲೆಗಳು ಬಾಲಕರಿಗೆ, ೧೦ ಬಾಲಕಿಯರಿಗಾಗಿ ಇದ್ದವು. ಕೇವಲ ಏಳು ಮಾತ್ರ ಸರ್ಕಾರಿ ಶಾಲೆಗಳಿದ್ದು, ಅವು–ತುಮಕೂರು, ಮಧುಗಿರಿ, ಕೊರಟಗೆರೆ, ಕುಣಿಗಲ್, ತಿಪಟೂರು, ಪಟ್ಟನಾಯಕನಹಳ್ಳಿ ಹಾಗೂ ಚಿಕ್ಕನಾಯಕನಹಳ್ಳಿಯಲ್ಲಿದ್ದವು. ಇವೆಲ್ಲವೂ ಬಾಲಕರ ಪ್ರೌಢಶಾಲೆಗಳಾಗಿದ್ದವು. ತುಮಕೂರು ಹಾಗೂ ಮಧುಗಿರಿಯಲ್ಲಿನ ಶಾಲೆಗಳು ನಾಲ್ಕು ವರ್ಷ ಅವಧಿಯ ಹೈಯರ್ ಸೆಕೆಂಡರಿ ಸರ್ಕಾರಿ ಪ್ರೌಢಶಾಲೆಗಳಾಗಿದ್ದು ಸ್ವಾತಂತ್ರ್ಯ ಪೂರ್ವದಲ್ಲೇ ಸ್ಥಾಪಿಸಲ್ಪಟ್ಟಿದ್ದವು. ಹೀಗೆ ಶಾಲೆಗಳ ಸಂಖ್ಯೆ ಹೆಚ್ಚಲು ಮುನಿಸಿಪಾಲಿಟಿಗಳು, ತಾಲೂಕ್ ಬೋರ್ಡ್ ಹಾಗೂ ಜಿಲ್ಲಾ ಬೋರ್ಡ್‌ಗಳು ಶಾಲೆಗಳನ್ನು ತೆರೆಯಲು ಆಸಕ್ತಿ ವಹಿಸಿದ್ದು ಹಾಗೂ ರಾಜ್ಯ ಸರ್ಕಾರವು ಅವುಗಳಿಗೆ ಕಟ್ಟಡ ಇತ್ಯಾದಿಗಳಿಗಾಗಿ ಉದಾರವಾಗಿ ನೆರವು ಕೊಟ್ಟಿದ್ದೇ ಕಾರಣ. ೧೯೬೬–೬೭ರಲ್ಲಿ ಜಿಲ್ಲೆಯಲ್ಲಿ ನಾಲ್ಕು ಮುನಿಸಿಪಲ್ ಹೈಯರ್ ಸೆಕೆಂಡರಿ ಶಾಲೆಗಳು ಗುಬ್ಬಿ, ತುರುವೇಕೆರೆ, ಪಾವಗಡ ಮತ್ತು ಶಿರಾ ಪಟ್ಟಣಗಳಲ್ಲಿದ್ದವು. ಅದೇ ಕಾಲಕ್ಕೆ ಜಿಲ್ಲೆಯಲ್ಲಿ ೧೬ ತಾಲೂಕು ಬೋರ್ಡ್ ಹೈಸ್ಕೂಲುಗಳಿದ್ದು ಇವುಗಳ ಪೈಕಿ ಒಂದು  ಶಾಲೆ ಮಾತ್ರ ಬಾಲಕಿಯರಿಗಾಗಿ ಇದ್ದು ಅದು ಕುಣಿಗಲ್‌ನಲ್ಲಿತ್ತು. ಉಳಿದ ಹದಿನೈದು ತಾಲೂಕು ಬೋರ್ಡ್ ಹೈಸ್ಕೂಲುಗಳಿದ್ದದ್ದು–ಗೋಡೆಕೆರೆ, ಹುಳಿಯಾರು (ಎರಡೂ–ಚಿಕ್ಕನಾಯಕನಹಳ್ಳಿ ತಾಲೂಕು), ನಾಗವಲ್ಲಿ (ತುಮಕೂರು ತಾಲೂಕು), ಮಿಡಿಗೇಶಿ (ಮಧುಗಿರಿ ತಾಲೂಕು), ಹುಲಿಯೂರುದುರ್ಗ ಮತ್ತು ನಾಗಸಂದ್ರ (ಎರಡೂ ಕುಣಿಗಲ್ ತಾಲೂಕು), ನೊಣವಿನಕೆರೆ, ಬಿಳಿಗೆರೆ, ಹೊನ್ನವಳ್ಳಿ ಹಾಗೂ ಹೋಗಲಕ್ಷ್ಮೀ ಕ್ಷೇತ್ರ (ಎಲ್ಲವೂ ತಿಪಟೂರು ತಾಲೂಕು) ಕಡಬ, ಚಂದ್ರಶೇಖರಪುರ ಹಾಗೂ ಚೇಲೂರು (ಗುಬ್ಬಿ ತಾಲೂಕು) ಮಾವಿನಕೆರೆ ಹಾಗೂ ದಬ್ಬೇಘಟ್ಟ (ಎರಡೂ ತುರುವೇಕೆರೆ ತಾಲೂಕು) ನಂತರ ೧೯೭೧–೭೨ರ ವೇಳೆಗೆ ಈ ಪ್ರೌಢಶಾಲೆಗಳನ್ನು ಸರ್ಕಾರವೇ ವಹಿಸಿಕೊಂಡಿತು. ಅಂದಿನಿಂದ ಇವು ಸರ್ಕಾರಿ ಶಾಲೆಗಳಾಗಿಯೇ ಮುಂದುವರೆದುಕೊಂಡು ಬಂದಿವೆ.

**ಅನುದಾನಿತ ಪ್ರೌಢಶಾಲೆಗಳು:** ಪ್ರೌಢಶಾಲೆಗಳನ್ನು ತೆರೆಯಲು ಖಾಸಗಿಯವರಿಗೆ ಉದಾರವಾಗಿ ಅನುದಾನವನ್ನು ಕೊಡುವ ನೀತಿಯನ್ನು ಸರ್ಕಾರ ಹೊಂದಿದ್ದರಿಂದ ಸ್ವಾತಂತ್ರ್ಯನಂತರ ಖಾಸಗಿ ಸಂಸ್ಥೆಗಳೂ ಸಹಾ ಹೆಚ್ಚು ಪ್ರೌಢಶಾಲೆಗಳನ್ನು ತೆರೆಯಲು ಮುಂದೆ ಬಂದವು. ರಾಜ್ಯ ಸರ್ಕಾರವು ಇದಕ್ಕಾಗಿಯೇ ಅನುದಾನ ಸಂಹಿತೆಯನ್ನು (ಗ್ರಾಂಟ್–ಇನ್–ಏಡ್ ಕೋಡ್) ರೂಪಿಸಿತ್ತು. ಅಂದಿನ ದಿನಗಳಲ್ಲಿ ಶಾಲೆಯ ಒಟ್ಟು ವೆಚ್ಚದ ಶೇ. ೮೫ರಷ್ಟನ್ನು ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿನ ಶಾಲೆಗಳಿಗೆ ಕೊಡಲಾಗುತ್ತಿತ್ತು. ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಕಡೆಗಳಲ್ಲಿ ಇರುವ

ಶಾಲೆಗಳಿಗೆ ಒಟ್ಟು ವೆಚ್ಚದ ಶೇ. ೮೦ರಷ್ಟು ಹಣವನ್ನು ಅನುದಾನವಾಗಿ ನೀಡಲಾಗುತ್ತಿತ್ತು. ಇದರ ಜೊತೆಗೆ–ಕಟ್ಟಡ ಹಾಗೂ ಉಪಕರಣಗಳಿಗಾಗಿಯೂ ಸಹಾ ಶೇ. ೫೦ರಷ್ಟು ವೆಚ್ಚವನ್ನು ಅನುದಾನವಾಗಿ ನೀಡಲಾಗುತ್ತಿತ್ತು. ಆದರೆ ಶಾಲೆಗಳ ಸಂಖ್ಯೆ ಹೆಚ್ಚಾದಂತೆ ೧೯೭೦ ರಿಂದ ಈಚೆಗೆ ಕೇವಲ ವೇತನಕ್ಕೆ ಬೇಕಾದಷ್ಟು ಹಣವನ್ನು ಮಾತ್ರ ಅನುದಾನವಾಗಿ ಕೊಡಲಾಗುತ್ತಿದೆ. ಶಾಲೆಯ ಸಾದಿಲ್ವಾರು ವೆಚ್ಚ, ಕಟ್ಟಡ ನಿರ್ಮಾಣ, ಉಪಕರಣಗಳ ಖರೀದಿ–ಇವೆಲ್ಲಕ್ಕೂ ಬೇಕಾದ ಹಣವನ್ನು ಆಯಾ ಖಾಸಗಿ ಶಾಲೆಗಳವರೇ ಹೊಂದಿಸಿಕೊಳ್ಳಬೇಕಾಗಿದೆ. ೧೯೬೬–೬೭ರ ವೇಳೆಗೆ ಜಿಲ್ಲೆಯಲ್ಲಿದ್ದ ಅನುದಾನಿತ ಪ್ರೌಢಶಾಲೆಗಳ ಸಂಖ್ಯೆ ೬೪. ಇದರಲ್ಲಿ ಏಳು ಶಾಲೆಗಳು ವಿದ್ಯಾರ್ಥಿನಿಯರಿಗೆ ಮೀಸಲಾಗಿದ್ದವು. ಇದೇ ರೀತಿ, ಆ ವರ್ಷದಲ್ಲಿದ್ದ ಅನುದಾನರಹಿತ ಪ್ರೌಢಶಾಲೆಗಳ ಸಂಖ್ಯೆ ಏಳು ಮಾತ್ರ. ಜಿಲ್ಲೆಯಲ್ಲಿನ ಪ್ರೌಢಶಾಲೆಗಳ ವಿವರ ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೩.೦೯: ಜಿಲ್ಲೆಯ ಪ್ರೌಢಶಾಲೆಗಳ ವಿವರ**

| ವರ್ಷ | ಪ್ರೌಢಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು |
| ೧೯೪೩–೪೪ | ೪ | ೧,೪೭೮ | ೧೫೪ | ೧,೬೩೨ |
| ೧೯೫೬–೫೭ | ೩೧ | ೫,೬೬೩ | ೭೫೪ | ೬,೪೧೭ |
| ೧೯೬೦–೬೧ | ೪೦ | ೮,೧೬೮ | ೧.೩೫೪ | ೯,೫೨೨ |
| ೧೯೬೬–೬೭ | ೧೦೦ | ೨೨,೦೦೮ | ೮,೭೨೫ | ೩೦,೭೩೩ |
| ೨೦೦೮–೦೯ | ೬೫೬ | ೭೩,೦೦೬ | ೬೪,೨೨೫ | ೧,೩೭,೨೩೧ |
| ೨೦೦೯–೧೦ | ೬೭೪ | ೬೯,೦೧೧ | ೬೦,೪೨೫ | ೧,೨೯,೪೩೬ |

**ಆಧಾರ: ೧) ೧೯೬೯ರ ತುಮಕೂರು ಜಿಲ್ಲಾ ಗ್ಯಾಸೆಟಿಯರ್ ೨) ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೮–೦೯ ಮತ್ತು ೨೦೦೯–೧೦;**

೧೯೬೬–೬೭ರಲ್ಲಿ ಜಿಲ್ಲೆಯಲ್ಲಿದ್ದ ಪ್ರೌಢಶಾಲೆಗಳ ಪಟ್ಟಿ ಕೆಳಕಂಡಂತಿದೆ

**ಕೋಷ್ಟಕ ೧೩.೧೦: ೧೯೬೬–೬೭ರಲ್ಲಿ ಜಿಲ್ಲೆಯಲ್ಲಿದ್ದ ಪ್ರೌಢಶಾಲೆಗಳ ವಿವರ**

| ಶಾಲೆಗಳ ವಿವರ | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | ಶಿಕ್ಷಕರು (ತರಬೇತಿ ಪಡೆದ) | | ತರಬೇತಿ ಪಡೆಯದ ಶಿಕ್ಷಕರು |
|---|---|---|---|---|---|---|
| | | ಬಾಲಕರು | ಬಾಲಕಿಯರು | ಪುರುಷ | ಸ್ತ್ರೀ | |
| **ಸರ್ಕಾರಿ** | ೯ | ೫,೦೨೧ | ೧,೭೧೧ | ೧೯೬ | ೮ | ೨೬ |
| **ಜಿಲ್ಲಾ ಮತ್ತು ತಾಲೂಕು ಬೋರ್ಡ್** | ೧೬ | ೨,೭೯೫ | ೬೫೦ | ೩೮ | ೧ | ೬೧ |
| **ಪುರಸಭೆ** | ೪ | ೧,೮೨೬ | ೭೬೮ | ೩೦ | – | ೩೧ |
| **ಖಾಸಗಿ (ಅನುದಾನಿತ ಮತ್ತು ಅನುದಾನ ರಹಿತ)** | ೭೧ | ೧೨,೩೬೬ | ೪,೫೯೬ | ೧೩೧ | ೨೫ | ೩೩೮ |
| **ಒಟ್ಟು** | ೧೦೦ | ೨೨,೦೦೮ | ೮,೭೨೫ | ೩೯೫ | ೩೪ | ೪೫೬ |

**ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್, ೧೯೬೯. ಪುಟ ೪೮೭ ರಲ್ಲಿನ ಎರಡು ಸಂಯೋಜನೆ**

### ಕೋಷ್ಟಕ ೧೩.೧೧: ೨೦೧೦ರ ಮಾರ್ಚ್ ಅಂತ್ಯದಲ್ಲಿದ್ದ ಪ್ರೌಢಶಾಲೆಗಳ ವಿವರ

| ಶಾಲೆಗಳ ವಿವರ | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು |
| **ಸರ್ಕಾರಿ** | ೨೩೪ | ೨೧,೭೨೪ | ೨೩,೩೨೦ | ೪೫,೦೪೦ |
| **ಅನುದಾನಿತ** | ೨೯೮ | ೩೭,೮೧೬ | ೨೯,೦೬೮ | ೬೬,೮೮೪ |
| **ಅನುದಾನರಹಿತ** | ೧೪೨ | ೯,೪೭೧ | ೮,೦೩೭ | ೧೭,೫೦೮ |
| **ಒಟ್ಟು** | ೬೭೪ | ೬೯,೦೧೧ | ೬೦,೪೨೫ | ೧,೨೯,೪೩೬ |

**ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ: ೨೦೦೯–೧೦. ಪು. ೬೨**

೪೨ ವರ್ಷಗಳ ಅವಧಿಯಲ್ಲಿ ಪ್ರೌಢ ಶಾಲೆಗಳ ಸಂಖ್ಯೆ ಶೇ. ೬೭೫ರಷ್ಟು ಹೆಚ್ಚಿದ್ದರೆ ಅವುಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ಐದು ಪಟ್ಟು ಹೆಚ್ಚಿದೆ. (೧೯೬೬ ರಲ್ಲಿ ೩೦,೭೩೩ ಇದ್ದದ್ದು ೨೦೧೦ರಲ್ಲಿ ೧,೨೯,೪೩೬ ಆಗಿದೆ). ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಾಂದ್ರತೆ ವಿದ್ಯಾರ್ಥಿ ಅನುಪಾತ ಹಿಂದೆ ಇದ್ದುದಕ್ಕಿಂತ ಈಗ ಉತ್ತಮಗೊಂಡಿರುವುದು ಕಂಡುಬರುತ್ತದೆ. ೨೦೦೯–೧೦ರಲ್ಲಿ ಜಿಲ್ಲೆಯಲ್ಲಿ ವಿದ್ಯಾರ್ಥಿ–ಶಿಕ್ಷಕರ ಸಂಖ್ಯೆಯನ್ನು (ಒಂದರಿಂದ ಹತ್ತನೇ ತರಗತಿವರೆಗಿನ ಒಟ್ಟು ವಿದ್ಯಾರ್ಥಿ–ಶಿಕ್ಷಕ ಸಂಖ್ಯೆಯನ್ನು ಅನುಲಕ್ಷಿಸಿ) ೧೯:೧ ರಷ್ಟಿದೆ (ಜಿಲ್ಲಾ ಅಂಕಿ ಅಂಶಗಳ ನೋಟ. ಪು. ೯೨). ಅಂದರೆ ಪ್ರತಿ ೧೯ ಮಕ್ಕಳಿಗೆ ಒಬ್ಬ ಶಿಕ್ಷಕರಿರುತ್ತಾರೆ.

### ಕೋಷ್ಟಕ ೧೩.೧೨: ಜಿಲ್ಲೆಯಲ್ಲಿ ೩೧–೦೩–೨೦೧೦ರ ಅಂತ್ಯಕ್ಕೆ ಪ್ರೌಢಶಾಲೆಗಳ ತಾಲೂಕುವಾರು ವಿವರ.

| | ಪ್ರೌಢಶಾಲೆಗಳು | | | | | | | | |
|---|---|---|---|---|---|---|---|---|---|
| | | ಸರ್ಕಾರಿ | | | | ಅನುದಾನಿತ | | | |
| ಕ್ರ.ಸಂ. | ತಾಲೂಕು | ಶಾಲೆಗಳು | ಬಾಲಕರು | ಬಾಲಕಿಯರು | ಒಟ್ಟು | ಶಾಲೆಗಳು | ಬಾಲಕರು | ಬಾಲಕಿಯರು | ಒಟ್ಟು |
| ೧ | **ಚಿಕ್ಕನಾಯಕನಹಳ್ಳಿ** | ೨೫ | ೧,೭೪೧ | ೧,೭೦೫ | ೩೪೪೬ | ೩೨ | ೨,೫೮೬ | ೨,೬೬೨ | ೫,೨೪೮ |
| ೨ | **ಗುಬ್ಬಿ** | ೨೫ | ೨,೮೮೨ | ೩,೦೭೫ | ೫,೯೫೭ | ೨೩ | ೨,೬೦೦ | ೨,೪೧೬ | ೫,೦೧೬ |
| ೩ | **ಕೊರಟಗೆರೆ** | ೨೧ | ೧,೬೧೬ | ೧,೭೦೯ | ೩,೩೨೫ | ೧೫ | ೧,೬೭೨ | ೧,೩೭೪ | ೩,೦೪೬ |
| ೪ | **ಕುಣಿಗಲ್** | ೩೦ | ೨,೭೫೨ | ೩,೨೧೦ | ೫,೯೬೨ | ೨೪ | ೨,೬೪೭ | ೨,೨೬೩ | ೪,೯೧೦ |
| ೫ | ಮಧುಗಿರಿ | ೨೮ | ೨,೦೨೨ | ೨,೦೦೨ | ೪,೦೨೪ | ೨೭ | ೩,೩೪೦ | ೩,೩೮೫ | ೬,೭೨೫ |
| ೬ | ಪಾವಗಡ | ೨೦ | ೨,೦೬೬ | ೧,೯೬೮ | ೪,೦೩೪ | ೨೯ | ೩,೧೨೯ | ೩,೨೧೨ | ೬,೩೪೧ |
| ೭ | ಶಿರಾ | ೨೮ | ೨,೬೩೮ | ೨,೯೮೨ | ೫,೬೨೦ | ೨೯ | ೨,೮೧೬ | ೨,೬೨೧ | ೫,೪೩೭ |
| ೮ | **ತಿಪಟೂರು** | ೧೭ | ೧,೮೬೪ | ೧,೭೦೫ | ೩,೫೬೯ | ೨೭ | ೨,೫೩೩ | ೨,೨೦೬ | ೪,೭೩೯ |
| ೯ | **ತುಮಕೂರು** | ೨೩ | ೨,೮೭೦ | ೩,೭೧೫ | ೬,೫೮೫ | ೬೩ | ೧೪,೪೫೨ | ೬,೯೬೯ | ೨೧,೪೩೧ |
| ೧೦ | **ತುರುವೇಕೆರೆ** | ೧೭ | ೧,೨೭೩ | ೧,೨೪೯ | ೨,೫೨೨ | ೨೪ | ೨,೦೪೧ | ೧,೯೫೦ | ೩,೯೯೧ |
| **ಒಟ್ಟು** | | ೨೩೪ | ೨೧,೭೨೪ | ೨೩,೩೨೦ | ೪೫,೦೪೪ | ೨೯೩ | ೩೭,೮೧೬ | ೨೯,೦೬೮ | ೬೬,೮೮೪ |

**ಕೋಷ್ಟಕ ೧೩.೧೨: ಜಿಲ್ಲೆಯಲ್ಲಿ ೩೧–೦೩–೨೦೧೦ರ ಅಂತ್ಯಕ್ಕೆ ಪ್ರೌಢಶಾಲೆಗಳ ತಾಲೂಕುವಾರು ವಿವರ (ಮುಂದುವರೆದಿದೆ)**

| | ಪ್ರೌಢಶಾಲೆಗಳು | | | | | | |
|---|---|---|---|---|---|---|---|
| | | ಅನುದಾನರಹಿತ | | | | ಒಟ್ಟು | |
| ಕ್ರ.ಸಂ. | ತಾಲೂಕು | ಶಾಲೆಗಳು | ಬಾಲಕರು | ಬಾಲಕಿಯರು | ಒಟ್ಟು | ಶಾಲೆಗಳು | ವಿದ್ಯಾರ್ಥಿಗಳು |
| ೧ | ಚಿಕ್ಕನಾಯಕನಹಳ್ಳಿ | ೭ | ೩೭೪ | ೩೩೨ | ೭೦೬ | ೬೪ | ೯,೪೦೦ |
| ೨ | ಗುಬ್ಬಿ | ೧೦ | ೭೪೧ | ೭೫೧ | ೧,೪೯೨ | ೫೮ | ೧೨,೪೬೫ |
| ೩ | ಕೊರಟಗೆರೆ | ೪ | ೨೫೫ | ೨೧೬ | ೪೭೧ | ೪೦ | ೬,೮೪೨ |
| ೪ | ಕುಣಿಗಲ್ | ೬ | ೪೧೩ | ೩೬೭ | ೭೮೨ | ೬೦ | ೧೧,೬೫೨ |
| ೫ | ಮಧುಗಿರಿ | ೧೧ | ೪೧೪ | ೨೮೪ | ೬೯೮ | ೬೬ | ೧೧,೪೪೭ |
| ೬ | ಪಾವಗಡ | ೧೩ | ೧,೧೯೪ | ೯೫೬ | ೨,೧೫೦ | ೬೨ | ೧೨,೫೨೫ |
| ೭ | ಶಿರಾ | ೧೭ | ೧,೨೨೭ | ೧,೨೧೮ | ೨,೪೪೫ | ೭೪ | ೧೩,೫೦೨ |
| ೮ | ತಿಪಟೂರು | ೧೦ | ೫೮೮ | ೪೫೫ | ೧,೦೪೩ | ೫೪ | ೯,೩೫೧ |
| ೯ | ತುಮಕೂರು | ೫೧ | ೩,೪೨೩ | ೨,೭೭೨ | ೬,೧೯೫ | ೧೩೭ | ೩೪,೨೧೧ |
| ೧೦ | ತುರುವೇಕೆರೆ | ೧೩ | ೮೪೨ | ೬೮೬ | ೧,೫೨೮ | ೫೪ | ೮,೦೪೧ |
| ಒಟ್ಟು | | ೧೪೨ | ೯,೪೭೧ | ೮,೦೩೭ | ೧೭,೫೦೮ | ೬೬೯ | ೧,೨೯,೪೩೬ |

**ಆಧಾರ: ತುಮಕೂರು ಜಿಲ್ಲಾ ಅಂಕಿ–ಅಂಶಗಳ ನೋಟ: ೨೦೦೯–೧೦, ಪು.೬೨)**

ಈ ಅಂಕಿ ಅಂಶಗಳ ವಿಶ್ಲೇಷಣೆಯಿಂದ ತಿಳಿದು ಬರುವ ಅಂಶಗಳು ಈ ರೀತಿಯಾಗಿವೆ. ಜಿಲ್ಲಾ ಕೇಂದ್ರವಿರುವ ತುಮಕೂರು ತಾಲೂಕನ್ನು ಬಿಟ್ಟರೆ (೧೩೭ ಶಾಲೆಗಳು) ಹೆಚ್ಚು ಸಂಖ್ಯೆಯ ಶಾಲೆಗಳಿರುವುದು ಶಿರಾ ತಾಲೂಕಿನಲ್ಲಿ ಮಾತ್ರ (೭೪ ಶಾಲೆ). ಇದು ತುಮಕೂರು ತಾಲೂಕಿನಲ್ಲಿಯ ಪ್ರೌಢಶಾಲೆಗಳ ಸಂಖ್ಯೆಯ ಕೇವಲ ಶೇ. ೫೪ರಷ್ಟು ಮಾತ್ರ ಆಗುತ್ತದೆ. ಶಿರಾ ತಾಲೂಕು ತುಮಕೂರು ತಾಲೂಕಿನಲ್ಲಿರುವುದಕ್ಕಿಂತ ಹೆಚ್ಚು ಸರ್ಕಾರಿ ಪ್ರೌಢಶಾಲೆಗಳನ್ನು ಹೊಂದಿದೆ. ತುಮಕೂರು ತಾಲೂಕಿನಲ್ಲಿರುವ ಖಾಸಗಿ ಶಾಲೆಗಳ ಅರ್ಧದಷ್ಟು ಸಹಾ ಶಿರಾ ತಾಲೂಕಿನಲ್ಲಿಲ್ಲ. ಚಿಕ್ಕನಾಯಕನಹಳ್ಳಿ, ಗುಬ್ಬಿ, ಮಧುಗಿರಿ, ಕುಣಿಗಲ್ ತಾಲೂಕುಗಳಲ್ಲಿಯೂ ಸಹಾ ತುಮಕೂರು ತಾಲೂಕಿನಲ್ಲಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಸರ್ಕಾರಿ ಪ್ರೌಢಶಾಲೆಗಳಿವೆ. ಖಾಸಗಿ ಸಂಸ್ಥೆಗಳಿಗೆ ಸರ್ಕಾರ ಉತ್ತೇಜನ ಕೊಟ್ಟಿದ್ದರ ಫಲವಾಗಿ ಅನುದಾನಿತ ಪ್ರೌಢಶಾಲೆಗಳ ಸಂಖ್ಯೆ ಸರ್ಕಾರಿ ಶಾಲೆಗಳಿಗಿಂತ ಸುಮಾರು ಶೇ. ೩೨ರಷ್ಟು ಹೆಚ್ಚಿದೆ. ಆದರೆ ಅಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಸರ್ಕಾರಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಶೇ. ೮೪ರಷ್ಟು ಹೆಚ್ಚಿದೆ (ಸರ್ಕಾರಿ ಶಾಲೆಗಳಲ್ಲಿ ೨೩,೩೨೨ ಆದರೆ ಅನುದಾನಿತ ಶಾಲೆಗಳಲ್ಲಿ ೪೫,೦೪೪).

**ಕೋಷ್ಟಕ ೧೩.೧೩: ಜಿಲ್ಲೆಯಲ್ಲಿ ಪ್ರೌಢಶಾಲೆ ಶಿಕ್ಷಕರ ಸಂಖ್ಯೆ ಹಾಗೂ ವಿದ್ಯಾರ್ಥಿ ಶಿಕ್ಷಕರ ಅನುಪಾತ**

| ಕ್ರಮ ಸಂಖ್ಯೆ | ಒಟ್ಟು ದಾಖಲಾತಿಗಳು | ಒಟ್ಟು ದಾಖಲಾತಿಗಳ ಸಂಖ್ಯೆ | ಪ್ರೌಢಶಾಲೆ ಶಿಕ್ಷಕರ ಸಂಖ್ಯೆ | | | ವಿದ್ಯಾರ್ಥಿ ಶಿಕ್ಷಕರ ಅನುಪಾತ |
|---|---|---|---|---|---|---|
| | | | ಪುರುಷರು | ಮಹಿಳೆಯರು | ಒಟ್ಟು | |
| ೧ | ಚಿಕ್ಕನಾಯಕನಹಳ್ಳಿ | ೮,೭೧೨ | ೩೫೬ | ೮೯ | ೪೪೫ | ೧೯:೫೮ |
| ೨ | ಗುಬ್ಬಿ | ೧೧,೧೨೯ | ೩೬೬ | ೧೩೯ | ೫೦೫ | ೨೨:೦೪ |
| ೩ | ಕೊರಟಗೆರೆ | ೭,೧೬೪ | ೧೩೧ | ೬೦ | ೧೯೧ | ೩೭:೫೦ |
| ೪ | ಕುಣಿಗಲ್ | ೧೦,೨೮೫ | ೩೩೩ | ೧೫೦ | ೪೮೩ | ೨೧:೨೯ |

| | | | | | | |
|---|---|---|---|---|---|---|
| ೫ | **ಮಧುಗಿರಿ** | ೧೧,೯೯೧ | ೧೬೧ | ೫೭ | ೨೧೮ | ೫೧:೩೩ |
| ೬ | **ಪಾವಗಡ** | ೧೦,೫೯೦ | ೧೧೫ | ೨೫ | ೧೪೦ | ೭೫:೬೪ |
| ೭ | **ಶಿರಾ** | ೧೩,೨೨೬ | ೧೬೦ | ೮೯ | ೨೪೯ | ೫೩:೧೨ |
| ೮ | **ತಿಪಟೂರು** | ೯,೪೭೦ | ೩೦೯ | ೧೩೫ | ೪೪೪ | ೨೧:೩೩ |
| ೯ | **ತುಮಕೂರು** | ೩೨,೭೪೮ | ೭೯೫ | ೬೩೮ | ೧,೪೩೩ | ೨೨:೮೫ |
| ೧೦ | **ತುರುವೇಕೆರೆ** | ೭,೨೨೨ | ೩೦೮ | ೯೦ | ೩೯೮ | ೧೮:೧೪ |
| | **ಜಿಲ್ಲಾ ಮೊತ್ತ** | **೧,೨೧,೭೩೭** | **೩,೦೩೪** | **೧,೪೭೨** | **೪,೫೦೬** | **೨೭:೦೨** |

**ಉರ್ದು ಮಾಧ್ಯಮ ಶಾಲೆಗಳು:** ಜಿಲ್ಲೆಯಲ್ಲಿ ಕನ್ನಡ, ಇಂಗ್ಲೀಷ್ ಮಾಧ್ಯಮ ಬಿಟ್ಟರೆ ಉಳಿದಂತೆ ಇರುವುದು ಉರ್ದು ಮಾಧ್ಯಮ ಮಾತ್ರವೇ. ಉರ್ದು ಮಾಧ್ಯಮದ ಕಿರಿಯ ಪ್ರಾಥಮಿಕ, ಉನ್ನತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಜಿಲ್ಲೆಯಲ್ಲಿವೆ. ಇವುಗಳಲ್ಲಿ ಸರ್ಕಾರಿ ಶಾಲೆಗಳದ್ದೇ ಸಿಂಹಪಾಲು. ಖಾಸಗಿಯವರ ಪ್ರಯತ್ನ ಈ ದಿಸೆಯಲ್ಲಿ ಬಹಳ ಕಡಿಮೆ.

೧. ಜಿಲ್ಲೆಯಲ್ಲಿ ಒಟ್ಟು ೨೪೮ ಉರ್ದು ಶಾಲೆಗಳಿದ್ದು ಅವುಗಳ ಪೈಕಿ ೨೩೪ ಶಾಲೆಗಳು ಸರ್ಕಾರಿ ಶಾಲೆಗಳಾಗಿವೆ. ಕೇವಲ ಹದಿನಾಲ್ಕು ಮಾತ್ರ ಖಾಸಗಿ ಶಾಲೆಗಳಾಗಿವೆ. ಇವುಗಳಲ್ಲಿ ಕೂಡಾ ನಾಲ್ಕು ಶಾಲೆಗಳಿಗೆ ಸರ್ಕಾರದ ಅನುದಾನ ದೊರೆಯುತ್ತಿದ್ದು ಉಳಿದ ಹತ್ತು ಶಾಲೆಗಳು ಅನುದಾನರಹಿತ ಶಾಲೆಗಳಾಗಿವೆ.

೨. ಇಡೀ ಜಿಲ್ಲೆಯಲ್ಲಿನ ಉರ್ದು ಮಾಧ್ಯಮ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯವು ಕಿರಿಯ ಪ್ರಾಥಮಿಕ ಶಾಲೆಗಳು (೨೪೮ ರಲ್ಲಿ ೧೫೧ ಶಾಲೆಗಳು. ಅಂದರೆ ಶೇ. ೬೦ರಷ್ಟು) ಉಳಿದ ೯೭ ಶಾಲೆಗಳಲ್ಲಿ ೯೦ ಉನ್ನತ ಪ್ರಾಥಮಿಕ ಶಾಲೆಗಳು. ಉಳಿದ ಏಳು ಪ್ರೌಢಶಾಲೆಗಳು (ಇವುಗಳಲ್ಲಿ ಮೂರು ಸರ್ಕಾರಿ ಪ್ರೌಢಶಾಲೆಗಳು). ಅಂದರೆ–ಪ್ರಾಥಮಿಕ ಶಿಕ್ಷಣ ಮುಗಿಸಿ ಪ್ರೌಢಶಾಲೆಗೆ ಬರುವ ವೇಳೆಗೆ ಉರ್ದು ಮಾಧ್ಯಮದ ವಿದ್ಯಾರ್ಥಿಗಳು ಇಂಗ್ಲೀಷ್ ಅಥವಾ ಕನ್ನಡ ಮಾಧ್ಯಮವನ್ನು ಆರಿಸಿಕೊಂಡು ಮುಖ್ಯವಾಹಿನಿಯಲ್ಲಿ ಮಿಳಿತವಾಗುತ್ತಿರುವುದು ಕಂಡುಬರುತ್ತದೆ.

೩. ತುಮಕೂರು ತಾಲೂಕಿನಲ್ಲಿ ಅತಿ ಹೆಚ್ಚು ಸಂಖ್ಯೆಯ (೬೪) ಉರ್ದು ಮಾಧ್ಯಮ ಶಾಲೆಗಳಿವೆ. ನಂತರದ ಸ್ಥಾನ ಕುಣಿಗಲ್ (೩೫) ಹಾಗೂ ಗುಬ್ಬಿ ತಾಲೂಕು (೨೯)ಗಳಿಗೆ ಸಲ್ಲುತ್ತದೆ. ಅತಿ ಕಡಿಮೆ ಉರ್ದು ಮಾಧ್ಯಮ ಶಾಲೆಗಳು (೫) ಪಾವಗಡ ತಾಲೂಕಿನಲ್ಲಿದ್ದು ಇವೂ ಸಹಾ ಸರ್ಕಾರಿ ಕಿರಿಯ ಪ್ರಾಥಮಿಕ (೩) ಹಾಗೂ ಹಿರಿಯ ಪ್ರಾಥಮಿಕ (೨) ಶಾಲೆಗಳಾಗಿವೆ.

೪. ಕೊರಟಗೆರೆ, ಪಾವಗಡ, ಶಿರಾ, ಚಿಕ್ಕನಾಯಕನಹಳ್ಳಿ ಹಾಗೂ ಗುಬ್ಬಿ ತಾಲೂಕುಗಳಲ್ಲಿ ಖಾಸಗಿ ಉರ್ದು ಮಾಧ್ಯಮ ಶಾಲೆಗಳಿಲ್ಲ. ತುರುವೇಕೆರೆ ಹಾಗೂ ಮಧುಗಿರಿ ತಾಲೂಕುಗಳಲ್ಲಿ ಕೇವಲ ಒಂದೊಂದು ಖಾಸಗಿ ಉರ್ದು ಮಾಧ್ಯಮ ಶಾಲೆಗಳಿವೆ.

೫. ಜಿಲ್ಲೆಯಲ್ಲಿ ಒಟ್ಟು ೨೪೮ ಉರ್ದು ಮಾಧ್ಯಮ ಶಾಲೆಗಳಲ್ಲಿ ೧೩,೨೭೨ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕೆಲವು ಕಡೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತೀರಾ ಕಡಿಮೆ ಇದ್ದು ಇನ್ನೂ ಕೆಲವು ಕಡೆ ಸಮಾಧಾನಕರ ದಾಖಲಾತಿ ಇದ್ದು, ಒಟ್ಟಾರೆ ನೋಡುವಾಗ ಸರಾಸರಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆ ಇರುವುದು ಕಾಣುತ್ತದೆ. ಕೋಷ್ಟಕ ೧೫– ಎ ನಲ್ಲಿ ತಾಲೂಕುವಾರು ವಿವರಗಳನ್ನು ನೀಡಲಾಗಿದೆ.

## ಕೋಷ್ಟಕ ೧೩.೧೪: ಜಿಲ್ಲೆಯಲ್ಲಿ ಉರ್ದು ಮಾಧ್ಯಮ ಶಾಲೆಗಳ ವಿವರ

| ಕ್ರಸಂ | ತಾಲೂಕು | ಕಿರಿಯ ಪ್ರಾಥಮಿಕ ಶಾಲೆಗಳು | ಹಿರಿಯ ಪ್ರಾಥಮಿಕ ಶಾಲೆಗಳು | | | ಪ್ರೌಢಶಾಲೆ | | | ಒಟ್ಟು ಶಾಲೆಗಳ ಸಂಖ್ಯೆ |
|---|---|---|---|---|---|---|---|---|---|
| | | ಸರ್ಕಾರಿ | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಸರ್ಕಾರಿ | ಅನುದಾನಿತ | ಅನುದಾನ ರಹಿತ | |
| ೧ | ಚಿಕ್ಕನಾಯಕನಹಳ್ಳಿ | ೧೫ | ೫ | – | – | ೧ | – | – | ೨೧ |
| ೨ | ಗುಬ್ಬಿ | ೧೭ | ೧೨ | – | – | – | – | – | ೨೯ |
| ೩ | ಕೊರಟಗೆರೆ | ೧೧ | ೪ | – | – | – | – | – | ೧೫ |
| ೪ | ಕುಣಿಗಲ್ | ೨೨ | ೧೧ | ೧ | – | ೧ | – | – | ೩೫ |
| ೫ | ಮಧುಗಿರಿ | ೧೫ | ೫ | – | – | – | – | ೧ | ೨೧ |
| ೬ | ಪಾವಗಡ | ೩ | ೨ | – | – | – | – | – | ೫ |
| ೭ | ಶಿರಾ | ೧೨ | ೯ | – | – | ೧ | ೧ | – | ೨೩ |
| ೮ | ತಿಪಟೂರು | ೮ | ೪ | ೧ | – | – | – | ೧ | ೧೪ |
| ೯ | ತುಮಕೂರು | ೩೨ | ೨೯ | ೧ | ೧ | – | – | ೧ | ೬೪ |
| ೧೦ | ತುರುವೇಕೆರೆ | ೧೧ | ೪ | – | ೧ | – | – | – | ೧೬ |
| | ಒಟ್ಟು | ೧೪೬ | ೮೨ | ೩ | ೨ | ೩ | ೧ | ೩ | ೨೪೮ |

**ಕೋಷ್ಟಕ ೧೩.೧೫: ಉರ್ದುಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ (೨೦೧೦–೧೧ರಲ್ಲಿರುವಂತೆ)**

## (೧ ರಿಂದ ೧೦ನೇ ತರಗತಿವರೆಗೆ ದಾಖಲಾಗಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಸಂಖ್ಯೆ

| ಕ್ರ.ಸಂ. | ತಾಲೂಕು | ಸರ್ಕಾರಿ ಶಾಲೆಗಳಲ್ಲಿ | ಅನುದಾನಿತ ಶಾಲೆಗಳಲ್ಲಿ | ಅನುದಾನರಹಿತ ಶಾಲೆಗಳಲ್ಲಿ | ಒಟ್ಟು |
|---|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೮೫೨ | – | – | ೮೫೨ |
| ೨ | ಗುಬ್ಬಿ | ೧೧೨೭ | – | – | ೧೧೨೭ |
| ೩ | ಕೊರಟಗೆರೆ | ೪೩೬ | – | – | ೪೩೬ |
| ೪ | ಕುಣಿಗಲ್ | ೧೨೫೫ | ೧೯೦ | – | ೧೩೪೫ |
| ೫ | ಮಧುಗಿರಿ | ೪೯೧ | – | ೭೪ | ೫೬೫ |
| ೬ | ಪಾವಗಡ | ೧೮೯ | – | – | ೧೮೯ |
| ೭ | ಶಿರಾ | ೧೮೭೫ | ೩೪೫ | – | ೨೨೨೦ |
| ೮ | ತಿಪಟೂರು | ೫೩೧ | ೧೨೫ | ೯೯ | ೭೫೫ |
| ೯ | ತುಮಕೂರು | ೪೫೮೦ | ೨೯೬ | ೫೨೬ | ೫೪೦೨ |
| ೧೦ | ತುರುವೇಕೆರೆ | ೩೦೮ | – | ೭೩ | ೩೮೧ |
| ಒಟ್ಟು | | ೯೫೬ | ೭೭೨ | ೧೩೩೯೨ | ೧೩೨೭೨ |

**ಆಧಾರ: ತುಮಕೂರು ದಕ್ಷಿಣ ಮತ್ತು ಉತ್ತರ ಶೈಕ್ಷಣಿಕ ಉಪನಿರ್ದೇಶಕರ ಕಾರ್ಯಾಲಯ**

**ಉರ್ದು ಶಾಲಾ ಶಿಕ್ಷಕರು:** ಜಿಲ್ಲೆಯಲ್ಲಿ ೨೦೧೦–೧೧ರಲ್ಲಿ ಉರ್ದು ಮಾಧ್ಯಮ ಶಾಲೆಗಳಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳಲ್ಲಿ ಹೆಚ್ಚಿನಭಾಗ ಭರ್ತಿಯಾಗಿದ್ದು, ಖಾಲಿ ಇರುವ ಹುದ್ದೆಗಳ ಸಂಖ್ಯೆ ವಿರಳವಾಗಿದೆ. ೧. ತುಮಕೂರು ಉತ್ತರ

ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿದ್ದು ೨೨೮ ಮಂಜೂರಾದ ಶಿಕ್ಷಕ ಹುದ್ದೆಗಳ ಪೈಕಿ ೨೦೮ರಲ್ಲಿ ಕಾರ್ಯನಿರತ ಶಿಕ್ಷಕರಿದ್ದು ೨೦ ಸ್ಥಾನಗಳು ಮಾತ್ರ ಖಾಲಿ ಇವೆ. ಅದೇ ತುಮಕೂರು ದಕ್ಷಿಣ ಜಿಲ್ಲೆಯಲ್ಲಿ ಒಟ್ಟು ೬೧೦ ಮಂಜೂರಾದ ಶಿಕ್ಷಕ ಸ್ಥಾನಗಳು ಸರ್ಕಾರಿ ಪ್ರಾಥಮಿಕ (ಕಿರಿಯ ಮತ್ತು ಉನ್ನತ) ಶಾಲೆಗಳಲ್ಲಿ ಲಭ್ಯವಿದ್ದು ಈ ಪೈಕಿ ೫೬೨ ಸ್ಥಾನಗಳಲ್ಲಿ ಶಿಕ್ಷಕ / ಶಿಕ್ಷಕಿಯರು ಕೆಲಸ ಮಾಡುತ್ತಿದ್ದು ೪೮ ಸ್ಥಾನಗಳು ಖಾಲಿ ಇವೆ. ೨. ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೨೩ ಶಿಕ್ಷಕ ಸ್ಥಾನಗಳು ಮಂಜೂರಾಗಿದ್ದು ಇದರಲ್ಲಿ ನಾಲ್ಕು ಸ್ಥಾನಗಳು ಮಾತ್ರ ಖಾಲಿ ಇವೆ. ೩. ಅನುದಾನರಹಿತ ಪ್ರಾಥಮಿಕ ಉರ್ದು ಮಾಧ್ಯಮ ಶಾಲೆಗಳು ತುಮಕೂರು ಉತ್ತರ ಜಿಲ್ಲೆಯ ಮಧುಗಿರಿ ತಾಲೂಕಿನಲ್ಲಿ ಮಾತ್ರ ಇವೆ.

ಕಳೆದ ನಾಲ್ಕು ದಶಕಗಳಲ್ಲಿ ಉರ್ದು ಮಾಧ್ಯಮ ಶಾಲೆಗಳ ಸಂಖ್ಯೆ ಈ ಜಿಲ್ಲೆಯಲ್ಲಿ ಗಮನಾರ್ಹವಾಗಿ ಹೆಚ್ಚಿದೆ. ೧೯೬೯ರ ಜಿಲ್ಲಾ ಗ್ಯಾಸೆಟಿಯರ್ ಪ್ರಕಾರ ಜಿಲ್ಲೆಯಲ್ಲಿ ೨೭ ಉರ್ದು ಪ್ರಾಥಮಿಕ ಶಾಲೆಗಳು ಹಾಗೂ ಐದು ಉರ್ದು 'ಹೊಸ ಮಾದರಿ ಮಾಧ್ಯಮಿಕ ಶಾಲೆಗಳು' (ಉನ್ನತ ಪ್ರಾಥಮಿಕ ಶಾಲೆಗಳು) ಇದ್ದವು. ಹೊಸ ಮಾದರಿ ಮಾಧ್ಯಮಿಕ ಶಾಲೆಗಳಲ್ಲಿ ಎರಡು ಶಾಲೆಗಳು ಗಂಡು ಮಕ್ಕಳಿಗಾಗಿ ಇದ್ದು ಅದರಲ್ಲಿ ೨೨೪ ಬಾಲಕರಿದ್ದರು. ಉಳಿದ ಮೂರು ಶಾಲೆಗಳು ಬಾಲಕಿಯರಿಗಾಗಿ ಇದ್ದು ಅದರಲ್ಲಿ ೭೮೦ ಬಾಲಕಿಯರು ಓದುತ್ತಿದ್ದರು. ಈ ಐದು ಶಾಲೆಗಳಲ್ಲಿ ಒಟ್ಟು ೧೪ ಮಂದಿ ಶಿಕ್ಷಕರು ಹಾಗೂ ೧೪ ಮಂದಿ ಶಿಕ್ಷಕಿಯರು ಕೆಲಸ ನಿರ್ವಹಿಸುತ್ತಿದ್ದರು. ೨೭ ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೨೨೩೯ ಬಾಲಕರು ಹಾಗೂ ೧೯೫೪ ಬಾಲಕಿಯರು ಓದುತ್ತಿದ್ದರು. ೧೦೩ ಶಿಕ್ಷಕರು ಹಾಗೂ ೩೮ ಶಿಕ್ಷಕಿಯರು ಅಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಹೀಗೆ ಒಟ್ಟು ೩೨ ಶಾಲೆಗಳು ಹಾಗೂ ೧೬೯ ಶಿಕ್ಷಕರು ಇದ್ದ ಉರ್ದುಮಾಧ್ಯಮ ಶಿಕ್ಷಣ ೪೨ ವರ್ಷಗಳ ಅವಧಿಯಲ್ಲಿ ೨೪೮ ಶಾಲೆಗಳು, ೩೦೮ ಶಿಕ್ಷಕರು ಹಾಗೂ ಸುಮಾರು ೫೨೦೦ ವಿದ್ಯಾರ್ಥಿಗಳ ಮಟ್ಟದಿಂದ ೧೩,೩೭೨ ವಿದ್ಯಾರ್ಥಿಗಳ ಮಟ್ಟಕ್ಕೆ ಬೆಳೆಯಿತು.

**ಕನ್ನಡ – ಇಂಗ್ಲೀಷ್ ಮಾಧ್ಯಮ:** ಸ್ವಾತಂತ್ರ್ಯ ಪೂರ್ವದಿಂದ ಸ್ವಾತಂತ್ರ್ಯಾ ನಂತರದ ಒಂದೆರಡು ದಶಕಗಳವರೆಗೂ ರಾಜ್ಯಭಾಷೆಯಾದ ಕನ್ನಡವೇ ಶಾಲಾಮಟ್ಟದಲ್ಲಿ ಪ್ರಮುಖವಾದ ಮಾಧ್ಯಮವಾಗಿತ್ತು. ಐದನೇ ತರಗತಿಯಿಂದ ಇಂಗ್ಲಿಷ್ ಒಂದು ಭಾಷೆಯಾಗಿ ಬೋಧಿಸಲ್ಪಡುತ್ತಿತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳು ಇದ್ದರೂ ಅವುಗಳ ಸಂಖ್ಯೆ ತುಲನಾತ್ಮಕವಾಗಿ ಕಡಿಮೆ ಇತ್ತು.

**ಹಿಂದೆ ಅನುಸರಿಸಿದ ಬೋಧನಾ ಮಾಧ್ಯಮ ನೀತಿ:** ಕನ್ನಡವನ್ನು ಬೋಧನಾ ಮಾಧ್ಯಮವಾಗಿ ಪ್ರೌಢಶಾಲೆಗಳಲ್ಲಿ ಅಳವಡಿಸುವ ಪ್ರಯೋಗ ೧೯೩೧-೩೨ರಲ್ಲಿ ಕೆಲವು ಆಯ್ದ ಪ್ರೌಢಶಾಲೆಗಳಲ್ಲಿ ಆರಂಭವಾಯಿತು. ಅದು ಯಶಸ್ವಿಯಾದ್ದರಿಂದ ಬೇರೆ ಶಾಲೆಗಳಲ್ಲೂ ಅದನ್ನು ಪರಿಚಯಿಸಲಾಯಿತು. ೧೯೩೭ರಿಂದ ಭಾಷೆಗಳ ವಿನಃ ಉಳಿದೆಲ್ಲ ಬೋಧನಾ ವಿಷಯಗಳನ್ನೂ (ಗಣಿತ, ವಿಜ್ಞಾನ, ಸಮಾಜ ಪರಿಚಯ ಇತ್ಯಾದಿ) ಪ್ರತಿ ತರಗತಿಯಲ್ಲೂ ಒಂದಕ್ಕಿಂತ ಹೆಚ್ಚು ವಿಭಾಗಗಳಿದ್ದ ಎಲ್ಲ ಸರ್ಕಾರಿ ಪ್ರೌಢಶಾಲೆಗಳಲ್ಲೂ ಒಂದು ವಿಭಾಗವನ್ನು ಮಾತ್ರ ಇಂಗ್ಲೀಷ್ ಮಾಧ್ಯಮಕ್ಕೆ ಮೀಸಲಾಗಿಟ್ಟು ಉಳಿದ ವಿಭಾಗಗಳಲ್ಲಿ ಕನ್ನಡ ಮಾಧ್ಯಮದಲ್ಲೇ ಬೋಧಿಸುವ ಪದ್ಧತಿ ಜಾರಿಯಲ್ಲಿತ್ತು. ಮಾತೃಭಾಷೆ ಅಥವಾ ದ್ವಿತೀಯ ಭಾಷೆ ಕನ್ನಡವಲ್ಲದ ವಿದ್ಯಾರ್ಥಿಗಳನ್ನು ಮಾತ್ರ ಇಂಗ್ಲೀಷ್ ಮಾಧ್ಯಮಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಉಳಿದವರು ಅನಿವಾರ್ಯವಾಗಿ ಕನ್ನಡ ಮಾಧ್ಯಮವನ್ನೇ ತೆಗೆದುಕೊಳ್ಳಬೇಕಾಗಿತ್ತು. ಕನ್ನಡ ಮಾಧ್ಯಮದಲ್ಲಿ ವಿಷಯಗ್ರಹಿಕೆ ಹಾಗೂ ಅಭಿವ್ಯಕ್ತಿ ಸುಲಭವಾದ್ದರಿಂದ ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯಲು ಸಾಧ್ಯ ಎಂಬುದು ಇದರ ಹಿಂದಿನ ತರ್ಕವಾಗಿತ್ತು.

ಆದರೆ ಉನ್ನತ ವಿದ್ಯಾಭ್ಯಾಸವು ಆಂಗ್ಲಮಾಧ್ಯಮದಲ್ಲೇ ನಡೆಯುತ್ತಿದ್ದಾದ್ದರಿಂದ ಪ್ರೌಢಶಾಲೆಯಲ್ಲೂ ಆ ಮಾಧ್ಯಮ ತರಗತಿಗೆ ಪ್ರವೇಶ ಬೇಡುವವರ ಸಂಖ್ಯೆಯು ಹೆಚ್ಚಾಯಿತು. ಆದ್ದರಿಂದ ಸರ್ಕಾರವು ಅಗತ್ಯವಿದ್ದಕಡೆ ಒಂದು ಹೆಚ್ಚುವರಿ ಇಂಗ್ಲೀಷ್ ಮಾಧ್ಯಮ ವಿಭಾಗವನ್ನು ತೆರೆಯಬಹುದೆಂದು ಅನುಮತಿ ನೀಡಿತು. ಇದರಿಂದ ಸರ್ಕಾರವು ಪ್ರಾಂತೀಯ ಭಾಷೆಗೆ ಸಾಕಷ್ಟು ಪ್ರೋತ್ಸಾಹ ಕೊಡುತ್ತಿಲ್ಲವೆಂಬ ಟೀಕೆಗೆ ಗುರಿಯಾಗಬೇಕಾಯಿತು. ಆದ್ದರಿಂದ ೧೯೫೧-೫೨ರಲ್ಲಿ ಸರ್ಕಾರವು ಮತ್ತೊಂದು ಆದೇಶ ಹೊರಡಿಸಿ ಪ್ರತಿ ಶಾಲೆಯಲ್ಲಿ ಒಂದು ತರಗತಿಯ ಒಂದು ವಿಭಾಗವು ಮಾತ್ರ ಆಂಗ್ಲಮಾಧ್ಯಮದಲ್ಲೂ, ಉಳಿದವು ಕನ್ನಡ ಮಾಧ್ಯಮದಲ್ಲೂ ಇರಬೇಕೆಂದೂ ಆದರೆ ಅಗತ್ಯವಿದ್ದಲ್ಲಿ ಹೆಚ್ಚಿನ ಇಂಗ್ಲೀಷ್ ಮಾಧ್ಯಮ ವಿಭಾಗಗಳನ್ನು ತೆರೆಯಲು ಅನುಮತಿ ನೀಡಲು ಅಧಿಕಾರಿಗಳಿಗೆ ಅಧಿಕಾರವಿದೆಯೆಂದೂ ತಿಳಿಸಿತು. ಇದರಿಂದ ಅಲ್ಲಿಯವರೆಗೂ ಇದ್ದ ಪದ್ಧತಿಯನ್ನೇ ಅಧಿಕೃತಗೊಳಿಸಿದಂತಾಯಿತು.

ಭಾಷಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಪದೇ ಪದೇ ನೀತಿ ಬದಲಾವಣೆಯಾಗಿರುವುದು ಕಂಡುಬರುತ್ತದೆ. ೧೯೮೦ರ ದಶಕದಿಂದ ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಪ್ರವೇಶಕ್ಕೆ ಬೇಡಿಕೆ ಹೆಚ್ಚಾಗಿದೆ. 'ಖಾಸಗಿ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಸರ್ಕಾರದ ಅನುದಾನವಿಲ್ಲ'– ಎಂಬ ನೀತಿಯನ್ನು ಕರ್ನಾಟಕ ಸರ್ಕಾರ ೧೯೭೦ರ ದಶಕದಿಂದ ಜಾರಿಗೆ ತಂದಿದೆ. ಇಂಗ್ಲೀಷ್ ಮಾಧ್ಯಮ ಶಾಲೆಗಳ ಹಾವಳಿಯನ್ನು ತಡೆಯುವುದು ಅದರ ಉದ್ದೇಶ. ಆದ–ರೂ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಬೇಡಿಕೆ ಕಡಿಮೆಯಾಗಲಿಲ್ಲ. ಪೋಷಕರು ತಾವಾಗಿಯೇ ಹೆಚ್ಚಿನ ಹಣ ಕೊಟ್ಟು ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ಇದರಿಂದ ಕನ್ನಡಕ್ಕೂ ಮಕ್ಕಳ ಜ್ಞಾನವಿಕಾಸಕ್ಕೂ ಹಿನ್ನಡೆಯಾಗುತ್ತದೆ ಎಂದು ಅನೇಕ ಶಿಕ್ಷಣ ತಜ್ಞರು ಹಾಗೂ ಕನ್ನಡದ ಹಿತೈಷಿಗಳು ವಾದಿಸಿ ಸರ್ಕಾರಕ್ಕೆ ಅಹವಾಲು ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಸರಕಾರ ೧೯೮೬ ರ ವೇಳೆಗೆ ಒಂದರಿಂದ ಐದನೇ ತರಗತಿವರೆಗಿನ ಶಿಕ್ಷಣವು ಕಡ್ಡಾಯವಾಗಿ ಕನ್ನಡದಲ್ಲಿ ಇಲ್ಲವೇ ಮಾತೃಭಾಷೆಯಲ್ಲಿರಬೇಕೆಂದು ಆದೇಶ ಹೊರಡಿಸಿತು. ಖಾಸಗಿ ಶಾಲೆಗಳವರು 'ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುತ್ತೇವೆ' ಎಂದು ಹೇಳಿ ಇಲಾಖೆಯಿಂದ ಅನುಮತಿ ಪಡೆದುಕೊಂಡು, ಇಂಗ್ಲೀಷ್ ಮಾಧ್ಯಮದಲ್ಲಿ ಪಾಠ ಮಾಡತೊಡಗಿದರು. ಸರ್ಕಾರವು ಈ ಶಾಲೆಗಳ ವಿರುದ್ಧ ಅವುಗಳ ಮಾನ್ಯತೆ ರದ್ದು ಮಾಡುವ ಬಗ್ಗೆ ನೋಟೀಸ್ ನೀಡಿತು. ಅದನ್ನು ಪ್ರಶ್ನಿಸಿ ಆ ಶಾಲೆಗಳು ಹೈಕೋರ್ಟಿಗೆ ಮೊರೆ ಹೋದವು. ಇತ್ತ ಪೋಷಕರ ಇನ್ನೊಂದು ತಂಡವು ಭಾಷಾ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳುವುದು ಪೋಷಕರ ಹಕ್ಕು. ಇದನ್ನು ಸರ್ಕಾರ ಮೊಟಕುಗೊಳಿಸಲಾಗದು ಎಂದು ವಾದಿಸಿ ಹೈಕೋರ್ಟಿನಲ್ಲಿ ರಿಟ್ ದಾಖಲಿಸಿತು. ಕನ್ನಡ ಶಾಲೆಗೆಂದು ಅನುಮತಿ ಪಡೆದು ಅದರ ಬದಲು ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ನಡೆಸುತ್ತಿದ್ದ ಶಾಲೆಗಳವರು ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟು ವಜಾ ಮಾಡಿತು. ಅವುಗಳ ಮಾನ್ಯತೆ ರದ್ದು ಪಡಿಸುವ ಕ್ರಮವನ್ನು ಎತ್ತಿಹಿಡಿಯಿತು. 'ಕನ್ನಡ ಮಾಧ್ಯಮದಲ್ಲೇ ಶಾಲೆ ನಡೆಸಲು ಅವು ಹೊಸದಾಗಿ ಅನುಮತಿ ಪಡೆಯಲು ಅರ್ಜಿ ಸಲ್ಲಿಸಬೇಕು' ಎಂದು ಅವಕಾಶವನ್ನು ಕೊಟ್ಟಿತು. ಶಾಲೆಗಳು ಆ ಬಗ್ಗೆ ಪ್ರಕ್ರಿಯೆ ಆರಂಭಿಸಿದವು. ಜೊತೆಗೆ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅದಿನ್ನೂ ಇತ್ಯರ್ಥವಾಗಿಲ್ಲ.

ನಂತರದಲ್ಲಿ 'ಮಾಧ್ಯಮದ ಆಯ್ಕೆ ತಮ್ಮ ಹಕ್ಕು' ಎಂದು ಪೋಷಕರು ವಾದಿಸಿದ್ದ ಅರ್ಜಿಗೆ ಉಚ್ಚನ್ಯಾಯಾಲಯ ಮನ್ನಣೆ ನೀಡಿತು. 'ಸರ್ಕಾರ ಕನ್ನಡ ಮಾಧ್ಯಮವನ್ನು ವಿದ್ಯಾರ್ಥಿಗಳ ಮೇಲೆ ಹೇರಲಾಗದು'– ಎಂದು ಅದು ತೀರ್ಪಿತ್ತಿತು. ಇದರಿಂದಾಗಿ ಅಕ್ರಮವಾಗಿ ಇಂಗ್ಲೀಷ್ ಶಾಲೆಗಳನ್ನು ನಡೆಸುತ್ತಿದ್ದ ಶಾಲೆಗಳವರಿಗೆ ಬಲ ಬಂದಂತಾಯಿತು. ಅವರಿಗೆ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ನಡೆಸಲು ಸರ್ಕಾರ ಅನುಮತಿ ಕೊಡಲೇಬೇಕಾಯಿತು. ಹೀಗಾಗಿ, ಇಂಗ್ಲೀಷ್ ಮಾಧ್ಯಮ ಶಾಲೆಗಳ ಸಂಖ್ಯೆ ಕಳೆದೆರಡು ದಶಕಗಳಲ್ಲಿ ಹೆಚ್ಚಿದೆ. ತುಮಕೂರು ಜಿಲ್ಲೆಯಲ್ಲಿ ೨೦೧೦–೧೧ರಲ್ಲಿ ಇರುವ ಕನ್ನಡ/ಇಂಗ್ಲೀಷ್ ಹಾಗೂ ಎರಡೂ ಮಾಧ್ಯಮಗಳು ಇರುವ ಶಾಲೆಗಳ ಮುಂದಿನ ಲಗತ್ತಾಗಿರುವ ಕೋಷ್ಟಕದಲ್ಲಿದೆ. (ಆಧಾರ: ಉಪನಿರ್ದೇಶಕರ ಕಛೇರಿ–ತುಮಕೂರು ಮತ್ತು ಮಧುಗಿರಿ)

**ಕೋಷ್ಟಕ ೧೩.೧೬: ಕನ್ನಡ–ಇಂಗ್ಲೀಷ್ ಮಾಧ್ಯಮದ ಶಾಲೆಗಳ ಮಾಹಿತಿ**

| ಕ್ರ.ಸಂ. | ತಾಲೂಕು | ಆಡಳಿತ | ಕಿರಿಯ ಪ್ರಥಾಮಿಕ ಶಾಲೆಗಳು | | | ಉನ್ನತ ಪ್ರಾಥಮಿಕ ಶಾಲೆಗಳು | | | ಪೌಢಶಾಲೆಗಳು | | | ಒಟ್ಟು |
|---|---|---|---|---|---|---|---|---|---|---|---|---|
| | | | ಕನ್ನಡ | ಇಂಗ್ಲೀಷ್ | ಎರಡು | ಕನ್ನಡ | ಇಂಗ್ಲೀಷ್ | ಎರಡು | ಕನ್ನಡ | ಇಂಗ್ಲೀಷ್ | ಎರಡು | |
| ೧ | ಚಿಕ್ಕನಾಯಕನ ಹಳ್ಳಿ | ಸರ್ಕಾರಿ | ೧೯೨ | – | – | ೧೧೦ | – | – | ೧೮ | ೭ | ೭ | ೩೩೪ |
| | | ಅನುದಾನಿತ | – | – | – | ೭ | – | – | ೩೨ | ೧ | ೧ | ೪೧ |
| | | ಅನುದಾನರಹಿತ | ೫ | ೧ | – | ೧೫ | ೧೨ | ೧೧ | ೮ | ೬ | ೪ | ೬೨ |
| ೨ | ಗುಬ್ಬಿ | ಸರ್ಕಾರಿ | ೨೩೯ | – | – | ೧೩೯ | – | – | ೨೫ | ೩ | ೩ | ೪೦೯ |
| | | ಅನುದಾನಿತ | ೧ | – | – | ೬ | – | – | ೨೯ | – | – | ೩೬ |
| | | ಅನುದಾನರಹಿತ | ೫ | ೨ | – | ೬ | ೫ | ೧ | ೭ | ೪ | – | ೩೦ |
| ೩ | ಕೊರಟಗೆರೆ | ಸರ್ಕಾರಿ | ೧೭೪ | – | – | ೯೨ | – | – | ೧೯ | ೩ | ೩ | ೨೯೧ |

| | | | | | | | | | | | | |
|---|---|---|---|---|---|---|---|---|---|---|---|---|
| | | ಅನುದಾನಿತ | – | – | – | ೩ | – | – | ೧೫ | ೧ | ೧ | ೨೦ |
| | | ಅನುದಾನರಹಿತ | ೬ | – | – | ೯ | ೫ | ೫ | ೩ | ೨ | ೧ | ೩೧ |
| ೪ | ಕುಣಿಗಲ್ | ಸರ್ಕಾರಿ | ೨೭೫ | – | – | ೧೧೫ | – | – | ೨೯ | ೩ | ೩ | ೪೨೫ |
| | | ಅನುದಾನಿತ | – | – | – | ೧೨ | – | – | ೨೪ | ೧ | ೧ | ೩೮ |
| | | ಅನುದಾನರಹಿತ | ೬ | – | – | ೧೭ | ೧೪ | ೧೩ | ೪ | ೫ | ೩ | ೬೨ |
| ೫ | ಮಧುಗಿರಿ | ಸರ್ಕಾರಿ | ೨೧೬ | – | – | ೧೫೨ | – | – | ೨೭ | ೩ | ೩ | ೪೦೧ |
| | | ಅನುದಾನಿತ | – | – | – | ೧ | ೧ | ೧ | ೨೭ | ೬ | ೬ | ೪೨ |
| | | ಅನುದಾನರಹಿತ | ೯ | ೨ | ೨ | ೧೬ | ೧೩ | ೧೩ | ೬ | ೭ | ೨ | ೬೪ |
| ೬ | ಪಾವಗಡ | ಸರ್ಕಾರಿ | ೧೨೧ | – | – | ೧೨೩ | – | – | ೨೧ | ೧ | ೧ | ೨೬೭ |
| | | ಅನುದಾನಿತ | – | – | – | ೩ | – | – | ೨೭ | – | – | ೩೦ |
| | | ಅನುದಾನರಹಿತ | ೩ | – | – | ೨೭ | ೧೯ | ೧೮ | ೧೫ | ೧೦ | ೫ | ೯೭ |
| ೭ | ಶಿರಾ | ಸರ್ಕಾರಿ | ೨೬೦ | – | – | ೧೭೬ | – | – | ೨೭ | ೩ | ೩ | ೪೬೯ |
| | | ಅನುದಾನಿತ | – | – | – | ೧ | – | – | ೨೮ | – | – | ೨೯ |
| | | ಅನುದಾನರಹಿತ | ೬ | ೩ | ೧ | ೨೦ | ೧೬ | ೧೨ | ೭ | ೧೪ | ೩ | ೮೨ |
| ೮ | ತಿಪಟೂರು | ಸರ್ಕಾರಿ | ೧೭೮ | – | – | ೯೮ | – | – | ೧೭ | ೪ | ೪ | ೩೦೧ |
| | | ಅನುದಾನಿತ | – | – | – | ೬ | – | – | ೨೭ | ೨ | ೨ | ೩೭ |
| | | ಅನುದಾನರಹಿತ | – | ೧ | ೧ | ೧೯ | ೧೫ | ೯ | ೩ | ೮ | – | ೫೬ |
| ೯ | ತುಮಕೂರು | ಸರ್ಕಾರಿ | ೨೬೩ | – | – | ೧೭೭ | – | – | ೨೩ | ೭ | ೫ | ೪೭೫ |
| | | ಅನುದಾನಿತ | ೨ | – | – | ೧೫ | ೧ | ೧ | ೬೧ | ೧೪ | ೧೧ | ೧೦೫ |
| | | ಅನುದಾನರಹಿತ | ೧೪ | ೨ | – | ೬೪ | ೯೦ | ೪೪ | ೧೧ | ೫೭ | ೪ | ೨೮೬ |
| ೧೦ | ತುರುವೇಕೆರೆ | ಸರ್ಕಾರಿ | ೨೦೯ | – | – | ೮೯ | – | – | ೧೭ | ೧ | ೧ | ೩೧೭ |
| | | ಅನುದಾನಿತ | – | – | – | ೪ | – | – | ೨೪ | – | – | ೨೮ |
| | | ಅನುದಾನರಹಿತ | ೩ | – | – | ೧೨ | ೬ | ೨ | ೭ | ೬ | – | ೩೬ |
| ಒಟ್ಟು | | | **೨೧೮೭** | **೧೧** | **೪** | **೧೫೩೪** | **೧೯೭** | **೧೨೪** | **೫೮೮** | **೧೭೯** | **೭೭** | **೪೯೦೧** |

ಸರ್ಕಾರವು ಜಿಲ್ಲೆಯಲ್ಲಿ ತುಮಕೂರಿನ ಎರಡು ಶಾಲೆಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಿಯೂ ಇಂಗ್ಲೀಷ್ ಮಾಧ್ಯಮದ ಅಥವಾ ಇಂಗ್ಲೀಷ್ – ಕನ್ನಡ ಎರಡೂ ಮಾಧ್ಯಮಗಳಿರುವ ಪ್ರಾಥಮಿಕ ಶಾಲೆಗಳನ್ನು (ಕಿರಿಯ/ಉನ್ನತ/) ನಡೆಸುತ್ತಿಲ್ಲ. ಜಿಲ್ಲೆಯಲ್ಲಿ ಕೇವಲ ಒಂದೇ ಒಂದು ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಯಿದ್ದು ಅದು ಗುಬ್ಬಿ ತಾಲೂಕಿನಲ್ಲಿದೆ. ಅದೂ ಸಹಾ ಕೇವಲ ಕನ್ನಡ ಮಾಧ್ಯಮದ್ದೇ ಆಗಿದೆ. ಆಂಗ್ಲ ಅಥವಾ ಆಂಗ್ಲ–ಕನ್ನಡ ಮಾಧ್ಯಮವಿರುವ ಯಾವ ಖಾಸಗಿ ಕಿರಿಯ ಪ್ರಾಥಮಿಕ ಶಾಲೆಗೂ ಸರ್ಕಾರ ಅನುದಾನ ನೀಡುತ್ತಿಲ್ಲ. ಆಂಗ್ಲ/ಆಂಗ್ಲ–ಕನ್ನಡ ಮಾಧ್ಯಮ ಹೊಂದಿರುವ ಶಾಲೆಗಳ ಪೈಕಿ ತುಮಕೂರು ತಾಲೂಕಿನಲ್ಲಿ ಒಂದೊಂದು ಹಾಗೂ ಮಧುಗಿರಿ ತಾಲೂಕಿನಲ್ಲಿ ಒಂದೊಂದು ಶಾಲೆಗಳಿಗೆ ಮಾತ್ರ ಸರ್ಕಾರ ಅನುದಾನ ನೀಡುತ್ತಿದೆ. ಪ್ರೌಢಶಾಲಾ ಹಂತದಲ್ಲಿ ಜಿಲ್ಲೆಯಲ್ಲಿನ ಸರ್ಕಾರಿ ಪ್ರೌಢಶಾಲೆಗಳ ಪೈಕಿ ೬೮ರಲ್ಲಿ ಆಂಗ್ಲ ಇಲ್ಲವೇ ಆಂಗ್ಲ ಹಾಗೂ ಕನ್ನಡ ಎರಡೂ ಮಾಧ್ಯಮಗಳಿವೆ. ಇಂತಹ ೪೭ ಖಾಸಗಿ ಶಾಲೆಗಳಿಗೆ ಸರ್ಕಾರವು ಅನುದಾನ ನೀಡುತ್ತಿದೆ. ಇವೆಲ್ಲವೂ ಇಪ್ಪತ್ತೈದು ವರ್ಷಗಳಿಗೂ ಹಿಂದೆ ಸ್ಥಾಪಿತವಾಗಿರುವ ಶಾಲೆಗಳು.

**ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು:** ಇದು ಕರ್ನಾಟಕ ಸರ್ಕಾರವು ಕಳೆದ ದಶಕದಲ್ಲಿ ಆರಂಭಿಸಿದ ವಸತಿ ಶಾಲಾ ಯೋಜನೆಯಾಗಿದೆ. ಕೇಂದ್ರ ಸರ್ಕಾರವು ೧೯೮೭ರ ವೇಳೆಗೆ ಆರಂಭಿಸಿದ್ದ ನವೋದಯ ವಿದ್ಯಾಲಯದ ಪರಿಕಲ್ಪನೆಯೇ

ಇದಕ್ಕೆ ಸ್ಫೂರ್ತಿಯಾಗಿದೆ. ಈ ಶಾಲೆಗಳ ಆಡಳಿತಕ್ಕೆಂದೇ 'ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ' ಎಂಬ ಪ್ರತ್ಯೇಕ ನಿಗಮವೊಂದನ್ನು ಸ್ಥಾಪಿಸಲಾಯಿತು. ಇದು ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ. ಈ ಶಾಲೆಗಳಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗಾಗಿ ವಿಶೇಷ ಪ್ರವೇಶ ನೀಡಲಾಗುತ್ತದೆ. ಪ್ರತಿಯೊಂದು ಮೊರಾರ್ಜಿ ವಸತಿ ಶಾಲೆಯ ಮೇಲ್ವಿಚಾರಣೆಗೆ ಒಂದು ಆಡಳಿತ ಸಮಿತಿ ಇರುತ್ತದೆ. ಇದಕ್ಕೆ ಆಯಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಇದರ ಕಾರ್ಯದರ್ಶಿಯಾಗಿರುತ್ತಾರೆ. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಸರ್ಜನ್, ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಈ ಆಡಳಿತ ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಇಂತಹ ಎಂಟು ಮೊರಾರ್ಜಿ ವಸತಿ ಶಾಲೆಗಳಿವೆ. ಇವುಗಳಿರುವ ಸ್ಥಳ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಮುಂದಿನ ಕೋಷ್ಟಕದಲ್ಲಿದೆ.

**ಕೋಷ್ಟಕ ೧೩.೧೭: ಮೊರಾರ್ಜಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ವಿವರ (೨೦೧೧ರ ಮಾರ್ಚ್‌ವರೆಗೆ ಇದ್ದಂತೆ)**

| ಕ್ರ.ಸಂ. | ಶಾಲೆ ಇರುವ ತಾಲೂಕು | ವಿದ್ಯಾರ್ಥಿಗಳು | | ಒಟ್ಟು | ಷರಾ |
|---|---|---|---|---|---|
| | | ಬಾಲಕರು | ಬಾಲಕಿಯರು | | |
| ೧ | ಚಿಕ್ಕನಾಯಕನಹಳ್ಳಿ | ೧೦೦ | ೧೦೦ | ೨೦೦ | ಗುಬ್ಬಿ, ಕೊರಟಗೆರೆ, ಹಾಗೂ ತುಮಕೂರು ತಾಲೂಕುಗಳಲ್ಲಿ ಮೊರಾರ್ಜಿ ಶಾಲೆ ಇರುವುದಿಲ್ಲ. ಕುಣಿಗಲ್ ತಾಲ್ಲೂಕಿನಲ್ಲಿ ಎರಡು ಶಾಲೆಗಳಿವೆ. |
| ೨ | ಕುಣಿಗಲ್ | ೧೫೦ | ೧೦೦ | ೨೫೦ | |
| ೩ | ಮಧುಗಿರಿ | ೧೦೦ | – | ೧೦೦ | |
| ೪ | ಪಾವಗಡ | – | ೧೦೦ | ೧೦೦ | |
| ೫ | ಶಿರಾ | – | ೫೦ | ೫೦ | |
| ೬ | ತಿಪಟೂರು | ೫೦ | ೫೦ | ೧೦೦ | |
| ೭ | ತುರುವೇಕೆರೆ | ೧೦೦ | ೧೦೦ | ೨೦೦ | |
| ಒಟ್ಟು | | ೫೦೦ | ೫೦೦ | ೧೦೦೦ | |

ಆಧಾರ: ಜಿಲ್ಲಾ ಅಂಕಿ ಅಂಶಗಳ ನೋಟ. ಪುಟ–೮೧, ೨೦೧೦–೧೧

## ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು

೨೦೦೮ರಲ್ಲಿ ಕರ್ನಾಟಕ ಸರ್ಕಾರ ರೂಪಿಸಿದ ಇನ್ನೊಂದು ಶೈಕ್ಷಣಿಕ ಯೋಜನೆಯ ಅನ್ವಯ ಈ ವಸತಿ ಶಾಲೆಗಳು ರಾಜ್ಯದ ಹಲವೆಡೆ ಪ್ರಾರಂಭವಾಗಿವೆ. ತುಮಕೂರು ಜಿಲ್ಲೆಯಲ್ಲಿ ಇಂತಹ ಆರು ಶಾಲೆಗಳಿವೆ. ಇವು ತುಮಕೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಶಿರಾ, ಕೊರಟಗೆರೆ–ಗಳಲ್ಲಿವೆ. ಇವು ಹೆಣ್ಣುಮಕ್ಕಳಿಗಾಗಿಯೇ ಮೀಸಲಾದ ವಸತಿ ಶಾಲೆಗಳು. ಜಿಲ್ಲೆಯಲ್ಲಿರುವ ಈ ವಸತಿ ಶಾಲೆಗಳ ಸ್ಥಳ ಮತ್ತು ವಿದ್ಯಾರ್ಥಿಗಳ ಸಂಖ್ಯೆ (೨೦೧೧–೧೨)ರಲ್ಲಿದ್ದಂತೆ ಹೀಗಿದೆ.

**ಕೋಷ್ಟಕ ೧೩.೧೮ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು**

| ಕ್ರ.ಸಂ. | ಸ್ಥಳ | ವಿದ್ಯಾರ್ಥಿನಿಯರ ಸಂಖ್ಯೆ |
|---|---|---|
| ೧ | ಕಣಿವೇನಹಳ್ಳಿ ಗೇಟ್, ಪಾವಗಡ | ೧೫೦ |
| ೨ | ಸಿದ್ಧರಬೆಟ್ಟ, ಕೊರಟಗೆರೆ ತಾಲೂಕು | ೧೪೮ |
| ೩ | ತುಮಕೂರು ನಗರ | ೧೧೯ |
| ೪ | ಗುಬ್ಬಿ | ೯೪ |
| ೫ | ತುರುವೇಕೆರೆ | ೧೫೦ |
| ೬ | ಚಿಕ್ಕನಾಯಕನಹಳ್ಳಿ | ೧೩೦ |
| ಒಟ್ಟು | | ೭೯೧ |

ಇಲ್ಲಿ ಆರನೇ ತರಗತಿಯಿಂದ ೧೨ನೇ ತರಗತಿಯವರೆಗೆ ವಸತಿ ಸಹಿತ ಶಿಕ್ಷಣವನ್ನು ಬಾಲಕಿಯರಿಗೆ ನೀಡುವುದು ಸರ್ಕಾರದ ಯೋಜನೆ. ಪ್ರತಿವರ್ಷವೂ ಪ್ರವೇಶ ಪರೀಕ್ಷೆಯ ಮೂಲಕ ಪ್ರತಿ ಶಾಲೆಗೆ ೫೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. 'ಕರ್ನಾಟಕ ರಾಜ್ಯ ವಸತಿ ಶಾಲೆಗಳ ನಿಗಮ'ವು ಈ ಶಾಲೆಗಳು ಹಾಗೂ ಮೊರಾರ್ಜಿ ಶಾಲೆಗಳ ಆಡಳಿತದ ಜವಾಬ್ದಾರಿಯನ್ನು ರಾಜ್ಯಮಟ್ಟದಲ್ಲಿ ವಹಿಸಿಕೊಂಡಿದೆ. ಈ ನಿಗಮವು ಪ್ರವೇಶ ಪರೀಕ್ಷೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಮೂಲಕ ನಡೆಸುತ್ತದೆ. ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ನಿಗಮದ ಅಧಿಕಾರಿಗಳೂ ಇರುವ ಸಂದರ್ಶಕ ಸಮಿತಿ ಸಂದರ್ಶನ ಮಾಡಿ ಯೋಗ್ಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಿಗೆ ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಿಕೊಳ್ಳುವಾಗ ಶೇ. ೭೫ರಷ್ಟು ವಿದ್ಯಾರ್ಥಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದಿಂದ ಹಾಗೂ ಉಳಿದ ಶೇ. ೨೫ನ್ನು ಸಾಮಾನ್ಯ ವರ್ಗದಿಂದ ಆಯ್ಕೆ ಮಾಡಿಕೊಳ್ಳುತ್ತದೆ.

ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳು ಒಮ್ಮೆ ಆಯ್ಕೆಯಾದ ನಂತರ ಅವರ ಎಲ್ಲ ಖರ್ಚು ವೆಚ್ಚಗಳನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ. ವಿದ್ಯಾರ್ಥಿಗಳಿಗೆ ಊಟ, ವಸತಿ, ಶುಲ್ಕ ರಹಿತವಾದ ವಿದ್ಯಾಭ್ಯಾಸ, ಸಮವಸ್ತ್ರ ಹಾಗೂ ಪುಸ್ತಕಗಳನ್ನು ಈ ಶಾಲೆಗಳ ಆಡಳಿತವರ್ಗ (ನಿಗಮ)ವೇ ಒದಗಿಸುತ್ತದೆ. ಇದೊಂದು ತುಂಬ ಉಪಯುಕ್ತವಾದ ಯೋಜನೆ. ಮಹಿಳಾ ಸಬಲೀಕರಣ ಹಾಗೂ ಸಾಮಾಜಿಕ ನ್ಯಾಯ ಎರಡೂ ದೃಷ್ಟಿಗಳಿಂದ ಇಂತಹ ಯೋಜನೆಗಳು ಅತ್ಯವಶ್ಯವಾಗಿದೆ.

೨೦೦೯–೧೦ರಲ್ಲಿ ಆರಂಭವಾದ ಈ ಶಾಲೆಗಳು ಈಗ (೨೦೧೧–೧೨ರಲ್ಲಿ) ಮೂರನೇ ವರ್ಷದಲ್ಲಿ ನಡೆಯುತ್ತಿದ್ದು ಆರು, ಏಳು ಮತ್ತು ಎಂಟನೇ ತರಗತಿಗಳನ್ನು ಹೊಂದಿವೆ. ಆರರಿಂದ ಹತ್ತನೇ ತರಗತಿಯವರೆಗಿನ ಐದು ತರಗತಿಗಳಾಗುವ ಹೊತ್ತಿಗೆ ಪ್ರತಿ ಶಾಲೆಯಲ್ಲೂ ೧೧ ಜನ ಶಿಕ್ಷಕರು ಹಾಗೂ ೧೪ ಜನ ಶಿಕ್ಷಕೇತರ ಸಿಬ್ಬಂದಿ – ಹೀಗೆ ಒಟ್ಟು ೨೫ ಮಂದಿ ಸಿಬ್ಬಂದಿ ಇರಬೇಕೆಂದು ನಿರ್ಧರಿಸಲಾಗಿದೆ. ಪ್ರಸ್ತುತದಲ್ಲಿ ಪ್ರತಿ ಶಾಲೆಗೆ ಐವರು ಶಿಕ್ಷಕರು ಹಾಗೂ ಆರು ಮಂದಿ ಇತರ ಸಿಬ್ಬಂದಿ–ಹೀಗೆ ಒಟ್ಟು ೧೧ ಮಂದಿ ಸಿಬ್ಬಂದಿಗಳಿದ್ದಾರೆ. +೨ ಹಂತ ಆರಂಭವಾಗುವ ಹೊತ್ತಿಗೆ ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಪ್ರತಿಯೊಂದು ರಾಣಿ ಚೆನ್ನಮ್ಮ ಶಾಲೆಯಲ್ಲಿ ದೈಹಿಕ ಶಿಕ್ಷಕರು, ಕಾವಲುಗಾರ ಇರುತ್ತಾರೆ.

**ಕೇಂದ್ರೀಯ ವಿದ್ಯಾಲಯ:** ತುಮಕೂರು ನಗರದ ಹೊರವಲಯದಲ್ಲಿ ಕೇಂದ್ರೀಯ ವಿದ್ಯಾಲಯವಿದೆ. ೧೯೯೭ರಲ್ಲಿ ಆರಂಭವಾದ ಈ ವಿದ್ಯಾಲಯವು ಮೊದಲು ನಗರದೊಳಗೆ ಸುಸಜ್ಜಿತವಲ್ಲದ ರೀತಿಯಲ್ಲಿದ್ದು ೨೦೦೯ ರಿಂದ ತನ್ನ ಹೊಸ ಆವರಣದಲ್ಲಿ ಸುಸಜ್ಜಿತವಾಗಿ ರೂಪುಗೊಂಡಿದೆ. ವಿಶಾಲವಾದ ಆಟದ ಮೈದಾನ, ಸಾಕಷ್ಟು ಕೊಠಡಿಗಳಿರುವ ಕಟ್ಟಡ, ಎಲ್ಲವೂ ಇವೆ. ೨೫ ಶಿಕ್ಷಕರು ಮತ್ತು ಸಿಬ್ಬಂದಿ ಕೂಡಾ ಇರುವ ಈ ಕೇಂದ್ರೀಯ ವಿದ್ಯಾಲಯವು ಒಂದರಿಂದ ೧೨ನೇ ತರಗತಿಯವರೆಗೆ ಶಿಕ್ಷಣವನ್ನು ಇಂಗ್ಲೀಷ್ ಮಾಧ್ಯಮದಲ್ಲಿ ನೀಡುತ್ತಿದೆ. ಜಿಲ್ಲಾಧಿಕಾರಿಗಳು ಇದರ ಸ್ಥಳೀಯ ಆಡಳಿತ ಮಂಡಳಿಯ ಅಧ್ಯಕ್ಷರು. ಇದಕ್ಕೆ ಪ್ರವೇಶ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಇಲ್ಲಿ ತ್ರಿಭಾಷಾ ಸೂತ್ರವನ್ನು ಅನುಸರಿಸಲಾಗುತ್ತಿದೆ. ಇಂಗ್ಲೀಷ್, ಸಂಸ್ಕೃತ, ಹಿಂದಿ–ಇಲ್ಲಿ ಕಲಿಸುವ ಭಾಷೆಗಳು. ೨೦೧೧–೧೨ನೇ ಸಾಲಿನಲ್ಲಿ ಇಲ್ಲಿ ೭೫೦ ವಿದ್ಯಾರ್ಥಿಗಳು ಕಲಿಯುತ್ತಿದ್ದರು.

**ಜವಾಹರ್ ನವೋದಯ ವಿದ್ಯಾಲಯ:** ತುಮಕೂರು ನಗರದಿಂದ ಸುಮಾರು ಹತ್ತು ಕಿ.ಮೀ. ಗಳ ದೂರದಲ್ಲಿ ದೇವರಾಯನದುರ್ಗಕ್ಕೆ ಹೋಗುವ ರಸ್ತೆಯಲ್ಲಿ, 'ಜವಾಹರ್ ನವೋದಯ ವಿದ್ಯಾಲಯ'ವಿದೆ. ಇದರ ಸಮೀಪವಿರುವ 'ಗೊಲ್ಲಹಳ್ಳಿ'ಯ ಮೂವತ್ತೆಂಟು ಎಕರೆಗಳಷ್ಟು ವಿಸ್ತಾರವಾದ ಪ್ರಾಕೃತಿಕ ವಾತಾವರಣದಲ್ಲಿ ಈ ವಿದ್ಯಾಲಯ ಸುಸಜ್ಜಿತವಾಗಿ ಸ್ಥಾಪಿತವಾಗಿದೆ. ೧೯೮೫ರಲ್ಲಿ ಆರಂಭವಾದ ಈ ವಿದ್ಯಾಲಯ ಮೊದಲು ಒಂದು ವರ್ಷ ತುಮಕೂರು ನಗರದೊಳಗೆ, ಈಗಿನ ವಿಶ್ವವಿದ್ಯಾಲಯದ ವಿಜ್ಞಾನ ಮತ್ತು ಕಲಾ ಕಾಲೇಜುಗಳ ಆವರಣದಲ್ಲೇ ನಡೆಯುತ್ತಿತ್ತು. ೧೯೮೬ರಲ್ಲಿ ಈಗಿನ ಕ್ಯಾಂಪಸ್‌ಗೆ ಶಾಲೆ ಸ್ಥಳಾಂತರಗೊಂಡಿತು. ಈಗ ತುಂಬ ಸುಸಜ್ಜಿತವಾಗಿ ಒಂದು ಶೈಕ್ಷಣಿಕ ವಾತಾವರಣ ಇಲ್ಲಿ ನಿರ್ಮಾಣಗೊಂಡಿದೆ. ಈ 'ಜವಾಹರ್ ನವೋದಯ ವಿದ್ಯಾಲಯ'ದಲ್ಲಿ ಆರನೇ ತರಗತಿಯಿಂದ ೧೨ನೇ ತರಗತಿಯವರೆಗೆ ವಿದ್ಯಾಭ್ಯಾಸಕ್ಕೆ ಅವಕಾಶವಿದೆ. ಅಂದರೆ ಐದನೇ ತರಗತಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಇಲ್ಲಿ ಆರನೇ ತರಗತಿಗೆ ಪ್ರವೇಶಾವಕಾಶ ಪಡೆದುಕೊಳ್ಳಬಹುದು. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಅಧೀನದಲ್ಲಿರುವ ಪ್ರತ್ಯೇಕ ವಿಭಾಗವು ಈ ನವೋದಯ ವಿದ್ಯಾಲಯಗಳ

ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ. ಸಿ.ಬಿ.ಎಸ್.ಇ. ಪಠ್ಯಕ್ರಮದ ಪ್ರಕಾರ ಇಲ್ಲಿ ಪಾಠಗಳು/ಪರೀಕ್ಷೆಗಳು ನಡೆಯುತ್ತವೆ. ಇಂಗ್ಲೀಷ್ ಇಲ್ಲಿನ ಬೋಧನಾ ಮಾಧ್ಯಮ. ಆದರೆ ಆರು ಮತ್ತು ಏಳನೇ ತರಗತಿಗಳಲ್ಲಿ ಇಂಗ್ಲೀಷ್ ಮಾಧ್ಯಮ ರೂಢಿಯಲ್ಲಿಲ್ಲದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲೇ ಬರೆಯಲು ಅವಕಾಶ ನೀಡಲಾಗುತ್ತದೆ. ಆರನೇ ತರಗತಿಗೆ ೮೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿದೆ. ಇದು ವಸತಿ ಶಾಲೆಯಾದ್ದರಿಂದ ಎಲ್ಲರೂ ಇಲ್ಲೇ ಇರಬೇಕಾದ್ದು ಕಡ್ಡಾಯ. ಇಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶದ ಮಕ್ಕಳಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಾಗೂ ಗಂಡು ಮತ್ತು ಹೆಣ್ಣುಮಕ್ಕಳಿಗೆ ನಿರ್ದಿಷ್ಟ ಸಂಖ್ಯೆಯ ಸೀಟುಗಳು ಮೀಸಲಾಗಿರುತ್ತವೆ. ೨೦೧೧–೧೨ನೇ ಸಾಲಿನಲ್ಲಿ ಇಲ್ಲಿ ೪೮೦ ವಿದ್ಯಾರ್ಥಿಗಳು ಇದ್ದರು. ಆರರಿಂದ ೧೦ನೇ ತರಗತಿಯವರೆಗೆ ಪ್ರತಿ ತರಗತಿಯಲ್ಲಿ ತಲಾ ೪೦ ವಿದ್ಯಾರ್ಥಿಗಳ ಎರಡು ವಿಭಾಗ (ಸೆಕ್ಷನ್)ಗಳಿವೆ. +೨ (ಪಿ.ಯು.ಸಿ.) ಹಂತದಲ್ಲಿ ಒಂದೊಂದೇ ವಿಭಾಗವಿದೆ.

ಈ ಶಾಲೆಗೆ ಆಯ್ಕೆಯಾದ ಮಕ್ಕಳಿಗೆ ಎಲ್ಲವೂ ಉಚಿತ. ಹಾಸ್ಟೆಲ್ ವೆಚ್ಚ, ಪುಸ್ತಕ, ಸಮವಸ್ತ್ರದ ವೆಚ್ಚ ಎಲ್ಲವನ್ನೂ ಸರ್ಕಾರವೇ ಭರಿಸುತ್ತದೆ. ಈ ಶಾಲೆಯಲ್ಲಿ ಹಲವು ಆಟಗಳ ಅಭ್ಯಾಸಕ್ಕೆ ಅವಕಾಶವಿದೆ. ವಾಲಿಬಾಲ್, ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್, ಬ್ಯಾಡ್ಮಿಂಟನ್ – ಇಂತಹ ಆಟಗಳ ಅಭ್ಯಾಸಕ್ಕೆ ಬೇಕಾದ ಕೋರ್ಟುಗಳಿವೆ. ಜಿಮ್ನೇಷಿಯಂ ಇದೆ. ಬಿಲ್ಲುಗಾರಿಕೆಯ ಅಭ್ಯಾಸಕ್ಕೆ ಅಗತ್ಯವಾದ ಸಲಕರಣೆಗಳೂ ಇವೆ. ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರಿದ್ದು ಇವರಲ್ಲಿ ಒಬ್ಬರು ಪುರುಷರು, ಇನ್ನೊಬ್ಬರು ಮಹಿಳೆಯರಿದ್ದಾರೆ. ಆಗಾಗ ವಿಶೇಷ ಕ್ರೀಡಾ ಕೋಚ್‌ಗಳನ್ನು ಕರೆಸಿ ತರಬೇತಿ ನೀಡಲಾಗುತ್ತದೆ..

ಇಲ್ಲಿ ೨೦೧೧–೧೨ನೇ ಸಾಲಿನಲ್ಲಿ ಒಟ್ಟು ೨೩ ಜನ ಶಿಕ್ಷಕರಿದ್ದು, ಇವರಲ್ಲಿ ೧೭ ಜನ ವಿಷಯ ಬೋಧಕರು, ಇಬ್ಬರು ದೈಹಿಕ ಶಿಕ್ಷಕರು, ಸಂಗೀತ, ಚಿತ್ರಕಲೆ, ಕರಕುಶಲ ಕಲೆ (ಎಸ್‌ಯುಪಿಡಬ್ಲ್ಯು) ಹಾಗೂ ಕಂಪ್ಯೂಟರ್ ಶಿಕ್ಷಣಕ್ಕೆ ಪ್ರತ್ಯೇಕ ಶಿಕ್ಷಕರಿದ್ದರು. ಈ ಸಂಸ್ಥೆಯದೇ ಒಂದು ಅಂತರ್ ಜಾಲತಾಣವೂ ಇದೆ: www.jnvtumkur.org <http://www.jnvtumkur.org> ಈ ಶಾಲೆಯಲ್ಲಿ ನಲವತ್ತು ಕಂಪ್ಯೂಟರ್‌ಗಳಿರುವ ಕಂಪ್ಯೂಟರ್ ಪ್ರಯೋಗಾಲಯವಿದೆ. +೨ ಹಂತದ ತರಗತಿಗಳಿಗೆ ವಾರದಲ್ಲಿ ಎರಡು ಅವಧಿಗೆ ಕಂಪ್ಯೂಟರ್ ಶಿಕ್ಷಣವಿದ್ದರೆ, ಅದಕ್ಕಿಂತ ಕೆಳಗಿನ ತರಗತಿಗಳಿಗೆ ವಾರಕ್ಕೊಂದು ಅವಧಿಗೆ ಮಾತ್ರ ಕಂಪ್ಯೂಟರ್ ತರಬೇತಿ ಇರುತ್ತದೆ. ಇಲ್ಲಿನ ಗ್ರಂಥಾಲಯದಲ್ಲಿ ಮೂರು ಸಾವಿರಕ್ಕೂ ಅಧಿಕ ಪುಸ್ತಕಗಳಿವೆ. ಅಗತ್ಯ ವಿದ್ಯಾರ್ಹತೆಯುಳ್ಳ ಗ್ರಂಥಾಲಯ ಅಧಿಕಾರಿ ಇದ್ದಾರೆ. ವಾರಕ್ಕೆ ಒಂದು ಪೀರಿಯಡ್‌ನಂತೆ ಪ್ರತಿ ತರಗತಿಗೂ ಗ್ರಂಥಾಲಯದ ಅವಧಿ ಇರುತ್ತದೆ. ೧೧, ೧೨ನೇ ತರಗತಿಗಳಿಗೆ ವಾರಕ್ಕೆ ಎರಡು ಪೀರಿಯಡ್‌ಗಳ ಗ್ರಂಥಾಲಯದ ಅವಧಿ ಇರುತ್ತದೆ. ಇಲ್ಲಿ ಬಾಲಕ ಬಾಲಕಿಯರಿಗೆ ಪ್ರತ್ಯೇಕ ವಸತಿನಿಲಯಗಳಿವೆ. ೨೦೧೧ರ ಏಪ್ರಿಲ್‌ನಲ್ಲಿ ನಡೆದ ೧೦ನೇ ತರಗತಿ ಪರೀಕ್ಷೆಯಲ್ಲಿ ಹತ್ತು ಮಂದಿ ವಿದ್ಯಾರ್ಥಿಗಳು ಎ ಪ್ಲಸ್ ದರ್ಜೆಯನ್ನು ಪಡೆದಿದ್ದರು.

**ಶಾಲೆಗಳಿಗೆ ಒದಗಿಸಿರುವ ವಿವಿಧ ಸೌಲಭ್ಯಗಳು:** ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಸರ್ಕಾರವು ಶಾಲೆಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುವಲ್ಲಿ ಹೆಚ್ಚಿನ ಆಸಕ್ತಿ ವಹಿಸಿದೆ. ಶಾಲಾ ಶಿಕ್ಷಣವು ಸಾಕಷ್ಟು ಸೌಕರ್ಯಯುತವಾಗಿರಬೇಕು ಹಾಗೂ ಆರ್ಥಿಕ ತೊಂದರೆಯಿಂದಾಗಿ ಯಾವ ಮಗುವೂ ಶಾಲೆಗೆ ಬಾರದೆ ಉಳಿಯುವಂತಾಗಬಾರದು ಎಂಬ ಉದಾತ್ತ ಧ್ಯೇಯ ಇದರ ಹಿಂದೆ ಇದೆ. ಈ ಸದಾಶಯದಿಂದಾಗಿ ಕಳೆದೊಂದು ದಶಕದಲ್ಲಿ ಶಾಲೆಗಳಿಗೆ ಕಾಂಪೌಂಡ್, ಹೆಚ್ಚುವರಿ ಕೋಣೆಗಳು, ಕುಡಿಯುವ ನೀರು, ಶೌಚಾಲಯ – ಇಂತಹ ಭೌತಿಕ ಸೌಲಭ್ಯಗಳನ್ನು ಒದಗಿಸಿರುತ್ತದೆ. ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್, ಸಮವಸ್ತ್ರ, ಪುಸ್ತಕಗಳು, ಸೈಕಲ್, ಮಧ್ಯಾಹ್ನದ ಬಿಸಿಯೂಟ–ಇವನ್ನು ಒದಗಿಸಲಾಗುತ್ತಿದೆ. ಇದರಿಂದಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಹೆಚ್ಚುತ್ತಿದೆ. ಶಾಲಾ ಶುಲ್ಕದ ದರ ಕಡಿಮೆ ಇದ್ದು ಹೆಣ್ಣುಮಕ್ಕಳಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪೂರ್ಣ ರಿಯಾಯಿತಿ ಇದೆ. ತುಮಕೂರು ಜಿಲ್ಲೆಯಲ್ಲಿ ಒದಗಿಸಲಾದ ಇಂತಹ ಸೌಲಭ್ಯಗಳ ವಿವರ ಹೀಗಿದೆ.

**ಕೋಷ್ಟಕ ೧೩.೧೯ ೨೦೧೦–೧೧ನೇ ಸಾಲಿನಲ್ಲಿ ವಿತರಣೆಯಾದ ಉಚಿತ ಸಮವಸ್ತ್ರಗಳ ವಿವರ**

| ಕ್ರ.ಸಂ. | ತಾಲೂಕು | ವಿತರಣೆಯಾದ ಉಚಿತ ಸಮವಸ್ತ್ರಗಳ ಸಂಖ್ಯೆ | |
|---|---|---|---|
| | | ೨೦೧೦ | ೨೦೧೧ |
| ೧ | ಚಿಕ್ಕನಾಯಕನಹಳ್ಳಿ | ೯,೧೧೩ | ೯,೨೧೧ |
| ೨ | ಗುಬ್ಬಿ | ೧೨,೧೬೦ | ೧೨,೩೨೫ |
| ೩ | ಕೊರಟಗೆರೆ | ೯,೨೩೫ | ೯,೪೪೮ |
| ೪ | ಕುಣಿಗಲ್ | ೯,೫೩೩ | ೯,೭೯೩ |
| ೫ | ಮಧುಗಿರಿ | ೧೫,೧೨೮ | ೧೪,೩೯೧ |
| ೬ | ಪಾವಗಡ | ೧೩,೪೮೯ | ೧೩,೮೨೩ |
| ೭ | ಶಿರಾ | ೧೮,೦೪೭ | ೧೭,೮೫೫ |
| ೮ | ತಿಪಟೂರು | ೭,೨೧೧ | ೭,೫೦೫ |
| ೯ | ತುಮಕೂರು | ೧೭,೧೫೧ | ೧೮,೫೭೪ |
| ೧೦ | ತುರುವೇಕೆರೆ | ೬,೨೩೪ | ೬,೩೯೪ |
| ಒಟ್ಟು | | ೧,೧೭,೩೦೧ | ೧,೧೯,೩೧೯ |

**೨೦೧೦–೧೧ನೇ ಸಾಲಿನಲ್ಲಿ ಪ್ರೋತ್ಸಾಹಧನ ಕಾರ್ಯಕ್ರಮದಡಿ ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ವಿತರಣೆ ಮಾಡಿರುವ ವಿವರ.**

| | ಬ್ಯಾಗ್ | ನೋಟ್‌ಬುಕ್ | ಖರ್ಚಾದ ಹಣ |
|---|---|---|---|
| ತುಮಕೂರು ಉತ್ತರ ಜಿಲ್ಲೆ | ೨೧,೦೫೭ | ೩೫,೬೭೯ | ರೂ. ೩೪,೫೬,೮೭೫ |
| ತುಮಕೂರು ದಕ್ಷಿಣ ಜಿಲ್ಲೆ | ೨೭,೭೦೭ | ೪೭,೮೩೫ | ರೂ. ೩೭,೬೧,೬೯೩ |
| ಒಟ್ಟು | | | ರೂ. ೭೨,೧೮,೫೬೮ |

**ಷರಾ:** ೧) ಇವುಗಳನ್ನು ಪರಿಶಿಷ್ಟ ಜಾತಿ /ಪಂಗಡದ, ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಹಂಚಲಾಗಿದೆ. ೨) ಪುಸ್ತಕ ಬ್ಯಾಗ್‌ಗಳನ್ನು ಶಾಲೆಗೆ ಸೇರುವ ಹಂತದಲ್ಲಿರುವ ಮಕ್ಕಳಿಗೆ (ಒಂದರಿಂದ ಐದನೇ ತರಗತಿ) ಹಾಗೂ ಪುಸ್ತಕಗಳನ್ನು ಒಂದರಿಂದ ಹತ್ತನೇ ತರಗತಿವರೆಗಿನ ಮಕ್ಕಳಿಗೆ ಹಂಚಲಾಗಿದೆ. ಆಧಾರ: ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯ ವರದಿ – ತುಮಕೂರು/ಮಧುಗಿರಿ

**ಉಚಿತ ಬೈಸಿಕಲ್ ಹಂಚಿಕೆ:** ೨೦೦೮–೦೯ನೇ ಇಸವಿಯಿಂದ ಕರ್ನಾಟಕ ಸರ್ಕಾರವು ಬಡಮಕ್ಕಳಿಗೆ ಉಚಿತವಾಗಿ ಬೈಸಿಕಲ್‌ಗಳನ್ನು ಹಂಚುತ್ತಿದೆ. ಮೊದಲ ವರ್ಷ ಇದನ್ನು ಸರ್ಕಾರಿ ಶಾಲೆಗಳ ಹೆಣ್ಣುಮಕ್ಕಳಿಗೆ ಮಾತ್ರ ವಿತರಿಸಲಾಯಿತು. ನಂತರ ಇದನ್ನು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಎಲ್ಲ ಅರ್ಹ ಮಕ್ಕಳಿಗೆಂದು ವಿಸ್ತರಿಸಲಾಯಿತು. (ಆದರೆ ಗುಬ್ಬಿ ತಾಲೂಕಿನಲ್ಲಿ ಮಾತ್ರ ಅವಶ್ಯವಿದ್ದ ಒಟ್ಟು ೩,೦೮೬ ಬೈಸಿಕಲ್‌ಗಳ ಪೈಕಿ ೯೮೭ ಬೈಸಿಕಲ್‌ಗಳನ್ನು ವಿತರಿಸಲಾಗಿದೆ.) ೨೦೧೧–೧೨ನೇ ಸಾಲಿನಲ್ಲಿ ಜಿಲ್ಲೆಯ ಪ್ರತಿ ತಾಲೂಕಿಗೆ ಅವಶ್ಯವಿದ್ದ ಬೈಸಿಕಲ್‌ಗಳು ಮತ್ತು ಸರಬರಾಜಾದ ಬೈಸಿಕಲ್ ಗಳ ವಿವರ ಈ ಮುಂದಿನಂತಿದೆ.

**ಕೋಷ್ಟಕ ೧೩.೨೦: ೨೦೧೧-೧೨ನೇ ಸಾಲಿನಲ್ಲಿ ಉಚಿತ ಬೈಸಿಕಲ್ ಹಂಚಿಕೆ ವಿವರ**

| ಕ್ರ.ಸಂ. | ತಾಲೂಕು | ಅವಶ್ಯವಿದ್ದ ಬೈಸಿಕಲ್‌ಗಳ ಸಂಖ್ಯೆ | | | ಸರಬರಾಜಾಗಿರುವ ಬೈಸಿಕಲ್‌ಗಳ ಒಟ್ಟು ಸಂಖ್ಯೆ |
|---|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು | |
| ೧ | ಚಿಕ್ಕನಾಯಕನಹಳ್ಳಿ | ೧,೭೨೦ | ೧,೩೫೬ | ೩,೦೭೬ | ೬೦೦ |
| ೨ | ಗುಬ್ಬಿ | ೧,೪೯೫ | ೧,೬೭೭ | ೩,೧೭೨ | ೧,೦೩೮ |
| ೩ | ಕೊರಟಗೆರೆ | ೧,೧೬೧ | ೧,೧೫೮ | ೨,೩೧೯ | ೨,೪೦೦ |
| ೪ | ಕುಣಿಗಲ್ | ೧,೩೩೫ | ೧,೪೧೫ | ೨,೭೫೦ | ೯೬೮ |
| ೫ | ಮಧುಗಿರಿ | ೨,೦೬೬ | ೨,೦೧೪ | ೪,೦೮೦ | ೩,೯೮೨ |
| ೬ | ಪಾವಗಡ | ೧,೫೭೫ | ೧,೫೪೫ | ೩,೧೭೦ | ೨,೦೦೦ |
| ೭ | ಶಿರಾ | ೧,೯೭೧ | ೧,೮೫೯ | ೩,೮೩೦ | ೨,೪೦೦ |
| ೮ | ತಿಪಟೂರು | ೧,೩೩೭ | ೧,೨೭೭ | ೨,೬೧೪ | ೧,೩೯೪ |
| ೯ | ತುಮಕೂರು | ೨,೯೭೮ | ೩,೦೨೭ | ೬,೦೦೫ | – |
| ೧೦ | ತುರುವೇಕೆರೆ | ೮೮೧ | ೯೦೨ | ೧,೭೮೩ | ೧,೭೮೩ |
| ಒಟ್ಟು | | ೧೬,೫೧೯ | ೧೬,೨೮೦ | ೩೨,೭೯೯ | ೧,೭೮೩ |

ಆಧಾರ: ಶಿಕ್ಷಣ ಇಲಾಖೆ ಉಪನಿರ್ದೇಶಕರು – ತುಮಕೂರು / ಮಧುಗಿರಿ ಇವರ ಕಚೇರಿ ಮಾಹಿತಿ.

**ಬಿಸಿಯೂಟದ ಯೋಜನೆ (ಅಕ್ಷರದಾಸೋಹ):** ಶಾಲೆಯಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸುವ ದೃಷ್ಟಿಯಿಂದ ಬಡಮಕ್ಕಳಿಗೆ ಮಧ್ಯಾಹ್ನ ಶಾಲೆಯಲ್ಲಿಯೇ ಬಿಸಿಯೂಟ ನೀಡುವ ಯೋಜನೆಯೊಂದು ೨೦೦೪-೦೫ರ ಸಾಲಿನಲ್ಲಿ ಆರಂಭವಾಯಿತು. ಇದಕ್ಕೆ ಕೇಂದ್ರ ಸರ್ಕಾರವೂ ಗಣನೀಯ ನೆರವು ಕೊಟ್ಟಿತು. ಶಾಲೆಯಲ್ಲಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮಧ್ಯಾಹ್ನದ ವೇಳೆಗೆ ಬಿಸಿಯಾದ ಊಟವನ್ನು ನೀಡುವುದು ಇದರ ಮುಖ್ಯ ಗುರಿ. ಇದಕ್ಕಾಗಿ ಶಾಲೆಗಳಿಗೆ ಅಗತ್ಯವಾದಷ್ಟು ಅಕ್ಕಿ ಮತ್ತು ಬೇಳೆ ನೀಡಲಾಗುತ್ತದೆ. ತರಕಾರಿ ಮತ್ತು ಉರುವಲಿಗಾಗಿ ಒಂದಿಷ್ಟು ಹಣವನ್ನು ನೀಡಲಾಗುತ್ತದೆ. ಅಡಿಗೆಯವರು, ಕಾರ್ಮಿಕರಿಗೂ ನಿರ್ದಿಷ್ಟ ಕೂಲಿ ಕೊಡುತ್ತಾರೆ. ಈ ಯೋಜನೆಯ ಫಲವಾಗಿ ಶಾಲೆಗಳಲ್ಲಿ ಹಾಜರಾತಿ ಹೆಚ್ಚಿದೆ. ಒಂದರಿಂದ ಹತ್ತನೇ ತರಗತಿವರೆಗಿನ ಎಲ್ಲ ಮಕ್ಕಳಿಗೆ ಬಿಸಿಯೂಟ ನೀಡಲಾಗುತ್ತದೆ.

ತುಮಕೂರು ಜಿಲ್ಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದ ಫಲಾನುಭವಿಗಳ ವಿವರ ೨೦೧೧-೧೨ನೇ ಸಾಲಿನಲ್ಲಿದ್ದಂತೆ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ. ಇದರಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿವರಗಳೂ ಸೇರಿವೆ.

**ಕೋಷ್ಟಕ ೧೩.೨೧: ಜಿಲ್ಲೆಯ ಶಾಲೆಗಳಲ್ಲಿ ಬಿಸಿಯೂಟದ ವ್ಯವಸ್ಥೆಯ ಫಲಾನುಭವಿಗಳು**

| ಕ್ರ.ಸಂ | ವಿಭಾಗ | ದಾಖಲಾಗಿರುವ ವಿದ್ಯಾರ್ಥಿಗಳು | | | | ಒಟ್ಟು |
|---|---|---|---|---|---|---|
| | | ತರಗತಿ ಒಂದರಿಂದ ಐದರವರೆಗೆ | ತರಗತಿ ಆರರಿಂದ ಏಳರವರೆಗೆ | ಎಂಟನೇ ತರಗತಿ | ತರಗತಿ ಒಂಬತ್ತರಿಂದ ಹತ್ತನೆ ತರಗತಿ | |
| ೧ | **ತುಮಕೂರು ಉತ್ತರ ಜಿಲ್ಲೆ** | ೫೮೫೧೫ | ೨೫೭೪೧ | ೭೬೩೫ | ೧೪೯೮೫ | ೧೦೬೮೭೬ |
| ೨ | **ತುಮಕೂರು ದಕ್ಷಿಣ ಜಿಲ್ಲೆ** | ೭೬೪೯೯ | ೩೭೬೭೪ | ೧೮೭೧೮ | ೩೬೪೩೬ | ೧೬೯೨೯೭ |
| ಒಟ್ಟು | | **೧೩೪೯೮೪** | **೬೩೪೧೫** | **೨೬೩೫೩** | **೫೧೪೨೧** | **೨೭೬೧೭೩** |

| ಕ್ರ.ಸಂ | ವಿಭಾಗ | ಫಲಾನುಭವಿಗಳು | | | | ಒಟ್ಟು |
|---|---|---|---|---|---|---|
| | | ತರಗತಿ ಒಂದರಿಂದ ಐದರವರೆಗೆ | ತರಗತಿ ಆರರಿಂದ ಏಳರವರೆಗೆ | ಎಂಟನೇ ತರಗತಿ | ತರಗತಿ ಒಂಭತ್ತರಿಂದ ಹತ್ತನೆತರಗತಿ | |
| ೧ | **ತುಮಕೂರು ಉತ್ತರ ಜಿಲ್ಲೆ** | ೫೮೩೫೩ | ೨೫೫೯೪ | ೭೫೫೭ | ೧೪೬೧ | ೧೦೬೧೩೫ |
| ೨ | **ತುಮಕೂರು ದಕ್ಷಿಣ ಜಿಲ್ಲೆ** | ೭೫೧೦೩ | ೩೬೯೫೭ | ೧೮೦೪೦ | ೩೫೩೮೧ | ೧೬೫೪೮೧ |
| **ಒಟ್ಟು** | | **೧೩೩೪೫೬** | **೬೨೫೫೧** | **೨೫೫೯೭** | **೨೦೦೧೨** | **೨೭೧೬೧೬** |

**ಆಧಾರ: ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ ದಾಖಲೆಗಳು–ತುಮಕೂರು/ಮಧುಗಿರಿ**

**ಇತರ ಸೌಲಭ್ಯಗಳು:** ಶಾಲೆಗಳಿಗೆ ರಾಜ್ಯ ಸರ್ಕಾರವು ಭೌತಿಕ ಸೌಲಭ್ಯಗಳನ್ನು ಹೆಚ್ಚಿಸಿ ಒಳ್ಳೆಯ ಕಲಿಕಾ ವಾತಾವರಣವನ್ನು ನಿರ್ಮಾಣ ಮಾಡುವತ್ತ ಕಳೆದೊಂದು ದಶಕದಲ್ಲಿ ವಿಶೇಷ ಗಮನ ಹರಿಸಿರುವುದು ಉಲ್ಲೇಖನೀಯ ಅಂಶವಾಗಿದೆ. ೨೦೦೭–೦೮ರಿಂದ ಆರ್.ಐ.ಡಿ.ಎಫ್. ಯೋಜನೆಗಳಡಿಯಲ್ಲಿ ಲಭ್ಯವಾದ ಧನಸಹಾಯದಿಂದ ಹಾಗೂ ೨೦೦೯–೧೦ನೇ ಸಾಲಿನಿಂದ ರಾಜ್ಯ ಸರ್ಕಾರ ಕೈಗೆತ್ತಿಕೊಂಡ 'ಶಾಲೆಗಳಿಗೆ ಪಂಚಸೌಲಭ್ಯಗಳು' (ಶೌಚಾಲಯ, ಕುಡಿಯುವ ನೀರು, ಪ್ರಾಕಾರ ನಿರ್ಮಾಣ, ಪೀಠೋಪಕರಣ ಮತ್ತು ಪಾಠೋಪಕರಣಗಳು) ಯೋಜನೆಯಡಿಯಲ್ಲಿ ಈ ಅಂಶಗಳ ಅಭಿವೃದ್ಧಿಗಾಗಿ ಜಿಲ್ಲೆಗೆ ನೀಡಲಾಗಿದೆ. ಇದಲ್ಲದೆ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಾಗೂ ಡಾ. ಡಿ.ಎಂ. ನಂಜುಂಡಪ್ಪ ವರದಿಯನ್ವಯ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಶಾಲೆಗಳಲ್ಲಿನ ಸೌಲಭ್ಯಗಳನ್ನು ಹೆಚ್ಚಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಈ ಪೈಕಿ 'ಅಕ್ಷರ ದಾಸೋಹ' ದ ಅಡುಗೆ ಕೇಂದ್ರಗಳ ನಿರ್ಮಾಣಕ್ಕಾಗಿ ಮಂಜೂರಾದ ಹಣ ಮಾತ್ರ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳೆರಡಕ್ಕೂ ಮಂಜೂರಾಗಿದೆ. ತುಮಕೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯ ಆರು ತಾಲೂಕುಗಳಲ್ಲಿನ ಸರ್ಕಾರಿ ಹಾಗೂ ಅನುದಾನಿತ ಶಾಲೆಗೆ ಸಂಬಂಧಿಸಿದ ಅಡುಗೆ ಕೇಂದ್ರಗಳ ಸಂಖ್ಯೆ ಹೀಗಿದೆ:

| | **ಸರ್ಕಾರಿ ಶಾಲೆಗಳು** | **ಅನುದಾನಿತ ಶಾಲೆಗಳು** | **ಒಟ್ಟು** |
|---|---|---|---|
| **ಪ್ರೌಢಶಾಲೆಗಳು** | ೭೦ | ೧೯೨ | ೨೬೨ |
| **ಪ್ರಾಥಮಿಕ ಶಾಲೆಗಳು** | ೨,೧೫೮ | ೫೦ | ೨,೨೦೮ |
| **ಒಟ್ಟು** | **೨,೨೨೮** | **೨೪೨** | **೨,೪೭೦** |

ಆರ್.ಐ.ಡಿ.ಎಫ್. ೧೨ ರಿಂದ ೧೬ರವರೆಗಿನ ಯೋಜನೆಗಳ ಮೂಲಕ ಪ್ರೌಢಶಾಲೆಯಲ್ಲಿ ಕೊಠಡಿಗಳ ನಿರ್ಮಾಣಕ್ಕೆ ಬಿಡುಗಡೆಯಾದ ಹಣ (೨೦೦೭–೦೮ನೇ ಸಾಲಿನಿಂದ) ಗಮನಾರ್ಹ ಪ್ರಮಾಣದಲ್ಲಿದೆ. ಅದರ ವಿವರ ಹೀಗಿದೆ.

| **ಶೈಕ್ಷಣಿಕ ವಿಭಾಗ** | **ಮಂಜೂರಾದ ಕೊಠಡಿಗಳ ಸಂಖ್ಯೆ** | **ಮಂಜೂರಾದ ಹಣ (ಲಕ್ಷ ರೂ. ಗಳಲ್ಲಿ)** |
|---|---|---|
| ತುಮಕೂರು ಉತ್ತರ ಜಿಲ್ಲೆ | ೧೬೨ | ೮೦,೧೭೦ |
| ತುಮಕೂರು ದಕ್ಷಿಣ ಜಿಲ್ಲೆ | ೨೨೦ | ೧,೧೫,೪೦೧ |
| ಒಟ್ಟು | ೩೮೨ | ೧,೯೫,೫೭೧ |

**ಆಧಾರ: ಉಪನಿರ್ದೇಶಕರು, ಶಿಕ್ಷಣ ಇಲಾಖೆ – ತುಮಕೂರು / ಮಧುಗಿರಿ – ಇವರ ಕಚೇರಿಯ ವರದಿಗಳು**

ಶೌಚಾಲಯ, ಕಾಂಪೌಂಡ್– ಇತ್ಯಾದಿಗಳ ನಿರ್ಮಾಣಕ್ಕೂ ಇದೇ ಅನುಪಾತದಲ್ಲಿ ಹಣ ಬಿಡುಗಡೆಯಾಗಿರುವುದು ಕಂಡುಬರುತ್ತದೆ. ಇದರಿಂದ ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಹೆಚ್ಚಿಸಿ ವಿದ್ಯಾರ್ಥಿಗಳನ್ನು ಶಾಲೆ ಬಿಡದಂತೆ ಮಾಡಲು ಪ್ರಯತ್ನಿಸುತ್ತಿದೆ.

ಹತ್ತನೇ ತರಗತಿ (ಎಸ್.ಎಸ್.ಎಲ್.ಸಿ.) ಫಲಿತಾಂಶ: ಜಿಲ್ಲೆಯಲ್ಲಿ ೨೦೧೦ನೇ ಏಪ್ರಿಲ್ ತಿಂಗಳಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದ ತಾಲೂಕುವಾರು ವಿವರ ಹೀಗಿದೆ.

**ಕೋಷ್ಟಕ ೧೩.೨೧: ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದ ತಾಲೂಕುವಾರು ವಿವರ**

| ಕ್ರ.ಸಂ. | ತಾಲೂಕು | ಪರೀಕ್ಷೆಗೆ ಕುಳಿತವರು | ತೇರ್ಗಡೆಯಾದವರು | ಶೇಕಡಾವಾರು ಫಲಿತಾಂಶ |
|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೨,೬೩೫ | ೧,೭೬೦ | ೬೬.೭೯ |
| ೨ | ಗುಬ್ಬಿ | ೩,೭೨೬ | ೨,೭೪೨ | ೭೩.೫೯ |
| ೩ | ಕೊರಟಗೆರೆ | ೨,೫೮೬ | ೨,೨೦೬ | ೮೫.೩೧ |
| ೪ | ಕುಣಿಗಲ್ | ೩,೩೫೫ | ೨,೭೫೯ | ೮೨.೩೩ |
| ೫ | ಮಧುಗಿರಿ | ೪,೨೯೮ | ೩,೫೧೬ | ೮೧.೬೭ |
| ೬ | ಪಾವಗಡ | ೩,೮೩೬ | ೨,೬೨೩ | ೬೮.೩೮ |
| ೭ | ಶಿರಾ | ೪,೬೮೪ | ೨,೩೮೩ | ೫೦.೮೮ |
| ೮ | ತಿಪಟೂರು | ೨,೬೫೬ | ೧,೬೯೭ | ೬೩.೮೯ |
| ೯ | ತುಮಕೂರು | ೯,೨೬೩ | ೭,೨೭೮ | ೭೮.೫೭ |
| ೧೦ | ತುರುವೇಕೆರೆ | ೨,೪೮೭ | ೨,೧೬೫ | ೮೭.೦೫ |

ಈ ಫಲಿತಾಂಶವನ್ನು ಗಮನಿಸಿದಾಗ ಶಿರಾ ತಾಲೂಕು ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ಫಲಿತಾಂಶವನ್ನೂ, ತುರುವೇಕೆರೆ ತಾಲೂಕು ತುಮಕೂರಿಗಿಂತ ಉತ್ತಮ ಫಲಿತಾಂಶವನ್ನೂ ಪಡೆದಿರುವುದು ಕಂಡುಬರುತ್ತದೆ. ಆದರೆ ರಾಜ್ಯಮಟ್ಟಕ್ಕೆ ಹೋಲಿಸಿದಾಗ ಈ ಹಂತದಲ್ಲಿ ತುಮಕೂರು ಜಿಲ್ಲೆಯ ಸಾಧನೆ ನಿರಾಶಾದಾಯಕವೆಂದೇ ಹೇಳಬೇಕು. ತುಮಕೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯು ರಾಜ್ಯಮಟ್ಟದಲ್ಲಿ ೧೯ನೇ ಸ್ಥಾನದಲ್ಲಿದ್ದರೆ ತುಮಕೂರು ಉತ್ತರ ಶೈಕ್ಷಣಿಕ ಜಿಲ್ಲೆಯು ೩೧ನೇ ಸ್ಥಾನದಲ್ಲಿದೆ. ಒಟ್ಟಾರೆ ಸರಾಸರಿ ಪ್ರಕಾರ ಜಿಲ್ಲೆಯ ಸ್ಥಾನ ೨೫ನೆಯದಾಗಿ ನಿಲ್ಲುತ್ತದೆ.

## ಪದವಿ ಪೂರ್ವ ಶಿಕ್ಷಣ

ಹತ್ತು ವರ್ಷಗಳ ಸಾಮಾನ್ಯ ಶಿಕ್ಷಣವಾದ ಬಳಿಕ ಎರಡು ವರ್ಷಗಳ ಪದವಿ ಪೂರ್ವ ಶಿಕ್ಷಣದ ಹಂತ ವಿವರಬೇಕೆಂಬುದು ಕೊಠಾರಿ ಶಿಕ್ಷಣ ಆಯೋಗ (೧೯೬೪-೧೯೬೬) ದ ಮುಖ್ಯ ಶಿಫಾರಸ್ಸುಗಳಲ್ಲೊಂದು. ಅದರ ಪೂರ್ವದಲ್ಲೂ ಸಹಾ ಒಂದು ವರ್ಷ ಪದವಿ ಪೂರ್ವ ಶಿಕ್ಷಣದ ಹಂತವಿತ್ತು. ಅದು ಅದಕ್ಕಿಂತಲೂ ಪೂರ್ವದಲ್ಲಿ 'ಇಂಟರ್ ಮೀಡಿಯೆಟ್' ಎಂದು ಈ ಹಂತವನ್ನು ಕರೆಯುತ್ತಿದ್ದು, ಅದು ಎರಡು ವರ್ಷದ್ದಾಗಿದ್ದು, ಅದರ ನಂತರದ ಪದವಿ ಶಿಕ್ಷಣವು ಕೇವಲ ಎರಡೇ ವರ್ಷದ್ದಾಗಿತ್ತು. ಆದರೆ ೧೯೫೯ರಲ್ಲಿ, ಪದವಿ ಶಿಕ್ಷಣವನ್ನು ಮೂರು ವರ್ಷದ್ದಾಗಿ ಮಾಡಲು ನಿರ್ಧರಿಸಿದಾಗ ಆಗ ಇಂಟರ್ ಮೀಡಿಯೆಟ್ ಹಂತವನ್ನು ಒಂದೇ ವರ್ಷಕ್ಕೆ ಸೀಮಿತಗೊಳಿಸಿ ಅದನ್ನು 'ಪದವಿ ಪೂರ್ವ ಶಿಕ್ಷಣ' ಎಂದು ಕರೆಯಲಾಯಿತು. ಆದರೆ ಕೊಠಾರಿ ಆಯೋಗದ ಶಿಫಾರಸ್ಸನ್ನು ಜಾರಿಗೆ ತಂದ ಪರಿಣಾಮವಾಗಿ ೧೯೭೧-೭೨ರಿಂದ ಈ ಹಂತವು ಪುನಃ ಎರಡು ವರ್ಷದ ಅವಧಿಯದ್ದಾಗಿ ಪರಿವರ್ತನೆಗೊಂಡಿತು. ಸಾಮಾನ್ಯ ಪದವಿ ಶಿಕ್ಷಣವು ಮೂರು ವರ್ಷ ಅವಧಿಯದ್ದಾಗಿಯೇ ಮುಂದುವರಿದುಕೊಂಡು ಬಂದಿದೆ.

ಪದವಿ ಪೂರ್ವ ಶಿಕ್ಷಣದ ಒಂದು ಬಹುಮುಖ್ಯ ಅಂಶವೆಂದರೆ ಐಚ್ಛಿಕ ವಿಷಯಗಳ ಆಯ್ಕೆಗೆ ಅವಕಾಶವಿರುವುದು. ಹತ್ತನೇ ತರಗತಿ ಪೂರೈಸುವವರೆಗೂ ವಿದ್ಯಾರ್ಥಿಯು ಮೂರು ಭಾಷೆಗಳು, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ಹೀಗೆ ಒಟ್ಟು ಆರು ವಿಷಯಗಳನ್ನು ಅಭ್ಯಸಿಸಬೇಕು. (ಸಿ.ಬಿ.ಎಸ್.ಇ. ಪಠ್ಯಕ್ರಮದ ಎರಡು ಭಾಷೆಗಳಿರುತ್ತವೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಅವರಿಗೆ ಹೆಚ್ಚಿನ ಆಸಕ್ತಿ ಇರುವ ವಿಷಯಗಳನ್ನು ಆಯ್ಕೆಮಾಡಿಕೊಂಡು ವಿದ್ಯಾಭ್ಯಾಸವನ್ನು ಮುಂದುವರೆಸುವ ಅವಕಾಶವಿರುತ್ತದೆ. ಈ ಹಂತದಲ್ಲಿಯೂ ಆಗಾಗ ಕೆಲವು ಬದಲಾವಣೆಗಳಾಗಿವೆ. ಕೆಲವು ವರ್ಷಗಳ ಕಾಲ ಈ ಹಂತದಲ್ಲಿ ವಿದ್ಯಾರ್ಥಿಗಳು ಐಚ್ಛಿಕ ವಿಷಯಗಳ ಗುಂಪಿನಲ್ಲಿ ಮೂರು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು (ಉದಾಹರಣೆಗೆ - ವಿಜ್ಞಾನದ ವಿದ್ಯಾರ್ಥಿಗಳಾದರೆ - ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ/ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ/ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ - ಹೀಗೆ). ಆದರೆ ಇದರಲ್ಲಿರುವ ಅನಾನುಕೂಲವನ್ನು ಇಲಾಖೆಯು ಬಹುಬೇಗನೇ ಗಮನಿಸಿ ಈ ಅನಾನುಕೂಲವನ್ನು ತೊಡೆದು ಹಾಕಿ ಪದವಿ ತರಗತಿಯಲ್ಲಿ ಕೋರ್ಸುಗಳ ಆಯ್ಕೆಗೆ ಅವಕಾಶವಿರುವಂತೆ ಅವಕಾಶ ಕಲ್ಪಿಸಲು ೧೯೭೭ರಿಂದ ಪಿ.ಯು.ಸಿ. ಯಲ್ಲಿ ಐಚ್ಛಿಕ ವಿಷಯಗಳನ್ನು ಮೂರರ ಬದಲು ನಾಲ್ಕು ಎಂದು ಇರಿಸಲಾಯಿತು. ಈ ಗುಂಪುಗಳು ಸಾಮಾನ್ಯವಾಗಿ ಹೀಗೆ ಇರುತ್ತಿದ್ದವು. ೧) ಭೌತಶಾಸ್ತ್ರ, ರಸಾಯನಶಾಸ್ತ್ರ,

ಗಣಿತ, ಜೀವಶಾಸ್ತ್ರ, ೨)ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ / ಶಿಕ್ಷಣ ಶಾಸ್ತ್ರ, ೩)ವಾಣಿಜ್ಯ (ನಾಲ್ಕು ಪರಸ್ಪರ ಸಂಬಂಧಿ ವಿಷಯಗಳು)

ಈ ಬದಲಾವಣೆಯಿಂದಾಗಿ ವಿದ್ಯಾರ್ಥಿಯು ಪಿ.ಯು.ಸಿ. ನಂತರ ವೈದ್ಯಕೀಯ / ಎಂಜಿನಿಯರಿಂಗ್‌ಗೆ ಅಥವಾ ಪದವಿ ವ್ಯಾಸಂಗ ಮಾಡಲು ಭೌತವಿಜ್ಞಾನ, ಗಣಿತ / ಜೀವಶಾಸ್ತ್ರ – ವಿಷಯಗಳನ್ನು ಆರಿಸಿಕೊಳ್ಳಲು ಅವಕಾಶ ದೊರೆಯಿತು. ಅಂದಿನಿಂದ ಇದೇ ಪದ್ಧತಿ ಮುಂದುವರಿದು ಬಂದಿದೆ. ಕಲಾ/ವಾಣಿಜ್ಯ ವಿಭಾಗಗಳಲ್ಲೂ ಈಚೆಗೆ ವಿವಿಧ ವಿಷಯಗಳ ಸೇರ್ಪಡೆಯಾಗಿದೆ. ಶಿಕ್ಷಣ ಶಾಸ್ತ್ರವು ಒಂದು ವಿಷಯವಾಗಿ ಈ ಹಂತದಲ್ಲಿ ಇದ್ದದ್ದನ್ನು ೧೯೯೫ರ ನಂತರ ತೆಗೆದುಹಾಕಲಾಗಿದೆ. ಕಂಪ್ಯೂಟರ್ ಶಿಕ್ಷಣವನ್ನು ಒಂದು ಐಚ್ಛಿಕ ವಿಷಯವಾಗಿ ಸೇರಿಸಿದ್ದು ಕೆಲವೆಡೆ ಮಾತ್ರ ಅದಕ್ಕೆ ಅವಕಾಶವಿದೆ.

ಪದವಿ ಪೂರ್ವ ಶಿಕ್ಷಣದ ಆಡಳಿತ ವ್ಯವಸ್ಥೆಯಲ್ಲೂ ಬದಲಾವಣೆಯಾಗಿದೆ. ಈ ಹಂತವು ಒಂದೇ ವರ್ಷದ್ದಾಗಿರುವವರೆಗೂ ಆಯಾ ವಿಶ್ವವಿದ್ಯಾಲಯಗಳು ಈ ಹಂತದ ಜವಾಬ್ದಾರಿ ವಹಿಸುತ್ತಿದ್ದವು. ಪಠ್ಯಕ್ರಮ, ಪರೀಕ್ಷೆ – ಎಲ್ಲವೂ ಆಯಾ ವಿಶ್ವವಿದ್ಯಾಲಯಗಳಿಂದ ನಡೆಯುತ್ತಿತ್ತು. ಆದರೆ ೧೯೭೨ರಿಂದ ಈ ಹಂತದ ಆಡಳಿತ ಪೂರ್ಣವಾಗಿ ಇದಕ್ಕಾಗಿಯೇ ಸ್ಥಾಪಿತವಾದ 'ಪದವಿ ಪೂರ್ವ ಶಿಕ್ಷಣ ಮಂಡಳಿಯ' ಅಧೀನಕ್ಕೆ ಬಂದಿತು. ಅದಕ್ಕೊಬ್ಬರು ನಿರ್ದೇಶಕರಿದ್ದು ಪ್ರತಿ ಜಿಲ್ಲೆಯಲ್ಲಿ ಪಿ.ಯು.ಸಿ. ವಿಭಾಗಕ್ಕಾಗಿಯೇ ಒಬ್ಬ ಉಪನಿರ್ದೇಶಕರು ನೇಮಕಗೊಂಡರು. ಪಠ್ಯಕ್ರಮ ನಿರ್ಧಾರ, ಪಠ್ಯಪುಸ್ತಕ ತಯಾರಿಕೆ, ಪರೀಕ್ಷೆಗಳ ವ್ಯವಸ್ಥೆ, ಫಲಿತಾಂಶ ಪ್ರಕಟಣೆ ಇವೆಲ್ಲವೂ ಈ ಮಂಡಳಿಯ ಜವಾಬ್ದಾರಿಯಾಯಿತು. ಇಡೀ ರಾಜ್ಯದಲ್ಲಿ ಈ ಶಿಕ್ಷಣ ಏಕರೂಪದ ವ್ಯವಸ್ಥೆಗೆ ಒಳಪಟ್ಟಿತು. ಅಂದಿನಿಂದಲೂ ಈ ಪದವಿ ಪೂರ್ವ ಶಿಕ್ಷಣ ಶಿಸ್ತುಬದ್ಧವಾಗಿ ನಡೆಯುತ್ತಿದೆ. ಪದವಿ ಪೂರ್ವ ಶಿಕ್ಷಣ ಮಂಡಳಿಯ ಪ್ರಸ್ತುತ ನಿರ್ದೇಶನಾಲಯವಾಗಿ ಪರಿವರ್ತನೆಗೊಂಡಿದೆ.

ತುಮಕೂರು ಜಿಲ್ಲೆಯಲ್ಲಿ ಪದವಿ ಪೂರ್ವ ಶಿಕ್ಷಣವು ಕಳೆದ ಐವತ್ತು ವರ್ಷಗಳಿಂದಲೂ ಪ್ರಗತಿಪಥದಲ್ಲಿ ನಡೆಯುತ್ತಿದೆ. ೧೯೫೫ರ ವೇಳೆಗೆ ಇಡೀ ಜಿಲ್ಲೆಗೆ ಒಂದೇ ಒಂದು ಇಂಟರ್ ಮೀಡಿಯೆಟ್ ಕಾಲೇಜು (ಸರ್ಕಾರದಿಂದ ಸ್ಥಾಪಿಸಲ್ಪಟ್ಟಿದ್ದು) ತುಮಕೂರಿನಲ್ಲಿದ್ದು ಅದು ಈಗಿನ ಸಿದ್ಧಗಂಗಾ ಬಾಲಕರ ಕಾಲೇಜು ಇರುವ ಜಾಗದಲ್ಲಿತ್ತು. ಆಗ ಇಡೀ ಜಿಲ್ಲೆಗೆ ಒಂದೇ ಒಂದು ಪದವಿ ಕಾಲೇಜು ಸಹಾ ಇರಲಿಲ್ಲ. ಆದರೆ ಈಗ ಜಿಲ್ಲೆಯಲ್ಲಿ ಒಟ್ಟು ೧೯೬ ಪದವಿ ಪೂರ್ವ ಕಾಲೇಜುಗಳಿದ್ದು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೂ ತಮ್ಮ ಗ್ರಾಮದ ಸಮೀಪದಲ್ಲೇ ಈ ಸೌಲಭ್ಯ ದೊರೆತಿದೆ. ೨೦೧೦–೧೧ನೇ ಸಾಲಿನಲ್ಲಿದ್ದ ತಾಲೂಕುವಾರು ವಿವರ ಈ ಮುಂದಿನಂತಿದೆ.

**ಕೋಷ್ಟಕ ೧೩.೨೨: ಜಿಲ್ಲೆಯಲ್ಲಿ ಪದವಿ ಪೂರ್ವ ಕಾಲೇಜುಗಳ ತಾಲೂಕುವಾರು ವಿವರ**

| ಕ್ರ. ಸಂ. | ತಾಲೂಕು | ಪದವಿ ಪೂರ್ವ ಕಾಲೇಜುಗಳ ಸಂಖ್ಯೆ | | | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
|---|---|---|---|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೮ | ೬ | – | ೧೪ | ೯೬೬ | ೮೯೦ | ೧,೮೫೬ |
| ೨ | ಗುಬ್ಬಿ | ೮ | ೮ | ೬ | ೨೨ | ೧,೧೧೭ | ೧,೨೪೫ | ೨,೩೬೨ |
| ೩ | ಕೊರಟಗೆರೆ | ೪ | ೧೬ | ೨ | ೧೨ | ೯೧೬ | ೫೯೮ | ೧,೫೧೪ |
| ೪ | ಕುಣಿಗಲ್ | ೯ | ೨ | ೫ | ೧೬ | ೧,೦೪೬ | ೧,೧೫೦ | ೨,೧೯೬ |
| ೫ | ಮಧುಗಿರಿ | ೯ | ೫ | ೨ | ೧೬ | ೧,೧೨೦ | ೧,೦೯೩ | ೨,೨೧೩ |
| ೬ | ಪಾವಗಡ | ೬ | ೫ | ೪ | ೧೫ | ೧,೩೪೩ | ೧,೧೬೧ | ೨,೫೦೪ |
| ೭ | ಶಿರಾ | ೭ | ೬ | ೫ | ೧೮ | ೧,೦೦೦ | ೧,೬೦೦ | ೨,೬೦೦ |
| ೮ | ತಿಪಟೂರು | ೫ | ೧೨ | ೧ | ೧೮ | ೧,೩೪೫ | ೧,೪೩೯ | ೨,೭೮೪ |
| ೯ | ತುಮಕೂರು | ೧೧ | ೨೪ | ೧೭ | ೫೨ | ೫,೦೬೯ | ೪,೬೦೩ | ೯,೬೭೨ |
| ೧೦ | ತುರುವೇಕೆರೆ | ೪ | ೭ | ೨ | ೧೩ | ೬೯೭ | ೮೯೦ | ೧,೫೮೭ |
| ಒಟ್ಟು | | ೭೧ | ೯೧ | ೪೪ | ೧೯೬ | ೧೪,೬೧೯ | ೧೪,೬೬೯ | ೨೯,೧೮೮ |

ಆಧಾರ: ಜಿಲ್ಲಾ ಅಂಕಿ ಅಂಶಗಳ ನೋಟ – ೨೦೦೯–೧೦ ಮತ್ತು ಪದವಿ ಪೂರ್ವ ಶಿಕ್ಷಣದ ಉಪನಿರ್ದೇಶಕರ ಕಚೇರಿಯ ವರದಿ, ತುಮಕೂರು.

**ಕೋಷ್ಟಕ ೧೩.೨೨: ಜಿಲ್ಲೆಯಲ್ಲಿ ಪದವಿ ಪೂರ್ವ ಕಾಲೇಜುಗಳ ತಾಲೂಕುವಾರು ವಿವರ (ಮುಂದುವರೆದಿದೆ)**

| ಕ್ರ ಸಂ | ತಾಲೂಕುಗಳು | ಕಾಲೇಜುಗಳ ಸಂಖ್ಯೆ | ಉಪನ್ಯಾಸಕರ ಸಂಖ್ಯೆ | | ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ(೧ ಮತ್ತು ೨ನೇ ವರ್ಷ) ಸರ್ಕಾರಿ | |
|---|---|---|---|---|---|---|
| | | | ಪುರುಷರು | ಮಹಿಳೆಯರು | ಹುಡುಗರು | ಹುಡುಗಿಯರು |
| ೧ | ಚಿಕ್ಕನಾಯಕನ ಹಳ್ಳಿ | ೧೪ | ೮೬ | ೧೭ | ೭೭೭ | ೧,೨೦೨ |
| ೨ | ಗುಬ್ಬಿ | ೨೨ | ೧೩೮ | ೩೨ | ೭೩೭ | ೧,೧೦೫ |
| ೩ | ಕೊರಟಗೆರೆ | ೧೦ | ೬೫ | ೨೪ | ೮೮೬ | ೧,೧೪೭ |
| ೪ | ಕುಣಿಗಲ್ | ೧೬ | ೯೮ | ೩೯ | ೭೬೪ | ೧,೪೯೯ |
| ೫ | ಮಧುಗಿರಿ | ೧೬ | ೧೦೮ | ೩೩ | ೯೪೪ | ೧,೦೪೬ |
| ೬ | ಪಾವಗಡ | ೧೬ | ೧೦೨ | ೨೪ | ೯೭೪ | ೭೮೧ |
| ೭ | ಶಿರ | ೨೧ | ೧೪೮ | ೩೦ | ೧,೦೯೬ | ೧,೬೪೮ |
| ೮ | ತಿಪಟೂರು | ೧೮ | ೧೨೧ | ೧೮ | ೭೧೬ | ೧,೬೫೪ |
| ೯ | ತುಮಕೂರು | ೬೫ | ೪೧೯ | ೧೬೫ | ೧,೫೬೩ | ೨,೭೦೧ |
| ೧೦ | ತುರುವೇಕೆರೆ | ೧೩ | ೮೩ | ೧೧ | ೩೫೨ | ೬೦೮ |
| ಒಟ್ಟು | | ೨೧೧ | ೧,೩೬೮ | ೩೯೩ | ೮,೮೦೯ | ೧೩,೩೯೧ |

| ಕ್ರ ಸಂ | ತಾಲೂಕುಗಳು | ಅನುದಾನಿತ | | ಅನುದಾನ ರಹಿತ | | ಒಟ್ಟು | |
|---|---|---|---|---|---|---|---|
| | | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| ೧ | ಚಿಕ್ಕನಾಯಕನ ಹಳ್ಳಿ | ೩೫೬ | ೪೧೫ | ೦ | ೦ | ೧,೧೩೩ | ೧,೬೧೭ |
| ೨ | ಗುಬ್ಬಿ | ೮೯೫ | ೧,೧೬೨ | ೧೮೭ | ೨೧೧ | ೧,೮೧೯ | ೨,೪೭೮ |
| ೩ | ಕೊರಟಗೆರೆ | ೪೭೨ | ೩೯೯ | ೯೦ | ೬೦ | ೧,೪೪೮ | ೧,೬೦೬ |
| ೪ | ಕುಣಿಗಲ್ | ೧೯೫ | ೩೬೫ | ೨೬೦ | ೨೭೪ | ೧,೨೧೯ | ೨,೧೩೮ |
| ೫ | ಮಧುಗಿರಿ | ೬೦೭ | ೫೧೩ | ೯೮ | ೧೩೯ | ೧,೬೪೯ | ೧,೬೯೮ |
| ೬ | ಪಾವಗಡ | ೭೩೧ | ೭೯೦ | ೨೫೦ | ೧೯೭ | ೧,೯೫೫ | ೧,೭೬೮ |
| ೭ | ಶಿರ | ೭೫೮ | ೬೫೪ | ೪೩೮ | ೪೬೭ | ೨,೨೯೨ | ೨,೭೬೯ |
| ೮ | ತಿಪಟೂರು | ೧,೩೭೬ | ೧,೨೫೧ | ೧೯ | ೧೧ | ೨,೧೧೧ | ೨,೯೧೬ |
| ೯ | ತುಮಕೂರು | ೪,೫೩೦ | ೪.೧೪೯ | ೨,೧೭೧ | ೧,೭೯೧ | ೮,೫೬೪ | ೮,೬೪೧ |
| ೧೦ | ತುರುವೇಕೆರೆ | ೭೯೦ | ೯೨೨ | ೧೨೬ | ೬೬ | ೧,೨೬೮ | ೧,೫೯೬ |
| ಒಟ್ಟು | | ೧೦,೭೧೦ | ೧೦,೬೨೦ | ೩,೬೩೯ | ೩,೨೧೬ | ೨೩,೧೫೮ | ೨೭,೨೨೭ |

**ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ – ೧೯೬೯ ಪುಟ ೪೮೯**

**ಜಿಲ್ಲೆಯಲ್ಲಿ ಪದವಿ ಪೂರ್ವ ಶಿಕ್ಷಣದ ಬೆಳವಣಿಗೆ:** ೧೯೪೦ರವರೆಗೂ ಜಿಲ್ಲೆಯಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶವಿರಲಿಲ್ಲ. ಪ್ರೌಢಶಾಲೆಗಳ ಸಂಖ್ಯೆ ಕೂಡಾ ಕೈ ಬೆರಳೆಣಿಕೆಯಷ್ಟಿತ್ತು. ೧೯೪೦ರಲ್ಲಿ ತುಮಕೂರು ನಗರದಲ್ಲಿ ಒಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ಸರ್ಕಾರ ಸ್ಥಾಪಿಸಿತು. ಪ್ರಾರಂಭದಲ್ಲಿ ಈ ಕಾಲೇಜಿಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ೧೪೩. ಆಗ ಇಲ್ಲಿ ಲಭ್ಯವಿದ್ದ ಐಚ್ಛಿಕ ವಿಷಯಗಳು ಹೀಗಿದ್ದವು. ೧) ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ೨) ಭೌತಶಾಸ್ತ್ರ, ಅರ್ಥಶಾಸ್ತ್ರ, ಗಣಿತ ೩) ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ೪) ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ ಮತ್ತು ೫) ಚರಿತ್ರೆ, ಅರ್ಥಶಾಸ್ತ್ರ, ತರ್ಕಶಾಸ್ತ್ರ. ಕನ್ನಡವು ಒಂದು ಐಚ್ಛಿಕ ವಿಷಯವಾಗಿ ಆಗ ಲಭ್ಯವಿರಲಿಲ್ಲ. ೧೯೪೮ರಲ್ಲಿ ಈ ಇಂಟರ್ ಮೀಡಿಯೆಟ್ ಕಾಲೇಜು ಪ್ರಥಮದರ್ಜೆ ಕಾಲೇಜಾಗಿ ಉನ್ನತೀಕರಿಸಲ್ಪಟ್ಟಿತು. ಆಗಲೂ ಕೂಡ ಇಂಟರ್ ಮೀಡಿಯೆಟ್ ತರಗತಿ ಈ ಕಾಲೇಜಿನ ಭಾಗವಾಗಿಯೇ ಮುಂದುವರೆಯಿತು. ೧೯೫೯–೬೦ರಲ್ಲಿ ಈ ಪಿ.ಯು.ಸಿ. ವಿಭಾಗದಲ್ಲಿ ೭೨೯

ವಿದ್ಯಾರ್ಥಿಗಳು ಓದುತ್ತಿದ್ದರು. ಈ ಹಂತವು ಪದವಿ ಕಾಲೇಜಿನ ಭಾಗವಾಗಿಯೇ ಇದ್ದುದ್ದರಿಂದ ಹಾಗೂ ಪದವಿ ಕಾಲೇಜಿನಲ್ಲಿ ವಿಜ್ಞಾನ, ಕಲೆ ಹಾಗೂ ವಾಣಿಜ್ಯ ವಿಭಾಗಗಳಿದ್ದುದ್ದರಿಂದ, ಪದವಿ ಪೂರ್ವ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಿಕೊಳ್ಳಲು ವಿವಿಧ ಐಚ್ಛಿಕ ವಿಷಯಗಳ ಸಮೂಹಗಳಿದ್ದವು. ೧೯೬೮ರ ವೇಳೆಗೆ ತುಮಕೂರಿನ ಈ ಸರ್ಕಾರಿ ಕಾಲೇಜಿನಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಲಭ್ಯವಿದ್ದ ಐಚ್ಛಿಕ ವಿಭಾಗಗಳು ಮುಂದಿನಂತಿವೆ. ೧) ವಿಜ್ಞಾನ: ೨) ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ; ೩)ಭೌತಶಾಸ್ತ್ರ, ಅರ್ಥಶಾಸ್ತ್ರ, ಗಣಿತ; ೪) ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ; ೫) ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ,; ೨) ಕಲೆ: ೧) ಇತಿಹಾಸ, ಅರ್ಥಶಾಸ್ತ್ರ, ತರ್ಕಶಾಸ್ತ್ರ; ೨) ಇತಿಹಾಸ, ಅರ್ಥಶಾಸ್ತ್ರ, ಹಿಂದಿ; ೩) ಇತಿಹಾಸ, ಅರ್ಥಶಾಸ್ತ್ರ, ಪರ್ಷಿಯನ್; ೪) ಇತಿಹಾಸ, ಅರ್ಥಶಾಸ್ತ್ರ, ವಾಣಿಜ್ಯ; ೫) ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ

೧೯೬೯ರ ವೇಳೆಗಾಗಲೇ ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ವಿಜ್ಞಾನ ಕಾಲೇಜು, (೧೯೬೭), ಶ್ರೀ ಸಿದ್ಧಗಂಗಾ ಸಂಜೆ ಕಾಲೇಜು (೧೯೬೯) ಆರಂಭವಾಗಿ ಪದವಿ ಶಿಕ್ಷಣದ ಜೊತೆಗೆ ಪದವಿ ಪೂರ್ವ ಶಿಕ್ಷಣವನ್ನೂ ನೀಡುತ್ತಿದ್ದವು. ಜೊತೆಗೆ ತಿಪಟೂರಿನಲ್ಲಿ ೧೯೬೨ರಲ್ಲಿ ಕಲ್ಪತರು ಕಾಲೇಜು ಪ್ರಾರಂಭವಾಗಿ ಅಲ್ಲಿಯೂ ಪದವಿ ಪೂರ್ವ ಶಿಕ್ಷಣದ ಸೌಲಭ್ಯ ದೊರೆಯಿತು. ೨೦೧೦-೧೧ರಲ್ಲಿ ಜಿಲ್ಲೆಯ ಪಿ.ಯು.ಸಿ. ಫಲಿತಾಂಶ ಶೇ. ೬೨ರಷ್ಟಿತ್ತು.

## ಪಾಲಿಟೆಕ್ನಿಕ್ ಮತ್ತು ಕೈಗಾರಿಕಾ ತರಬೇತಿ ಸಂಸ್ಥೆಗಳು (ಐ.ಟಿ.ಐ.)

ತಾಂತ್ರಿಕ ಶಿಕ್ಷಣ ನೀಡುವ ಪಾಲಿಟೆಕ್ನಿಕ್ (ಬಹುತಾಂತ್ರಿಕ) ಶಿಕ್ಷಣ ಶಾಲೆಗಳು ಮೂರು ವರ್ಷ ಅವಧಿಯ ಎಂಜಿನಿಯರಿಂಗ್ ಡಿಪ್ಲೋಮಾ ಕೋರ್ಸನ್ನು ನಡೆಸುತ್ತವೆ. ಇವು ಐ.ಟಿ.ಐ. ಗಳು ಡಿಪ್ಲೋಮಾಕ್ಕೆ ಸಮವಲ್ಲದ ಎರಡು ವರ್ಷದ ಕೈಗಾರಿಕಾ ತರಬೇತಿಯನ್ನು ಕೊಡುವ ಶಾಲೆಗಳು. ತುಮಕೂರು ಜಿಲ್ಲೆಯ ಮೊಟ್ಟ ಮೊದಲ ಪಾಲಿಟೆಕ್ನಿಕ್ ಕಾಲೇಜನ್ನು ರಾಜ್ಯಸರ್ಕಾರವು ೧೯೫೮ರಲ್ಲಿ ತುಮಕೂರು ನಗರದಲ್ಲಿ ಪ್ರಾರಂಭಿಸಿತು. ಇದರಲ್ಲಿ ಸಿವಿಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳಿದ್ದು ಪ್ರತಿ ವಿಭಾಗಕ್ಕೆ ೪೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿತ್ತು. ಆದರೆ ಎಲ್ಲಾ ವಿಭಾಗಗಳಲ್ಲೂ ಅಷ್ಟು ವಿದ್ಯಾರ್ಥಿಗಳಿರುತ್ತಿರಲಿಲ್ಲ. ೧೯೬೭-೬೮ರಲ್ಲಿ ಈ ಕಾಲೇಜಿನಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ.

| ವಿಭಾಗ | ವಿದ್ಯಾರ್ಥಿಗಳ ಸಂಖ್ಯೆ | | | ಒಟ್ಟು |
|---|---|---|---|---|
| | ಪ್ರಥಮ ದರ್ಜೆ | ದ್ವಿತೀಯ ದರ್ಜೆ | ತೃತಿಯದರ್ಜೆ | |
| ಸಿವಿಲ್ | ೩೧ | ೧೫ | ೩೨ | ೭೮ |
| ಮೆಕ್ಯಾನಿಕಲ್ | ೩೯ | ೪೪ | ೩೫ | ೧೧೮ |
| ಎಲೆಕ್ಟ್ರಿಕಲ್ | ೩೯ | ೩೨ | ೨೪ | ೯೫ |
| ಒಟ್ಟು | ೧೦೯ | ೯೧ | ೯೧ | ೨೯೧ |

ಮೂರು ವಿಭಾಗಗಳಲ್ಲಿ ಮೊದಲ ವರ್ಷಕ್ಕೆ ಒಟ್ಟು ೧೨೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿದೆ. ೨೦೧೧ರ ಮಾರ್ಚ್ ೩೧ರ ವೇಳೆಗೆ ಜಿಲ್ಲೆಯಲ್ಲಿ ೧೧ ಪಾಲಿಟೆಕ್ನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ ಎರಡು ಸರ್ಕಾರಿ (ತುಮಕೂರು ಮತ್ತು ತುರುವೇಕೆರೆ), ಒಂದು ಅನುದಾನಿತ (ತುಮಕೂರು) ಹಾಗೂ ಉಳಿದೆಲ್ಲವೂ ಅನುದಾನರಹಿತವಾಗಿವೆ. ಈ ಹನ್ನೊಂದು ಸಂಸ್ಥೆಗಳ ಪೈಕಿ ಮಧುಗಿರಿ, ತುರುವೇಕೆರೆ ಹಾಗೂ ತಿಪಟೂರು ತಾಲೂಕುಗಳಲ್ಲಿ ತಲಾ ಒಂದೊಂದರಂತೆ ತುಮಕೂರು ತಾಲೂಕಿನಲ್ಲಿ ಎಂಟು ಪಾಲಿಟೆಕ್ನಿಕ್ ಕಾಲೇಜುಗಳಿರುತ್ತವೆ. ಒಂದರಲ್ಲೇ ಅಂತಹ ಎಂಟು ಸಂಸ್ಥೆಗಳಿವೆ. ಮೊದಲು ಸಾಮಾನ್ಯವಾಗಿ - ಸಿವಿಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳು ಮಾತ್ರವೇ ಇರುತ್ತಿದ್ದ ಈ ಪಾಲಿಟೆಕ್ನಿಕ್‌ಗಳಲ್ಲಿ ಈಗ ಹಲವು ವಿವಿಧ ವಿಭಾಗಗಳಿವೆ - ಕಂಪ್ಯೂಟರ್ ಸೈನ್ಸ್, ಕಮರ್ಷಿಯಲ್ ಆರ್ಟ್ಸ್‌ನಂತಹ ಕೋರ್ಸುಗಳು ಇರುವ ಬೇರೆ ಬೇರೆ ಪಾಲಿಟೆಕ್ನಿಕ್‌ಗಳೂ ಆರಂಭವಾಗಿವೆ. ೨೦೧೧ರ ಮಾರ್ಚ್‌ನಲ್ಲಿ ೧೧ ಪಾಲಿಟೆಕ್ನಿಕ್‌ಗಳಲ್ಲಿದ್ದ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಈ ಮುಂದಿನಂತಿದೆ.

**ಕೋಷ್ಟಕ ೧೩.೨೩: ಜಿಲ್ಲೆಯಲ್ಲಿರುವ ಪಾಲಿಟೆಕ್ನಿಕ್‌ಗಳ ವಿವರ**

| ತಾಲೂಕು | ಪಾಲಿಟೆಕ್ನಿಕ್‌ಗಳ ಸಂಖ್ಯೆ | ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | | ಒಟ್ಟು |
|---|---|---|---|---|
| | | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು | |
| ಮಧುಗಿರಿ | ೧ | ೧೪ | ೧೬೭ | ೧೮೧ |
| ತಿಪಟೂರು | ೧ | ೭೧ | ೩೩೨ | ೪೦೩ |
| ತುಮಕೂರು | ೮ | ೨೬೯ | ೧,೮೫೧ | ೨,೧೨೦ |
| ತುರುವೇಕೆರೆ | ೧ | ೬೦ | ೧೯೯ | ೨೫೯ |
| **ಒಟ್ಟು** | **೧೧** | **೪೧೪** | **೨,೫೪೯** | **೨,೯೬೩** |

ಐ.ಟಿ.ಐ.ಗಳ ವಿಷಯಕ್ಕೆ ಬಂದರೆ ಜಿಲ್ಲೆಯಲ್ಲಿ ೪೦ ಐಟಿಐಗಳಿದ್ದು ಇವು – ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಟರ್ನರ್, ಫಿಟ್ಟರ್, ಟೆಲಿಕಾಂ, ಕಂಪ್ಯೂಟರ್ ತಾಂತ್ರಿಕತೆ ಇವೇ ಮೊದಲಾದ ವಿಷಯಗಳಲ್ಲಿ ತರಬೇತಿ ಕೊಡುತ್ತಿವೆ. ಇವುಗಳ ಪೈಕಿ ಸರ್ಕಾರಿ ಐಟಿಐಗಳು ಎಂಟು, ಅನುದಾನಿತ ೧೦ ಹಾಗೂ ಅನುದಾನರಹಿತವಾದವು ೨೨ ಹೀಗೆ ಮೂರು ಗುಂಪಿಗೆ ಸೇರಿದವು ಇವೆ. ಇವುಗಳ ತಾಲೂಕುವಾರು ವಿವರ ಹೀಗಿದೆ.

**ಕೋಷ್ಟಕ ೧೩.೨೩: ಜಿಲ್ಲೆಯಲ್ಲಿರುವ ಪಾಲಿಟೆಕ್ನಿಕ್‌ಗಳ ವಿವರ (ಮುಂದುವರೆದಿದೆ)**

| ಕ್ರ.ಸಂ. | ತಾಲೂಕು | ಐ.ಟಿ.ಐ ಸಂಸ್ಥೆಗಳು | | | ಒಟ್ಟು |
|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನರಹಿತ | |
| ೧ | ಚಿಕ್ಕನಾಯಕಹಳ್ಳಿ | – | – | ೧ | ೧ |
| ೨ | ಗುಬ್ಬಿ | – | – | ೧ | ೧ |
| ೩ | ಕೊರಟಗೆರೆ | ೧ | – | ೧ | ೨ |
| ೪ | ಕುಣಿಗಲ್ | ೧ | ೩ | – | ೪ |
| ೫ | ಮಧುಗಿರಿ | – | ೧ | ೫ | ೬ |
| ೬ | ಪಾವಗಡ | ೧ | ೧ | ೧ | ೩ |
| ೭ | ಶಿರಾ | ೧ | – | ೨ | ೩ |
| ೮ | ತಿಪಟೂರು | ೧ | ೧ | ೩ | ೫ |
| ೯ | ತುಮಕೂರು | ೧ | ೪ | ೮ | ೧೩ |
| ೧೦ | ತುರುವೇಕೆರೆ | ೨ | ೧ | ೧ | ೪ |
| **ಒಟ್ಟು** | | **೮** | **೧೧** | **೧೮** | **೪೦** |

ಈ ನಲವತ್ತು ಐಟಿಐ ಕಾಲೇಜುಗಳ ಪೈಕಿ ನಾಲ್ಕನ್ನು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯೂ, ಎರಡನ್ನು ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆಯೂ ನಡೆಸುತ್ತಿವೆ. ಇವೆಲ್ಲವೂ ೧೯೬೯ರ ನಂತರ ಸ್ಥಾಪಿಸಲ್ಪಟ್ಟವುಗಳು.

## ಸ್ನಾತಕ ಪದವಿ ಕಾಲೇಜುಗಳು (ಪ್ರಥಮ ದರ್ಜೆ ಕಾಲೇಜುಗಳು)

ತುಮಕೂರು ಜಿಲ್ಲೆಯಲ್ಲಿ ಮೊಟ್ಟಮೊದಲ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾದದ್ದು ೧೯೪೮ರಲ್ಲಿ. ಅದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು. (ಮುಂದೆ ಇದು ವಿಜ್ಞಾನ ಹಾಗೂ ಕಲಾ ಕಾಲೇಜುಗಳಾಗಿ ವಿಭಾಗಗೊಂಡು ಈಗ ಈ ಎರಡೂ ಕಾಲೇಜುಗಳು ವಿಶ್ವವಿದ್ಯಾಲಯದ ನೇರ ಆಡಳಿತದಲ್ಲಿವೆ). ನಂತರ ೧೯೬೨–೬೩ರಲ್ಲಿ ತಿಪಟೂರಿನಲ್ಲಿ 'ಕಲ್ಪತರು ಕಾಲೇಜು' ಪ್ರಾರಂಭವಾಯಿತು. ೧೯೬೭ರಲ್ಲಿ ಶ್ರೀ ಸಿದ್ಧಗಂಗಾ ಪದವಿ ಕಾಲೇಜು ಪ್ರಾರಂಭವಾಯಿತು. (ಪ್ರಾರಂಭದಲ್ಲಿ ಸಹಶಿಕ್ಷಣ ಕಾಲೇಜಾಗಿದ್ದ ಇದು ಕೇವಲ ವಿಜ್ಞಾನ ಪದವಿ ಶಿಕ್ಷಣವನ್ನು ಮಾತ್ರ ನೀಡುತ್ತಿತ್ತು. ವಿದ್ಯಾರ್ಥಿಗಳ ಸಂಖ್ಯೆ

ಹಾಗೂ ಬೇಡಿಕೆ ಹೆಚ್ಚಾದಂತೆ ಅನಂತರದಲ್ಲಿ ಇದು ಬಾಲಕರ ಕಾಲೇಜು ಹಾಗೂ ಮಹಿಳಾ ಕಾಲೇಜುಗಳಾಗಿ ೧೯೮೧ರಲ್ಲಿ ವಿಭಾಗಗೊಂಡು ಎರಡರಲ್ಲೂ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮೂರೂ ವಿಭಾಗಗಳಲ್ಲಿ ಪದವಿ ಶಿಕ್ಷಣ ನೀಡುವ ಜನಪ್ರಿಯ ಕಾಲೇಜುಗಳಾಗಿ ಬೆಳೆದು ನಿಂತಿವೆ.) ಅದೇ ವರ್ಷ (೧೯೬೭) ಶ್ರೀ ಸಿದ್ಧಗಂಗಾ ಸಂಜೆ ಕಾಲೇಜು ಕೂಡಾ ಪ್ರಾರಂಭವಾಯಿತು. ಹೀಗೆ, ೧೯೬೮ರ ವೇಳೆಗೆ ಇಡೀ ತುಮಕೂರು ಜಿಲ್ಲೆಯಲ್ಲಿದ್ದದ್ದು ಕೇವಲ ನಾಲ್ಕು ಕಾಲೇಜುಗಳು ಮಾತ್ರ.

೨೦೧೨ರಲ್ಲಿ ಜಿಲ್ಲೆಯಲ್ಲಿ ೫೯ ಪದವಿ ಕಾಲೇಜುಗಳು ೧೯ ಶಿಕ್ಷಣ ಮಹಾವಿದ್ಯಾಲಯ (ಬಿ.ಎಡ್.,) ಹಾಗೂ ಒಂದು ದೈಹಿಕ ಶಿಕ್ಷಣ (ಬಿ.ಪಿ.ಎಡ್.) ಮಹಾವಿದ್ಯಾಲಯ ಹಾಗೂ ಹನ್ನೊಂದು ಸ್ನಾತಕೋತ್ತರ ಪದವಿ ಕಾಲೇಜುಗಳಿದ್ದು ಅವೆಲ್ಲವೂ ತುಮಕೂರು ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿವೆ. ಇದಲ್ಲದೆ ತುಮಕೂರಿನಲ್ಲಿರುವ ಕಾನೂನು ಪದವಿ ಕಾಲೇಜು ಹುಬ್ಬಳ್ಳಿಯಲ್ಲಿರುವ ಕಾನೂನು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟಿದೆ. ೨೦೧೦ರ ಮಾರ್ಚ್ ೩೧ರಲ್ಲಿದ್ದಂತೆ ಜಿಲ್ಲೆಯ ಸಾಮಾನ್ಯ ಪದವಿ (ಪ್ರಥಮ ದರ್ಜೆ) ಕಾಲೇಜುಗಳ ತಾಲೂಕುವಾರು ಸಂಖ್ಯೆ ಹಾಗೂ ವಿವರ ಈ ಮುಂದಿನಂತಿದೆ.

**ಕೋಷ್ಟಕ ೧೩.೨೪: ಜಿಲ್ಲೆಯಲ್ಲಿನ ಸಾಮಾನ್ಯ ಪದವಿ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ**

| ಕ್ರ.ಸಂ. | ತಾಲೂಕು | ಕಾಲೇಜುಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | ಒಟ್ಟು |
|---|---|---|---|---|---|
| | | | ಹುಡುಗರು | ಹುಡುಗಿಯರು | |
| ೧ | **ಚಿಕ್ಕನಾಯಕನಹಳ್ಳಿ** | ೪ | ೨೨೮ | ೨೦೯ | ೪೩೭ |
| ೨ | **ಗುಬ್ಬಿ** | ೨ | ೨೧೩ | ೧೭೦ | ೩೮೩ |
| ೩ | **ಕೊರಟಗೆರೆ** | ೨ | ೧೯೮ | ೧೮೬ | ೩೮೪ |
| ೪ | **ಕುಣಿಗಲ್** | ೩ | ೨೧೬ | ೧೯೮ | ೪೧೪ |
| ೫ | **ಮಧುಗಿರಿ** | ೫ | ೩೬೨ | ೩೧೦ | ೬೭೨ |
| ೬ | **ಪಾವಗಡ** | ೫ | ೩೭೦ | ೩೨೨ | ೬೯೨ |
| ೭ | **ಶಿರಾ** | ೫ | ೫೩೪ | ೪೪೩ | ೯೭೭ |
| ೮ | **ತಿಪಟೂರು** | ೫ | ೪೧೮ | ೩೯೮ | ೮೧೬ |
| ೯ | **ತುಮಕೂರು** | ೨೫ | ೩,೯೭೬ | ೨,೫೪೨ | ೬,೫೧೮ |
| ೧೦ | **ತುರುವೇಕೆರೆ** | ೩ | ೧೮೬ | ೧೬೪ | ೩೫೦ |
| **ಒಟ್ಟು** | | **೫೯** | **೬,೭೦೧** | **೪,೯೪೨** | **೧೧,೬೪೩** |

**ಆಧಾರ: ಜಿಲ್ಲಾ ಅಂಕಿ–ಅಂಶಗಳ ನೋಟ: ೨೦೦೯–೧೦**

ಇದಲ್ಲದೆ ೨೦೧೦ರಲ್ಲಿ ಒಂದು ಕಾಲೇಜು ಹಾಗೂ ೨೦೧೧ರ ಜುಲೈನಲ್ಲಿ ತುಮಕೂರಿನಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭವಾಗಿದೆ. ಅಂದರೆ ತುಮಕೂರು ಜಿಲ್ಲೆಯಲ್ಲಿ ಒಟ್ಟು ೬೧ ಪದವಿ ಕಾಲೇಜುಗಳಿವೆ. ೧೯೬೮ರಲ್ಲಿ ಜಿಲ್ಲೆಯ ನಾಲ್ಕು ಪದವಿ ಕಾಲೇಜುಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ. ೧) ಸರ್ಕಾರಿ ಪದವಿ ಕಾಲೇಜು–೧೯೧೦, ೨) ಸಿದ್ಧಗಂಗಾ ಪದವಿ ಕಾಲೇಜು–೭೬ (ಮೊದಲ ವರ್ಷ ಮಾತ್ರ), ೩) ಸಿದ್ಧಗಂಗಾ ಸಂಜೆ ಕಾಲೇಜು–೨೩(ಮೊದಲ ವರ್ಷ ಮಾತ್ರ), ೪) ಕಲ್ಪತರು ಪದವಿ ಕಾಲೇಜು ೪೭೭, ಒಟ್ಟು–೨,೪೮೬ (ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ ೧೯೬೯: ಪು. ೪೬೧–೨)

ಜಿಲ್ಲೆಯ ವಿವಿಧ ಪದವಿ ಕಾಲೇಜುಗಳಲ್ಲಿ ಬಿ.ಎ., ಬಿ.ಎಸ್ಸಿ., ಬಿ.ಕಾಂ, ಬಿ.ಬಿ.ಎಂ., ಬಿ.ಸಿ.ಎ., (ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್), ಬಿ.ಎಸ್.ಡಬ್ಲ್ಯೂ. (ಬ್ಯಾಚುಲರ್ ಆಫ್ ಸೋಷಿಯಲ್ ವರ್ಕ್), ಈ ಕೋರ್ಸುಗಳಿವೆ. ಹೆಚ್ಚಿನ ಕಾಲೇಜುಗಳಲ್ಲಿ ಬಿ.ಎ. ಕೋರ್ಸು ಇದ್ದರೆ, ಕೆಲವು ಕಾಲೇಜುಗಳಲ್ಲಿ ಬಿ.ಎ., ಬಿ.ಎಸ್ಸಿ., ಹಾಗೂ ಬಿ.ಕಾಂ.,– ಮೂರೂ

ಕೋರ್ಸುಗಳಿವೆ. ಕೆಲವು ಕಾಲೇಜುಗಳು ಕೇವಲ ವಾಣಿಜ್ಯ ವಿಷಯಗಳನ್ನು ಬೋಧಿಸುವ ಕಾಮರ್ಸ್ ಕಾಲೇಜುಗಳಾಗಿದ್ದು ಬಿ.ಕಾಂ., ಬಿ.ಬಿ.ಎಂ., ನಂತಹ ಕೋರ್ಸುಗಳನ್ನು ಹೊಂದಿವೆ. ಆಡಳಿತಾತ್ಮಕ ದೃಷ್ಟಿಯಿಂದ ಜಿಲ್ಲೆಯಲ್ಲಿನ ಕಾಲೇಜುಗಳ ಸಂಖ್ಯೆ ಹೀಗಿದೆ – ೧) ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು–೨ (ಎರಡೂ ತುಮಕೂರು ನಗರದಲ್ಲಿವೆ) ೨) ಸರ್ಕಾರಿ ಪದವಿ ಕಾಲೇಜುಗಳು–೧೬; ೩) ಖಾಸಗಿ ಪದವಿ ಕಾಲೇಜುಗಳು–೪೩, ಒಟ್ಟು ೬೧.

## ಬಿಸಿನೆಸ್ ಮ್ಯಾನೇಜ್‌ಮೆಂಟ್ ಕಾಲೇಜುಗಳು

ಜಿಲ್ಲೆಯಲ್ಲಿ ಈ ವಿಷಯದ ಬೋಧನೆಗೆಂದೇ ಇರುವ ಕಾಲೇಜುಗಳ ಪಟ್ಟಿ ಹೀಗಿದೆ – ೧)ಶ್ರೀ ಸಿದ್ಧಾರ್ಥ ಇನ್ಸ್‌ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಶ್ರೀ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜು ಆವರಣ, ಕುಣಿಗಲ್ ರಸ್ತೆ, ತುಮಕೂರು ೨) ಸಿ.ಐ.ಟಿ. ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಬಿ.ಹೆಚ್.ರಸ್ತೆ, ತುಮಕೂರು. ೩)ಚಾಣಕ್ಯ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್, ಬಿ.ಎಂ. ರಸ್ತೆ, ಕುಣಿಗಲ್. ೪)ಅರುಣಾ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಮರಳೂರು, ತುಮಕೂರು.೫) ಸುಫಾ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಗೂಳೂರು, ಕುಣಿಗಲ್ ರಸ್ತೆ, ತುಮಕೂರು. ೬) ಸ್ವಾಮಿ ವಿವೇಕಾನಂದ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಶ್ರೀನಿವಾಸನಗರ, ಪಾವಗಡ. ಇವುಗಳಲ್ಲಿ ಕೆಲವು ಕಾಲೇಜುಗಳು ಬಿ.ಕಾಂ., ಮತ್ತು ಬಿ.ಬಿ.ಎಂ., ಎರಡನ್ನೂ ಹೊಂದಿದ್ದರೆ ಉಳಿದವುಗಳಲ್ಲಿ ಬಿ.ಬಿ.ಎಂ. ತರಗತಿಗಳನ್ನು ಮಾತ್ರ ನಡೆಸುತ್ತಿದ್ದಾರೆ.

## ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ ಪದವಿ ಕಾಲೇಜು

ಈ ಕಾಲೇಜಿನಲ್ಲಿ ಮೊದಲು 'ಕನ್ನಡ ಪಂಡಿತ' ಕೋರ್ಸುಗಳಿದ್ದು ಅವು ಹತ್ತನೇ ತರಗತಿ ನಂತರದ ನಾಲ್ಕು ವರ್ಷದ ಕೋರ್ಸ್ ಆಗಿರುತ್ತಿತ್ತು. ಪ್ರೌಢಶಾಲೆಗಳಲ್ಲಿ ಕನ್ನಡ ಅಧ್ಯಾಪಕರಾಗಲು ಅದರಲ್ಲಿ ವಿಶೇಷವಾದ ತರಬೇತಿ ದೊರೆಯುತ್ತಿತ್ತು. ಪ್ರಾಚೀನದಿಂದ ಹಿಡಿದು ಆಧುನಿಕ ಕನ್ನಡ ಸಾಹಿತ್ಯದ ವರೆಗಿನ ವಿವಿಧ ಪ್ರಕಾರಗಳ ಅಭ್ಯಾಸ, ಸಂಸ್ಕೃತ ಭಾಷೆ ಮತ್ತು ವ್ಯಾಕರಣದ ಸ್ವರೂಪ ಇವನ್ನು ಆಳವಾಗಿ ಅಭ್ಯಾಸ ಮಾಡಿಸಲಾಗುತ್ತಿತ್ತು. ಪ್ರೌಢಾಶಾಲೆಗಳಿಗೆ ಬಿ.ಎ./ ಬಿ.ಎಸ್ಸಿ. ಜೊತೆಗೆ ಬಿ.ಎಡ್., ಆದವರನ್ನೇ ಎಲ್ಲ ವಿಷಯಗಳಿಗೂ ನೇಮಿಸಿಕೊಳ್ಳುವ ಸಂಪ್ರದಾಯ ಬೆಳೆದಂತೆ ರಾಜ್ಯದ ವಿದ್ಯಾ ಇಲಾಖೆ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡು ಬಿ.ಎ. ಪಡೆದವರನ್ನು ನೇಮಿಸಿಕೊಳ್ಳತೊಡಗಿತು. ಹೀಗಾಗಿ ಕನ್ನಡ ಪಂಡಿತ್ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಯಿತು. ಅಂತಹ ಪರಿಸ್ಥಿತಿಯನ್ನು ಎದುರಿಸಿ ನಿಂತು ಇಡೀ ರಾಜ್ಯದಲ್ಲಿ ಈವರೆಗೂ ಉಳಿದುಕೊಂಡ ಕನ್ನಡ ಪಂಡಿತ ಶಿಕ್ಷಣ ಕೊಡುತ್ತಿರುವ ಏಕೈಕ ಕಾಲೇಜು ಶ್ರೀ ಸಿದ್ಧಲಿಂಗೇಶ್ವರ ಬಿ.ಎ., ಇಂಟಿಗ್ರೇಟೆಡ್ ಕನ್ನಡ ಪಂಡಿತ ಕಾಲೇಜು. ಹತ್ತನೇ ತರಗತಿ ನಂತರದ ಐದು ವರ್ಷದ ಕೋರ್ಸ್ ಆಗಿರುವ ಇದು ಹಿಂದಿನ ಕನ್ನಡ ಪಂಡಿತ ಕೋರ್ಸಿನ ಮುಖ್ಯಾಂಶಗಳನ್ನಿಟ್ಟುಕೊಂಡು, ವಿಶ್ವವಿದ್ಯಾಲಯದ ಮಾನ್ಯತೆ ಪಡೆಯಲು ಬೇಕಾದ ಕನಿಷ್ಠ ಮತ್ತೊಂದು ಐಚ್ಛಿಕ ವಿಷಯ (ಇತಿಹಾಸ)ವನ್ನೂ ಸೇರಿಸಿಕೊಂಡು 'ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ' ಕೋರ್ಸನ್ನು ನಡೆಸುತ್ತಿದೆ. ೧೯೬೪–೬೫ರಲ್ಲಿ ಆರಂಭವಾದ ಈ ಕಾಲೇಜು ಪ್ರಾರಂಭದಲ್ಲಿ ಕೇವಲ ೧೦ ಜನಕ್ಕೆ ಪ್ರವೇಶ ನೀಡುವ ಅನುಮತಿ ಪಡೆದಿತ್ತು. ಈಗ ೫೦ ವಿದ್ಯಾರ್ಥಿಗಳ ಪ್ರವೇಶಾವಕಾಶಕ್ಕೆ ಅನುಮತಿ ಹೊಂದಿದೆ. ೨೦೧೧–೧೨ರ ಸಾಲಿನಲ್ಲಿ ಈ ಕಾಲೇಜಿನಲ್ಲಿ ೭೩ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು, ಇಲ್ಲಿ ೧೧ ಜನ ಅಧ್ಯಾಪಕರು ಹಾಗು ಮೂವರು ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

## ರವೀಂದ್ರಕಲಾನಿಕೇತನ (ಲಲಿತ ಕಲಾ ಕಾಲೇಜು)

ಇದೊಂದು ವಿಶಿಷ್ಟವಾದ ಪದವಿ ಕಾಲೇಜು, ತುಮಕೂರು ನಗರದ 'ರವೀಂದ್ರನಾಥ ಟಾಗೋರ್ ನಗರ'ದಲ್ಲಿರುವ ಬಾಪೂಜಿ ವಿದ್ಯಾಸಂಸ್ಥೆ ಇದನ್ನು ನಡೆಸುತ್ತಿದೆ. ಚಿತ್ರಕಲೆಯಲ್ಲಿ ಪದವಿ ಮಟ್ಟದ ತರಬೇತಿ ನೀಡುವ ಜಿಲ್ಲೆಯ ಏಕೈಕ ಕಾಲೇಜು ಇದು. ಕರ್ನಾಟಕದಲ್ಲಿ ಈ ಮಾದರಿಯ ಸುಮಾರು ೩೫ ಕಾಲೇಜುಗಳಿವೆ. ಇಲ್ಲಿ 'ದೃಶ್ಯಕಲೆಯಲ್ಲಿ ಸ್ನಾತಕ ಪದವಿ' (Bachelor of Visual Arts - BVA)ವನ್ನು ನೀಡಲಾಗುತ್ತದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಈ ಕಾಲೇಜಿನಲ್ಲಿ ೨೦೧೧–೧೨ನೇ ಸಾಲಿನಲ್ಲಿ) ಒಟ್ಟು ೧೧೧ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಇದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದವರು ೨೬ ವಿದ್ಯಾರ್ಥಿಗಳಿದ್ದರು. ಒಟ್ಟು ವಿದ್ಯಾರ್ಥಿಗಳಲ್ಲಿ ೬೫ ಮಂದಿ ಬಾಲಕರು ಹಾಗೂ ೪೬ ಮಂದಿ ಬಾಲಕಿಯರಿದ್ದರು. ೨೦೧೧–೧೨ನೇ ಸಾಲಿನಲ್ಲಿ ಎಂಟು ಮಂದಿ ಉಪನ್ಯಾಸಕರಿದ್ದರು. ಈ

ಕಾಲೇಜು ೧೯೮೧ರ ಜುಲೈನಲ್ಲಿ ಪ್ರಾರಂಭವಾಯಿತು. ೧೯೮೬ರ ಜುಲೈನಿಂದ ಸರ್ಕಾರದ ವೇತನಾನುದಾನ ಪಡೆಯುತ್ತಿದೆ. ಒಳ್ಳೆಯ ಕಟ್ಟಡ, ಪ್ರಶಾಂತ ಪರಿಸರ, ಕಲಾಕೃತಿಗಳ ಪ್ರದರ್ಶನಕ್ಕೂ ಸಭಾ ಕಾರ್ಯಕ್ರಮಗಳಿಗೂ ಯೋಗ್ಯವಾದ ಸುಸಜ್ಜಿತ ಸಭಾಂಗಣ ಪ್ರಯೋಗ ಶಾಲೆ–ಇವೆಲ್ಲವುಗಳನ್ನು ಒಳಗೊಂಡಿದೆ. ಇಲ್ಲಿ ಕೇವಲ ಚಿತ್ರಕಲೆಯನ್ನಷ್ಟೇ ಅಲ್ಲದೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಕೆಲಸಗಳು, ಗ್ರಾಫಿಕ್ ಎಚಿಂಗ್, ಲಿಥೋ ಗ್ರಾಫಿಕ್, ರಿಲೀಫ್ ಪ್ರೊಸೆಸ್ (ಮರ ಹಾಗೂ ಲಿನೋಲಿಯಂ ಹಾಳೆಗಳನ್ನು ಕತ್ತರಿಸಿ ಕಲಾಕೃತಿ ತಯಾರಿಸುವುದು) ಮೊದಲಾದ ಕಮರ್ಷಿಯಲ್ ಆರ್ಟ್‌ಗೆ ಬೇಕಾದ ಅನ್ವಯಿಕ ವಿಧಾನಗಳನ್ನೂ ಕಲಿಸಲಾಗುತ್ತದೆ.

## ದೈಹಿಕ ಶಿಕ್ಷಣ ಕಾಲೇಜು

ಬಿ.ಪಿ.ಎಡ್., ಕೋರ್ಸ್ ನಡೆಸುವ ದೈಹಿಕ ಶಿಕ್ಷಕರ ತರಬೇತಿ ಕಾಲೇಜು ಇಡೀ ಜಿಲ್ಲೆಗೆ ಒಂದೇ ಒಂದು ಇದ್ದು ಅದು ಶ್ರೀ ಸಿದ್ಧಗಂಗಾ ಮಠದ ಆವರಣದಲ್ಲಿದೆ. ೨೦೦೫ರಲ್ಲಿ ಸ್ಥಾಪಿತವಾದ ಈ ಕಾಲೇಜು ಪ್ರತಿವರ್ಷ ಐವತ್ತು ವಿದ್ಯಾರ್ಥಿಗಳನ್ನು ಮೊದಲ ವರ್ಷಕ್ಕೆ ಸೇರಿಸಿಕೊಳ್ಳುವ ಅನುಮತಿ ಪಡೆದಿದೆ.

## ಶಿಕ್ಷಣ ಪದವಿ (ಬಿ.ಎಡ್.,) ಕಾಲೇಜುಗಳು

೧೯೯೯ನೇ ಇಸವಿಯವರೆಗೂ ಜಿಲ್ಲೆಯಲ್ಲಿದ್ದ ಬಿ.ಎಡ್., ಕಾಲೇಜುಗಳು ನಾಲ್ಕು ಮಾತ್ರ. ಅವು –೧)ಶ್ರೀ ಸಿದ್ದಗಂಗಾ ಶಿಕ್ಷಣ ಕಾಲೇಜು, ತುಮಕೂರು (೧೯೭೨); ೨)ಶ್ರೀ ಸಿದ್ಧಾರ್ಥ ಶಿಕ್ಷಣ ಕಾಲೇಜು, ತುಮಕೂರು (೧೯೭೨); ೩)ಕೆ.ಎಸ್.ಇ. ಎಫ್. ಶಿಕ್ಷಣ ಕಾಲೇಜು, ತುಮಕೂರು (೧೯೭೨); ಮತ್ತು ೪)ಶ್ರೀ ಟಿ.ವಿ. ವೆಂಕಟಸ್ವಾಮಿ ಶಿಕ್ಷಣ ಕಾಲೇಜು, ಮಧುಗಿರಿ (೧೯೮೨) ಈ ಕಾಲೇಜುಗಳು ರಾಜ್ಯದಲ್ಲಿ ಜಾರಿಯಲ್ಲಿದ್ದ ನಿಯಮದಂತೆ ತಲಾ ಒಂದುನೂರು ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡು ತರಬೇತಿ ನೀಡುತ್ತಿದ್ದವು. ೧೯೯೯ನೇ ಇಸವಿಯಲ್ಲಿ 'ಇಂದಿರಾ ಶಿಕ್ಷಣ ಕಾಲೇಜು' ತುಮಕೂರಿನ ಉಪ್ಪಾರಹಳ್ಳಿ ಬಡಾವಣೆಯಲ್ಲಿ ಪ್ರಾರಂಭವಾಯಿತು.

ಕೇಂದ್ರ ಸರ್ಕಾರ ಜಾರಿಗೆ ತಂದ ಉದಾರ ಶಿಕ್ಷಣ ನೀತಿಯಿಂದಾಗಿ ವೃತ್ತಿ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ೨೦೦೪ರ ಕೊನೆಯಲ್ಲಿ ಉಂಟಾಯಿತು. ನಿಗದಿಪಡಿಸಿದ ಸೌಲಭ್ಯಗಳನ್ನು ಒದಗಿಸುವ ಎಲ್ಲ ಆಡಳಿತ ಮಂಡಳಿಗಳಿಗೂ ಬಿ.ಎಡ್.,/ಡಿ. ಎಡ್., ಕಾಲೇಜುಗಳನ್ನು ನಡೆಸಲು ಅನುಮತಿ ಕೊಡುವುದು ಈ ನೀತಿಯ ಮುಖ್ಯ ಉದ್ದೇಶವಾಗಿತ್ತು. ಅದನ್ನು ಪರಿಶೀಲಿಸಿ ಅನುಮತಿಸುವ ಪರಮೋಚ್ಚ ಅಧಿಕಾರ 'ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿ' (National Council for teacher Education) ಎಂಬ ಸ್ವಾಯತ್ತ ಸಂಸ್ಥೆಗೆ ನೀಡಲಾಯಿತು. ಈ ಮಂಡಲಿಯ ಪ್ರಾದೇಶಿಕ ಕಚೇರಿ ಬೆಂಗಳೂರಿನಲ್ಲೂ ಸ್ಥಾಪನೆಯಾಯಿತು. ಈ ಹೊಸನೀತಿಯ ಪರಿಣಾಮವಾಗಿ ೨೦೦೪ರವರೆಗೂ ರಾಜ್ಯದಲ್ಲಿದ್ದ ಬಿ.ಎಡ್., ಕಾಲೇಜುಗಳ ಸಂಖ್ಯೆ ೮೧ ಆಗಿದ್ದರೆ ಅದೇ ವರ್ಷ ಡಿಸೆಂಬರ್‌ನಲ್ಲಿ ಅದು ೩೦೦ ರಷ್ಟಾಯಿತು. ತುಮಕೂರು ಜಿಲ್ಲೆಯಲ್ಲಿ ಅದುವರೆಗೂ ಐದು ಬಿ.ಎಡ್., ಕಾಲೇಜುಗಳಿದ್ದದ್ದು ಆಗ ೧೬ ಆಯಿತು. ಮುಂದೆ ಮತ್ತೆ ಒಂದೊಂದರಂತೆ ಪ್ರಾರಂಭವಾಗಿ ಈಗ ಜಿಲ್ಲೆಯಲ್ಲಿ ೧೯ ಬಿ.ಎಡ್., ಕಾಲೇಜುಗಳಿವೆ. ಇವೆಲ್ಲವೂ ತುಮಕೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿವೆ. ಮೇಲೆ ಉಲ್ಲೇಖಿಸಿರುವ ಐದನ್ನು ಹೊರತುಪಡಿಸಿ ಉಳಿದ ೧೪ ಕಾಲೇಜುಗಳೆಂದರೆ ೧)ವಿದ್ಯಾವಾಹಿನಿ ಶಿಕ್ಷಣ ಮಹಾವಿದ್ಯಾಲಯ, ಕುವೆಂಪುನಗರ, ತುಮಕೂರು; ೨) ಶ್ರೀದೇವಿ ಶಿಕ್ಷಣ ಮಹಾವಿದ್ಯಾಲಯ, ಶಿರಾ ರಸ್ತೆ, ತುಮಕೂರು; ೩) ರಾಜೀವ್‌ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಶೆಟ್ಟಿಹಳ್ಳಿ ರಸ್ತೆ, ತುಮಕೂರು; ೪) ಭಾರತಿ ಶಿಕ್ಷಣ ಮಹಾವಿದ್ಯಾಲಯ, ಸೋಮೇಶ್ವರಪುರಂ, ತುಮಕೂರು; ೫) ನಯಾಲ ಶಿಕ್ಷಣ ಮಹಾವಿದ್ಯಾಲಯ, ಕಾಳಿದಾಸನಗರ, ತುಮಕೂರು; ೬) ಎಸ್.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ಬನಶಂಕರಿ, ಕುಣಿಗಲ್ ರಸ್ತೆ ತುಮಕೂರು; ೭) ಅಕ್ಷಯ ಶಿಕ್ಷಣ ಮಹಾವಿದ್ಯಾಲಯ, ಅಶೋಕ ನಗರ, ತುಮಕೂರು; ೮) ದಿವ್ಯ ಶಿಕ್ಷಣ ಮಹಾವಿದ್ಯಾಲಯ, ತುಮಕೂರು;೯) ಶ್ರೀ ಕೃಷ್ಣಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು; ೧೦) ಕಲ್ಪತರು ಶಿಕ್ಷಣ ಮಹಾವಿದ್ಯಾಲಯ, ತಿಪಟೂರು; ೧೧) ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ಗುಬ್ಬಿ ೧೨) ಶ್ರೀ ಚೆನ್ನಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ಗುಬ್ಬಿ; ೧೩) ಶ್ರೀ ದಿಗ್ವಿಜಯ ಶಿಕ್ಷಣ ಮಹಾವಿದ್ಯಾಲಯ, ಅಡವನಹಳ್ಳಿ ಗೇಟ್ ತುರುವೇಕೆರೆ ತಾಲೂಕು; ೧೪) ಆರ್. ಮುದ್ದುರಂಗೇಗೌಡ ಶಿಕ್ಷಣ ಮಹಾವಿದ್ಯಾಲಯ, ಜ್ಯೋತಿನಗರ, ಶಿರಾ.

ಈ ಹತ್ತೊಂಬತ್ತು ಕಾಲೇಜುಗಳ ಪೈಕಿ ಶ್ರೀ ಸಿದ್ಧಾರ್ಥ ಶಿಕ್ಷಣ ಕಾಲೇಜಿಗೆ ಸುಮಾರು ೧೯೬೩ರಿಂದಲೇ ಸರ್ಕಾರಿ ವೇತನಾನುದಾನ ಬರುತ್ತಿತ್ತು. ಉಳಿದ ಮೂರು ಹಳೆಯ ಕಾಲೇಜುಗಳಾದ ಸಿದ್ದಗಂಗಾ, ಕೆ.ಎಸ್.ಇ.ಎಫ್. ಮತ್ತು ಮಧುಗಿ–ರಿಯ ಟಿ.ವಿ. ವೆಂಕಟಸ್ವಾಮಿ ಶಿಕ್ಷಣ ಕಾಲೇಜಿಗೆ ೨೦೧೧ರಿಂದ ಸರ್ಕಾರದಿಂದ ವೇತನಾನುದಾನ ಬರುತ್ತಿದೆ. ಪ್ರತಿ ಶಿಕ್ಷಣ ಕಾಲೇಜಿಗೆ ಒಂದು ನೂರು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಅವಕಾಶವಿದೆ. ಅನುದಾನ ಪಡೆಯುತ್ತಿರುವ ನಾಲ್ಕು ಕಾಲೇಜುಗಳಿಗೆ ಸರ್ಕಾರದ 'ಕೇಂದ್ರೀಯ ದಾಖಲಾತಿ ಘಟಕ' (Central Admission Cell) ನಿಂದ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ಪ್ರತಿ ಕಾಲೇಜಿಗೆ ೭೫ ವಿದ್ಯಾರ್ಥಿಗಳನ್ನೂ ಕಳುಹಿಸಲಾಗುತ್ತದೆ. ಉಳಿದ ೨೫ ಸೀಟುಗಳನ್ನು ಆಯಾ ಕಾಲೇಜುಗಳವರು ಭರ್ತಿ ಮಾಡಿಕೊಳ್ಳಬಹುದು. ಅನುದಾನರಹಿತ ಕಾಲೇಜುಗಳಿಗೆ ಸರ್ಕಾರ ಹಾಗೂ ಆಡಳಿತ ಮಂಡಳಿಗಳು ತಲಾ ೫೦ ಸೀಟುಗಳಂತೆ ದಾಖಲು ಮಾಡಿಕೊಳ್ಳಬೇಕೆಂಬ ನಿಯಮವಿದೆ. ಬಿ.ಎಡ್.ಗೆ ಸಂಬಂಧಿಸಿದ ಈ ಪ್ರವೇಶ ನೀತಿ ಇಡೀ ರಾಜ್ಯಕ್ಕೇ ಅನ್ವಯಿಸುವಂತಹುದಾಗಿದೆ.

**ಡಿ.ಎಡ್. ಕಾಲೇಜುಗಳು**

ಡಿ.ಎಡ್., ಕಾಲೇಜುಗಳೆಂದು ಸಾಮಾನ್ಯವಾಗಿ ಕರೆಯಲ್ಪಡುವ 'ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆ'ಗಳು 'ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಸಂಸ್ಥೆ' (ಡಿ.ಎಸ್.ಇ.ಆರ್.ಟಿ.) ಯ ನಿಯಂತ್ರಣದಲ್ಲಿದೆ. ಆ ಸಂಸ್ಥೆಯು ಪ್ರತಿ ಜಿಲ್ಲೆಯಲ್ಲೂ ಇರುವ 'ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ' (ಡಯಟ್) ಮೂಲಕ ಇವುಗಳನ್ನು ನಿಯಂತ್ರಿಸುತ್ತದೆ. ಡಯಟ್‌ನ ಪ್ರಾಚಾರ್ಯರಿಗೆ ತಮ್ಮ ವ್ಯಾಪ್ತಿಯಲ್ಲಿನ ಡಿ.ಎಡ್. ಸಂಸ್ಥೆಗಳ ತನಿಖೆ ನಡೆಸುವ ಅಧಿಕಾರವಿರುತ್ತದೆ. ಡಿ.ಎಡ್., ಕಾಲೇಜುಗಳ ಸಂಖ್ಯೆಯ ವಿಚಾರವೂ ಬಿ.ಎಡ್., ಕಾಲೇಜುಗಳದ್ದರಂತೆಯೇ ಆಗಿದೆ. ಅಂದರೆ ೨೦೦೪ರವರೆಗೂ ಪರಿಮಿತಿಯಲ್ಲಿದ್ದ ಇವುಗಳ ಸಂಖ್ಯೆ ಆ ವರ್ಷದ ಕೊನೆಯ ವೇಳೆಗೆ ಹೆಚ್ಚಾಯಿತು. ೨೦೦೪ರವರೆಗೂ ರಾಜ್ಯದಲ್ಲಿದ್ದ ಈ ಸಂಸ್ಥೆಗಳ ಸಂಖ್ಯೆ ೧೫೦ಕ್ಕಿಂತಲೂ ಕಡಿಮೆ ಇತ್ತು. ಆಗ ಈ ಕೋರ್ಸನ್ನು ಟಿ.ಸಿ.ಹೆಚ್. (ಟ್ರೈನಿಂಗ್ ಕೋರ್ಸ್–ಹೈಯರ್) ಎಂದು ಕರೆಯಲಾಗುತ್ತಿತ್ತು. ಆಗ ತುಮಕೂರು ಜಿಲ್ಲೆಯಲ್ಲಿದ್ದ ಈ ಸಂಸ್ಥೆಗಳ ಸಂಖ್ಯೆ ಕೇವಲ ಏಳು.

ತುಮಕೂರು ಜಿಲ್ಲೆಯಲ್ಲಿ ಪ್ರಸ್ತುತ ಇರುವ ಡಿ.ಎಡ್., ಕಾಲೇಜುಗಳ ಸಂಖ್ಯೆ ೪೮. ಇದರಲ್ಲಿ ಎರಡು ಮಾತ್ರ ಸರ್ಕಾರಿ (ತುಮಕೂರು ಮತ್ತು ಶಿರಾ ತಾಲೂಕು). ನಾಲ್ಕು ಅನುದಾನಿತ (ಮೂರು ತುಮಕೂರಿನವು ಒಂದು ತಿಪಟೂರಿನದು); ಉಳಿದ ಎಲ್ಲ ೪೨ ಸಂಸ್ಥೆಗಳೂ ಅನುದಾನರಹಿತವಾದವು. ಇವುಗಳ ಪೈಕಿ ತುಮಕೂರಿನಲ್ಲೇ ಇರುವ ಈ ಎರಡು ಅನುದಾನರಹಿತ ಕಾಲೇಜುಗಳು ಮಾತ್ರ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಸಹಶಿಕ್ಷಣದ ಸಂಸ್ಥೆಗಳಾಗಿವೆ. ೧) ಹಜ್ರರತ್ ಮದರ್‌ಷಾ ಮಕಾನ್ ಡಿ.ಎಡ್. ಕಾಲೇಜು, ಅಶೋಕರಸ್ತೆ, ತುಮಕೂರು.೨) ರಾಜೀವ್‌ಗಾಂಧಿ ಟೀಚರ್ಸ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್, ಹೆಚ್.ಎಂ.ಎಸ್., ಆವರಣ, ಶೆಟ್ಟಿಹಳ್ಳಿ ರಸ್ತೆ, ತುಮಕೂರು.

ಇವುಗಳನ್ನು ಹೊರತುಪಡಿಸಿ ಉಳಿದ ೪೬ ಡಿ.ಎಡ್., ಕಾಲೇಜುಗಳು ಪೂರ್ಣವಾಗಿ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನೀಡುತ್ತವೆ. ತುಮಕೂರು ಜಿಲ್ಲೆಯಲ್ಲಿರುವ ಡಿ.ಎಡ್., ಕಾಲೇಜುಗಳ ತಾಲೂಕುವಾರು ವಿವರ ಹೀಗಿದೆ. ೧. ಚಿಕ್ಕನಾಯಕನಹಳ್ಳಿ–೧, ೨) ಗುಬ್ಬಿ– ೩, ೩) ಕೊರಟಗೆರೆ –೩, ೪) ಕುಣಿಗಲ್–೧, ೫) ಮಧುಗಿರಿ–೨, ೬) ಪಾವಗಡ –೩, ೭) ಶಿರಾ –೪, ೮) ತಿಪಟೂರು–೫, ೯) ತುಮಕೂರು–೨೩, ೧೦) ತುರುವೇಕೆರೆ–೩, ಒಟ್ಟು–೪೮. ಡಿಎಡ್ ಕಾಲೇಜುಗಳಿವೆ.

ಜಿಲ್ಲೆಯಲ್ಲಿರುವ ಡಿ.ಎಡ್., ಶಿಕ್ಷಕ ತರಬೇತಿ ಸಂಸ್ಥೆಗಳ ಪೈಕಿ ಅರ್ಧದಷ್ಟು ತುಮಕೂರು ನಗರದಲ್ಲೇ ಇವೆ ಎಂಬುದು ಗಮನಾರ್ಹ. ಜಿಲ್ಲೆಯಲ್ಲಿನ ಈ ಎಲ್ಲ ಕಾಲೇಜುಗಳೂ ಸಹ ಶಿಕ್ಷಣದ ಕಾಲೇಜುಗಳಾಗಿರುತ್ತವೆ. ಡಿ.ಎಡ್., ಎಂಬುದು ಎರಡು ವರ್ಷಗಳ ಕೋರ್ಸ್. ಸಾಮಾನ್ಯವಾಗಿ ಪ್ರತಿ ಕಾಲೇಜಿನಲ್ಲೂ ಪ್ರತಿ ತರಗತಿಯಲ್ಲೂ ಒಂದೆರಡೇ ವಿಭಾಗ (ಸೆಕ್ಷನ್) ಇರುತ್ತದೆ. ಪ್ರತಿ ವರ್ಷವೂ ದಾಖಲಾತಿ ನಡೆಯುವುದು ಮೊದಲ ವರ್ಷದ ತರಗತಿಗೆ ಮಾತ್ರ. ಡಯಟ್ ಹಾಗೂ ಸಿದ್ದಗಂಗಾ ಸಂಸ್ಥೆಯ ಎರಡು ಕಾಲೇಜುಗಳಲ್ಲಿ ಮಾತ್ರ ಎರಡೆರಡು ವಿಭಾಗಗಳಿವೆ. ಸಾಮಾನ್ಯವಾಗಿ ಪ್ರತಿವರ್ಷ ಗರಿಷ್ಠ ೫೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಅವಕಾಶವಿರುತ್ತದೆ. (ಎರಡು ಕಾಲೇಜುಗಳಿಗೆ ೬೦ ಹಾಗೂ ಒಂದು ಕಾಲೇಜಿಗೆ ೩೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅನುಮತಿ ಇದೆ.) ಇದರಲ್ಲಿ ಅರ್ಧದಷ್ಟನ್ನು ಸರ್ಕಾರದ 'ಕೇಂದ್ರೀಕೃತ ದಾಖಲಾತಿ

ಘಟಕ'ವು ನಿಯಮದ ಪ್ರಕಾರ ಆಯ್ಕೆ ಮಾಡಿ ಕಳಿಸುತ್ತದೆ. ಉಳಿದ ಅರ್ಧದಷ್ಟು ಸೀಟುಗಳನ್ನು ಆಡಳಿತ ಮಂಡಳಿಯೇ ಭರ್ತಿ ಮಾಡಿಕೊಳ್ಳಬಹುದು. ಶುಲ್ಕದ ವಿವರ ರೂ.ಗಳಲ್ಲಿ ಹೀಗಿದೆ.

| ಕ್ರ.ಸಂ. | **ಕಾಲೇಜಿನ ಆಡಳಿತ** | **ವಾರ್ಷಿಕ ಶುಲ್ಕ ರೂ.ಗಳಲ್ಲಿ** | | | **ಒಟ್ಟು** |
|---|---|---|---|---|---|
| | | **ಸಾಮಾನ್ಯಶುಲ್ಕ** | **ಅಭಿವೃದ್ಧಿ ಶುಲ್ಕ** | **ಬೋಧನಾ ಶುಲ್ಕ** | |
| ೧. | **ಸರ್ಕಾರಿ ಕಾಲೇಜುಗಳು** | ೧೯೨೫ | – | ೧೦೦೦ | ೨೯೨೫ |
| ೨. | **ಅನುದಾನಿತ ಕಾಲೇಜುಗಳು ಅ)ಸರ್ಕಾರಿ ಕೋಟಾ ಸೀಟು ಆ)ಆಡಳಿತ ಮಂಡಳಿ ಕೋಟಾ** | ೧೯೨೫<br>೧೯೨೫ | ೧೦೦೦<br>೪೦೦೦ | ೧೦೦೦<br>೪೦೦೦ | ೩,೯೨೫<br>೯,೯೨೫ |
| ೩. | **ಅನುದಾನರಹಿತ ಕಾಲೇಜುಗಳು ೧) ಸರ್ಕಾರಿ ಕೋಟಾ ೨) ಆಡಳಿತ ಮಂಡಳಿ ಕೋಟಾ** | ೧೯೨೫<br>೧೯೨೫ | ೮೦೦೦<br>೮೦೦೦ | ೧೯೨೫<br>೮೦೦೦ | ೧೧,೮೫೦<br>೧೭,೯೨೫ |

ಅಗತ್ಯಕ್ಕಿಂತ ಹೆಚ್ಚಿನ ಬಿ.ಎಡ್.,/ಡಿ.ಎಡ್., ಕಾಲೇಜುಗಳ ಸ್ಥಾಪನೆ ಹಾಗೂ ಅವುಗಳಿಗಿರುವ ಆದಾಯದ ಕೊರತೆಯಿಂದಾಗಿ ಇವುಗಳಲ್ಲಿ ಅಗತ್ಯ ಸಿಬ್ಬಂದಿಯ ಕೊರತೆಯೂ ಅನೇಕ ಕಡೆ ಉಂಟಾಗಿದೆ.

## ಸಂಸ್ಕೃತ ಶಾಲೆಗಳು / ಕಾಲೇಜು

ಜಿಲ್ಲೆಯಲ್ಲಿ ಒಟ್ಟು ೨೯ ಸಂಸ್ಕೃತ ಶಾಲೆಗಳೂ ಒಂದು ಸಂಸ್ಕೃತ ಕಾಲೇಜು ಇದೆ. ಇವುಗಳ ಪೈಕಿ ಇಪ್ಪತ್ತು ಶಾಲೆಗಳು ಹಾಗೂ ಕಾಲೇಜನ್ನು ಇಲ್ಲಿನ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ನಡೆಸುತ್ತಿದ್ದರೆ ಇನ್ನುಳಿದ ಒಂಬತ್ತನ್ನು ಇಲ್ಲಿನ ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆ ನಡೆಸುತ್ತಿದೆ. ೨೦೧೧-೧೨ನೇ ಸಾಲಿನಲ್ಲಿ ಸಿದ್ಧಾರ್ಥ ವಿದ್ಯಾಸಂಸ್ಥೆಯ ಒಂಬತ್ತು ಶಾಲೆಗಳಲ್ಲಿ ೯೦೦ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರೆ ಸಿದ್ಧಗಂಗಾ ಕ್ಷೇತ್ರದಲ್ಲಿನ ಕಾಲೇಜು ಹಾಗೂ ಶಾಲೆಗಳಲ್ಲಿ ಒಟ್ಟು ೬೩೪೮ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಇದಲ್ಲದೆ ಜಿಲ್ಲೆಯಲ್ಲಿನ ಇತರ ಮಠಗಳು ತಮ್ಮ ಆಶ್ರಯದಲ್ಲಿರುವ ವಿದ್ಯಾರ್ಥಿಗಳಿಗೆ ಖಾಸಗಿಯಾಗಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿವೆ.

ಶ್ರೀ ಸಿದ್ದಗಂಗಾ ಕ್ಷೇತ್ರದಲ್ಲಿರುವ ಸಂಸ್ಕೃತ ಕಾಲೇಜು ೧೯೧೭ರಲ್ಲಿ ಸ್ಥಾಪಿತವಾಗಿದ್ದು. ಇದು ಹಿಂದೆ ರಾಜ್ಯ ಸಂಸ್ಕೃತ ಶಿಕ್ಷಣ ಬೋರ್ಡ್‌ಗೆ ಸಂಲಗ್ನಗೊಂಡಿದ್ದು ಅದರಿಂದ ನಡೆಸಲ್ಪಡುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುತ್ತಿತ್ತು. ಅದು ಈಗ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಲಗ್ನಗೊಂಡಿದೆ. ಪದವಿ ಮಟ್ಟದ ಶಿಕ್ಷಣವನ್ನು ಇಲ್ಲಿ ನೀಡಲಾಗುತ್ತಿದ್ದು ವ್ಯಾಕರಣ, ಅಲಂಕಾರ, ತರ್ಕ ಹಾಗೂ ವೇದಾಂತದಂತಹ ವಿಷಯಗಳನ್ನು ಬೋಧಿಸಲಾಗುತ್ತಿದೆ. ಜಿಲ್ಲೆಯ ಏಕೈಕ ಸಂಸ್ಕೃತ ಕಾಲೇಜಾದ 'ಶ್ರೀ ಸಿದ್ದಗಂಗಾ ವೇದ ಸಂಸ್ಕೃತ ಮಹಾವಿದ್ಯಾಲಯ' ವು ಶ್ರೀ ಸಿದ್ದಗಂಗಾ ಕ್ಷೇತ್ರದಲ್ಲಿದ್ದು ಅಲ್ಲಿನ ಶ್ರೀ ಮಠದವತಿಯಿಂದ ನಡೆಸಲ್ಪಡುತ್ತಿದೆ. ಪ್ರಾರಂಭದಿಂದಲೂ ಇಲ್ಲಿ ಓದಬೇಕೆನ್ನುವವರಿಗೆ ಒಟ್ಟು ೧೩ ವರ್ಷದ ಅಖಂಡ ಶಿಕ್ಷಣ ದೊರೆಯುತ್ತದೆ. ಇಲ್ಲಿ ಪ್ರೈಮರಿಯಿಂದ ಹಿಡಿದು ಎಂ.ಎ.ಗೆ ತತ್ಸಮಾನವೆನಿಸಿದ ಪದವಿವರೆಗಿನ ಶಿಕ್ಷಣ ಲಭ್ಯವಿದ್ದು, ಒಟ್ಟು ಐದು ಹಂತಗಳಲ್ಲಿರುತ್ತದೆ. ಈ ಹಂತಗಳನ್ನು ಕ್ರಮವಾಗಿ ಪ್ರಥಮ, ಕಾವ್ಯ, ಸಾಹಿತ್ಯ, ಮಧ್ಯಮ ಹಾಗೂ ಉತ್ತಮ ಎನ್ನಲಾಗುತ್ತಿದೆ. ಇದರಲ್ಲಿ ಮೊದಲ ಎರಡು ಪರೀಕ್ಷೆಗಳೂ ಸೇರಿ ಹತ್ತನೇ ತರಗತಿ (ಎಸ್.ಎಸ್.ಎಲ್.ಸಿ.)ವರೆಗಿನ ಸಂಸ್ಕೃತ ವಿದ್ಯಾಭ್ಯಾಸವಾಗುತ್ತದೆ. 'ಸಾಹಿತ್ಯ' ವು – ಪದವಿಪೂರ್ವ (ಪಿ.ಯು.ಸಿ.) ಮಟ್ಟದ ಪರೀಕ್ಷೆ. ಇದರ ನಂತರದ 'ಮಧ್ಯಮ'ವು ಪದವಿಗೆ ತತ್ಸಮಾನ. ಕೊನೆಯ ಪರೀಕ್ಷೆಯಾದ ಉತ್ತಮವನ್ನು ವಿದ್ವತ್ ಎಂದು ಕರೆಯಲಾಗುತ್ತಿದ್ದು ಇದು ಎಂ.ಎ. ಗೆ ಸಮಾನ. 'ಮಧ್ಯಮ'ವು ಮೂರು ವರ್ಷದ ಕೋರ್ಸ್ ಆದರೆ ಉತ್ತಮ (ವಿದ್ವತ್) ಎರಡು ವರ್ಷದ ಕೋರ್ಸ್ ಆಗಿದೆ. ಮಧ್ಯಮ ಪರೀಕ್ಷೆ ಆದವರಿಗೆ 'ಬಿ.ಎ. ಸಂಸ್ಕೃತ ವಿದ್ವತ್ ಮಾಧ್ಯಮ' ಎಂದೂ, ಉತ್ತಮ ಆದವರಿಗೆ 'ಎಂ.ಎ. ಸಂಸ್ಕೃತ ವಿದ್ವದುತ್ತಮ' ಎಂದೂ ಪದವಿ ಪತ್ರಗಳನ್ನು ನೀಡಲಾಗುತ್ತದೆ.

ಶ್ರೀ ಸಿದ್ದಗಂಗಾ ಕ್ಷೇತ್ರದಲ್ಲಿನ ಸಂಸ್ಕೃತ ಕಾಲೇಜು ಹಾಗೂ ಶಾಲೆಗಳಲ್ಲಿ ೧೯೬೭-೬೮ರಲ್ಲಿ ೨,೧೦೮ ವಿದ್ಯಾರ್ಥಿಗಳು ಹಾಗೂ ೧೯ ಜನ ಅಧ್ಯಾಪಕರಿದ್ದರು. ೨೦೧೧-೧೨ರಲ್ಲಿ ೬೩೪೮ ವಿದ್ಯಾರ್ಥಿಗಳು ಹಾಗೂ ೫೨ಜನ ಅಧ್ಯಾಪಕರಿದ್ದು, ೧೯೬೭-೬೮ರಲ್ಲಿ ರೂ ೫೯,೨೫೦/- ರ ಸರ್ಕಾರಿ ಅನುದಾನ ಪಡೆಯುತ್ತಿದ್ದ ಈ ಸಂಸ್ಕೃತ ಕಾಲೇಜು ೨೦೧೧-೧೨ರ

ವೇಳೆಗೆ ಮಾಹೆಯಾನ ಸುಮಾರು ಐದು ಲಕ್ಷ ರೂಪಾಯಿಗಳಷ್ಟು ವೇತನಾನುದಾನ ಪಡೆಯುತ್ತಿತ್ತು. ವಿದ್ವತ್ ಉತ್ತಮ ಸ್ನಾತಕೋತ್ತರ ಪದವಿ ತರಗತಿಯಲ್ಲಿ ಒಟ್ಟು ಆರು ಪತ್ರಿಕೆಗಳಿರುತ್ತವೆ. ಪ್ರತಿ ಪತ್ರಿಕೆಗೆ ೨೫ ಅಂಗಳ 'ವಾಚಾ' (ಮೌಖಿಕ) ಪರೀಕ್ಷೆ ಇರುತ್ತದೆ. ಸಂಸ್ಕೃತದ ಎಲ್ಲ ಕೋರ್ಸುಗಳಲ್ಲೂ ಸಾಮಾನ್ಯವಾಗಿ ಕನ್ನಡ ಮಾಧ್ಯಮದಲ್ಲೇ ಪಾಠ ಮಾಡಲಾಗುತ್ತದೆ ಹಾಗೂ ಪರೀಕ್ಷೆಗಳಲ್ಲಿ ಕನ್ನಡ ಅಥವಾ ಸಂಸ್ಕೃತದಲ್ಲಿ ಉತ್ತರಿಸುವ ಅವಕಾಶವಿರುತ್ತದೆ. ಎಂ.ಎ. ತತ್ಸಮಾನವಾದ ವಿದ್ವದುತ್ತಮ ಪರೀಕ್ಷೆಯಲ್ಲೂ ಸಹಾ ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದ ಪತ್ರಿಕೆಗೆ ಕನ್ನಡದಲ್ಲೇ ಉತ್ತರಿಸುವ ಅವಕಾಶವಿರುತ್ತದೆ.

ರಾಜ್ಯದಲ್ಲಿ ಸಂಸ್ಕೃತ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ. ೬೦ರಷ್ಟು ವಿದ್ಯಾರ್ಥಿಗಳು ಶ್ರೀಸಿದ್ದಗಂಗಾ ಕ್ಷೇತ್ರದ ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಮಹಾವಿದ್ಯಾಲಯ ಹಾಗೂ ಆದಿಚುಂಚನಗಿರಿ ಕ್ಷೇತ್ರದ ಶ್ರೀ ಕಾಲಭೈರವೇಶ್ವರ ಸಂಸ್ಕೃತ ಮಹಾವಿದ್ಯಾಲಯಗಳಿಗೆ ಸೇರಿದವರಾಗಿರುತ್ತಾರೆ ಎಂಬುದು ಗಮನಾರ್ಹ.ಈ ಮೊದಲು ಸಂಸ್ಕೃತ ಪರೀಕ್ಷೆಗಳನ್ನು ಕರ್ನಾಟಕ ಸೆಕೆಂಡರಿ ಪರೀಕ್ಷಾ ಮಂಡಲಿ ನಡೆಸುತ್ತಿತ್ತು. ಸಂಸ್ಕೃತ ವಿಶ್ವವಿದ್ಯಾಲಯವು ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ ರಾಜ್ಯದಲ್ಲಿನ ಎಲ್ಲ ಸಂಸ್ಕೃತ ಪಾಠಶಾಲೆಗಳು ಹಾಗೂ ಕಾಲೇಜುಗಳನ್ನು ಅದರ ಪರಿಧಿಗೆ ವರ್ಗಾಯಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದರ ಪರಿಣಾಮವಾಗಿ ೨೦೧೦–೧೧ನೇ ಸಾಲಿನಿಂದ ಈ ಪರೀಕ್ಷೆಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಡೆಸುತ್ತಿದೆ.

## ತುಮಕೂರು ವಿಶ್ವವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ

ತುಮಕೂರು ವಿಶ್ವವಿದ್ಯಾಲಯವು ೨೦೦೪ರಲ್ಲಿ ಸ್ಥಾಪನೆಯಾಯಿತು. ವಿಧಾನಸಭೆಯಲ್ಲಿ ಈ ವಿಶ್ವವಿದ್ಯಾಲಯದ ಸ್ಥಾಪನೆ ಕುರಿತ ಮಸೂದೆ ಅಂಗೀಕಾರವಾಗುವಾಗ ಮೂರು ಜಿಲ್ಲೆಗಳ (ತುಮಕೂರು, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ) ವ್ಯಾಪ್ತಿಯನ್ನು ಇದಕ್ಕೆ ಕೊಡಲಾಗಿತ್ತು. ಆದರೆ ಉಳಿದೆರಡು ಜಿಲ್ಲೆಗಳವರು ಬೆಂಗಳೂರಿಗಿಂತ ದೂರವಾಗುವುದೆಂಬ ಕಾರಣಕ್ಕಾಗಿ ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ತಾವು ಒಳಪಡುವುದನ್ನು ವಿರೋಧಿಸಿದರು. ಅದ್ದರಿಂದ ಅಂತಿಮವಾಗಿ ೨೦೦೪ರಲ್ಲಿ ಈ ವಿಶ್ವವಿದ್ಯಾಲಯದ ಸ್ಥಾಪನೆಯನ್ನು ಘೋಷಿಸುವ ಸರ್ಕಾರಿ ಆಜ್ಞೆಯಲ್ಲಿ ತುಮಕೂರು ಜಿಲ್ಲೆಗೆ ಮಾತ್ರ ಈ ವಿಶ್ವವಿದ್ಯಾಲಯ ಸೀಮಿತವಾಯಿತು.

ವಿಶ್ವವಿದ್ಯಾಲಯ ಔಪಚಾರಿಕವಾಗಿ ಅಸ್ತಿತ್ವಕ್ಕೆ ಬಂದನಂತರ ಐದು ವರ್ಷಗಳ ಕಾಲ ನಗರದ ಮಹಾತ್ಮಗಾಂಧಿ ರಸ್ತೆಯಲ್ಲಿನ ಡಾ॥ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಹೊಸದಾಗಿ ವಿಶ್ವವಿದ್ಯಾಲಯ ಕೇಂದ್ರವನ್ನು ಪ್ರಾರಂಭಿಸಲು ಹಲವು ಕಡೆಗಳಲ್ಲಿ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಪ್ರಯತ್ನಿಸಿದ್ದು, ಜಮೀನು ಲಭ್ಯವಾಗದ ಕಾರಣ ನಗರದ ಮಧ್ಯಭಾಗದಲ್ಲಿ ಬಿ.ಹೆಚ್. ರಸ್ತೆಯ ಪಕ್ಕದಲ್ಲೇ ಇರುವ ಈಗಾಗಲೇ ವಿಶ್ವವಿದ್ಯಾಲಯದ ಸುಪರ್ದಿಗೆ ಬಂದಿದ್ದ ಸರ್ಕಾರಿ ಕಾಲೇಜುಗಳ ಆವರಣದಲ್ಲೇ ವಿಶ್ವವಿದ್ಯಾಲಯವನ್ನು ಅಭಿವೃದ್ಧಿ ಪಡಿಸಲು ವಿಶ್ವವಿದ್ಯಾಲಯದ ಆಡಳಿತ ನಿರ್ಧರಿಸಿತು. ಅದರಂತೆ ಅಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗದ ಕಟ್ಟಡಗಳು ನಿರ್ಮಾಣಗೊಳ್ಳುತ್ತಿವೆ.

ಈ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿ ಬಂದ ಡಾ॥ ಓ.ಎಲ್. ಅನಂತರಾಮಯ್ಯ ಇದೇ ಜಿಲ್ಲೆಯ ಕೊರಟಗೆರೆಯವರು. ಅವರ ಅಧಿಕಾರಾವಧಿಯ ನಾಲ್ಕುವರ್ಷಗಳಲ್ಲಿ ವಿಶ್ವವಿದ್ಯಾಲಯದ ಲಾಂಛನ ಹಾಗೂ 'ಜ್ಞಾನವೇ ಅನಂತ' ಎಂಬ ಧ್ಯೇಯವಾಕ್ಯವನ್ನು ಆಯ್ಕೆ ಮಾಡಲಾಯಿತು. ಹಲವು ಸ್ನಾತಕೋತ್ತರ ವಿಭಾಗಗಳನ್ನು ಪ್ರಾರಂಭಿಸಲಾಯಿತು. ೨೦೦೫ರ ವೇಳೆಗೆ ವಿಶ್ವವಿದ್ಯಾಲಯ ಆಡಳಿತದಲ್ಲಿ ೪೫ ಕಾಲೇಜುಗಳು ಹಾಗೂ ೧೪ ಸ್ನಾತಕೋತ್ತರ ಕೋರ್ಸುಗಳಿದ್ದವು. ೨೦೧೧ರ ವೇಳೆಗೆ ೯೫ ಕಾಲೇಜುಗಳು ಹಾಗೂ ೧೯ ಸ್ನಾತಕೋತ್ತರ ವಿಭಾಗಗಳಿದ್ದವು. ಕನ್ನಡ, ರಾಜ್ಯಶಾಸ್ತ್ರ, ಜೀವರಸಾಯನಶಾಸ್ತ್ರ, ಗಣಿತ, ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗ, ರಸಾಯನಶಾಸ್ತ್ರ, ಭೌತಶಾಸ್ತ್ರ, ಪರಿಸರ ವಿಜ್ಞಾನ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ವಿದ್ಯುನ್ಮಾನ ಮಾಧ್ಯಮ, ಎ.ಎಸ್. ಸಂವಹನ ಹಾಗೂ ಶಿಕ್ಷಣ ಶಾಸ್ತ್ರ – ಈ ವಿಷಯಗಳ ಸ್ನಾತಕೋತ್ತರ ಅಧ್ಯಯನವು ಕೇವಲ ಒಂದೊಂದು ಕೇಂದ್ರಗಳಲ್ಲಿ ಮಾತ್ರ ನಡೆಯುತ್ತಿತ್ತು. ಈ ಪೈಕಿ ಹಚ್ಚಿನವು ಜಿಲ್ಲೆಯಲ್ಲಿನ ಸರ್ಕಾರಿ ಕಾಲೇಜುಗಳು, ತುಮಕೂರಿನ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು ಹಾಗೂ ಸ್ವಂತದ ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಯುತ್ತಿದೆ. ವಿದ್ಯುನ್ಮಾನ ಸಂವಹನ, ಎಂ.ಎಸ್. ಸಂವಹನ, ಶಿಕ್ಷಣ ಶಾಸ್ತ್ರ (ಎಂ.ಎಡ್), ಜೈವಿಕ ತಂತ್ರಜ್ಞಾನ – ಈ ವಿಷಯಗಳ ಸ್ನಾತಕೋತ್ತರ ಕೇಂದ್ರಗಳು ಮಾತ್ರ ಸಂಯೋಜಿತ ಖಾಸಗಿ ಕಾಲೇಜುಗಳಲ್ಲಿ

ನಡೆಯುತ್ತಿವೆ. ಉಳಿದ ವಿಷಯಗಳಿಗೆ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಸ್ನಾತಕೋತ್ತರ ಕೇಂದ್ರಗಳಿದ್ದು ಅವುಗಳ ವಿವರ ಹೀಗಿದೆ ಇತಿಹಾಸ –೨, ಸಮಾಜಶಾಸ್ತ್ರ– ೩, ಇಂಗ್ಲೀಷ್ – ೪, ಸಮಾಜಶಾಸ್ತ್ರ– ೪, ಅರ್ಥಶಾಸ್ತ್ರ – ೫, ಎಂ.ಕಾಂ.–೧೦

ಸರ್ಕಾರಿ ಕಾಲೇಜುಗಳು ಹಾಗೂ ತನ್ನ ನೇರ ಅಧೀನದಲ್ಲಿನ ಸ್ನಾತಕೋತ್ತರ ವಿಭಾಗಗಳಲ್ಲಿ ಶೇ. ೧೦೦ರಷ್ಟು ದಾಖಲಾತಿಯನ್ನು ವಿಶ್ವವಿದ್ಯಾಲಯ ಮಾಡಿಕೊಳ್ಳುತ್ತದೆ. ಸಂಯೋಜಿತ ಖಾಸಗಿ ಕಾಲೇಜುಗಳಲ್ಲಿ ನಡೆಯುವ ಕೋರ್ಸುಗಳಿಗೆ ಅನುಮತಿಸಿರುವ ವಿದ್ಯಾರ್ಥಿಗಳ ಸಂಖ್ಯೆಯ ಶೇ. ೫೦ರಷ್ಟನ್ನು ವಿಶ್ವವಿದ್ಯಾಲಯ ಭರ್ತಿಮಾಡುತ್ತಿದ್ದು ಉಳಿದ ಭಾಗವನ್ನು ಆಯಾ ಕಾಲೇಜುಗಳೇ ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ.

**ಕೋಷ್ಟಕ ೧೩.೨೫: ೨೦೧೧–೧೨ನೇ ಸಾಲಿನ ಮೊದಲ ಸೆಮಿಸ್ಟರಿನ ಶುಲ್ಕದ ವಿವರಗಳು ಈ ಕೆಳಗಿನಂತಿದೆ.**

| ಕೋರ್ಸುಗಳು | ಎಸ್.ಸಿ.,ಎಸ್.ಟಿ., ಪ್ರ–೧ (ವಾರ್ಷಿಕ ಆದಾಯ ಒಂದು ಲಕ್ಷ ರೂಗಿಂತ ಕಡಿಮೆ ಇರುವವರು | ಎಸ್.ಸಿ.,ಎಸ್.ಟಿ., ಪ್ರ–೧ (ವಾರ್ಷಿಕ ಆದಾಯ ಒಂದು ಲಕ್ಷ ರೂಗಿಂತ ಹೆಚ್ಚು ಇರುವವರು | ೨ಎ, ೨ಬಿ, ೩ಎ, ೩ಬಿ (ವಾರ್ಷಿಕ ಆದಾಯ ರೂ. ೧೧ ಸಾವಿರಗಳಿಗಿಂತ ಕಡಿಮೆ ಇರುವವರು) | ಸಾಮಾನ್ಯವರ್ಗ |
|---|---|---|---|---|
| ಕನ್ನಡ, ಇಂಗ್ಲೀಷ್, ಇತಿಹಾಸ, ಪ್ರಾಕ್ತನಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ | ೧,೯೨೨ | ೩,೦೮೩ | ೨,೩೧೩ | ೩,೦೮೦ |
| ಸಮಾಜಕಾರ್ಯ | ೩,೫೭೨ | ೧೭,೮೨೮೩ | ೩,೯೬೩ | ೧೭,೮೨೩ |
| ವಾಣಿಜ್ಯಶಾಸ್ತ್ರ | ೫೭,೩೧೨ | ೩,೪೯೬ | ೨,೩೧೩ | ೩,೪೯೬ |
| ಆಡಳಿತ ವ್ಯವಹಾರ | ೧,೯೨೨ | ೫೭,೭೦೩ | ೫೭,೩೧೨ | ೫೭,೭೦೩ |
| ಗಣಿತ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ೩,೫೧೭ | ೩,೯೬೩ | ೨,೩೧೩ | ೩,೯೬೩ |
| ಜೀವ ರಸಾಯನಶಾಸ್ತ್ರ ಸಸ್ಯಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಪರಿಸರ ವಿಜ್ಞಾನ | ೪,೬೭೨೦ | ೧೪,೨೪೮ | ೫,೪೪೮ | ೧೪,೨೪೮ |
| ಜೈವಿಕ ತಂತ್ರಜ್ಞಾನ | ೪,೬೭೨ | ೧೭,೮೨೮೩ | ೯,೦೨೩ | ೧೭,೮೨೮೩ |
| ಎಂ.ಎಸ್.ಸಂವಹನ | ೧,೯೨೨ | ೩,೯೬೩ | ೨,೩೧೩ | ೩,೯೬೩ |
| ವಿದ್ಯುನ್ಮಾನ ಮಾಧ್ಯಮ | ೩,೫೭೨ | ೧೭,೮೨೮೩ | ೬,೯೨೩ | ೧೭,೮೨೮೩ |
| ಎಂ.ಇಡಿ. | ೩,೫೭೨ | ೧೭,೮೨೩ | ೩,೯೬೩ | ೧೭,೮೨೩ |

ಈ ವಿಶ್ವವಿದ್ಯಾಲಯವು ೨೦೦೭ರಲ್ಲಿ ತನ್ನ ಮೊದಲ ಘಟಿಕೋತ್ಸವವನ್ನು ನಡೆಸಿತು. ಅಲ್ಲಿಂದ ಪ್ರತಿವರ್ಷವೂ ಅದು ಕ್ರಮವಾಗಿ ನಡೆಯುತ್ತಾ ಬಂದಿದೆ. ಈವರೆಗಿನ ಘಟಿಕೋತ್ಸವಗಳಲ್ಲಿ ವಿಶ್ವವಿದ್ಯಾಲಯವು ಹಲವರಿಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದೆ. ಹಾಗೆ ಸನ್ಮಾನಿತರಾದವರಲ್ಲಿ ಕೆಲವರ ಹೆಸರುಗಳು ಈ ಕೆಳಗಿನಂತಿವೆ. ೧)ಎಂ.ಎಸ್. ರಾಮಯ್ಯ (ಮರಣೋತ್ತರ – ಶಿಕ್ಷಣ ಕ್ಷೇತ್ರ) ೨) ಎಸ್.ಎಂ. ಗಂಗಾಧರಯ್ಯ (ಮರಣೋತ್ತರ – ಶಿಕ್ಷಣ ಕ್ಷೇತ್ರ) ೩)ಶ್ರೀಮತಿ ಲೀಲಾವತಿ (ಖ್ಯಾತ ಚಿತ್ರನಟಿ) ೪) ಪ್ರೊ॥ ಬಿ. ಷೇಕ್ ಅಲಿ (ಇತಿಹಾಸ ತಜ್ಞರು) ೫)ಕೆ.ಎಸ್. ಅಶ್ವತ್ಥ್ (ಚಿತ್ರನಟ) ೬) ಹೆಚ್. ಎಸ್. ದೊರೆಸ್ವಾಮಿ (ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಮಾಜ ಸೇವಕರು) ೭) ಲಕ್ಷ್ಮಣದಾಸ್, ತುಮಕೂರು (ಹರಿಕಥಾ ಕಲಾವಿದರು) ೮)ಸದಾನಂದ ಮಯ್ಯ (ಉದ್ಯಮಿ ಹಾಗೂ ದಾನಿ)

ಬೆಂಗಳೂರಿನ ಡಾ. ಎಸ್.ಸಿ. ಶರ್ಮಾ ಈ ವಿಶ್ವವಿದ್ಯಾಲಯದ ಎರಡನೇ ಕುಲಪತಿಗಳಾಗಿ ನೇಮಕಗೊಂಡರು. ಇವರ ಕಾರ್ಯಾವಧಿಯಲ್ಲಿ ದಾನಿಗಳ ದೇಣಿಗೆಯಿಂದ ಹಲವು ಕಟ್ಟಡಗಳ ನಿರ್ಮಾಣಗಳಾದವು ಮತ್ತು ಅಧ್ಯಾಪಕರು ಹಾಗೂ ಕೆಲವು ಸಿಬ್ಬಂದಿಯ ಖಾಯಂ ನೇಮಕಾತಿ ಆಯಿತು. ಅಲ್ಲದೆ ೨೫ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು

ಇದರಲ್ಲಿ ಅಂತರಿಕ್ಷ ವಿಜ್ಞಾನ ಕೇಂದ್ರ' 'ಪ್ರಕೃತಿ ವಿಕೋಪ ಮತ್ತು ವಿಪತ್ತು ನಿರ್ವಹಣೆ ಸಂಶೋಧನಾ ಕೇಂದ್ರ', 'ಆರ್ಥಿಕ ನೀತಿ ಸಂಶೋಧನಾ ಕೇಂದ್ರ'– ಗಳೂ ಸೇರಿವೆ. ೨೦೧೧ರ ಆಗಸ್ಟ್‌ನಲ್ಲಿ ಈ ವಿಶ್ವವಿದ್ಯಾಲಯದಲ್ಲಿ 'ಕುಮಾರವ್ಯಾಸ ಪೀಠ' ವೂ ಆರಂಭವಾಗಿದೆ. ಈ ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ: www.tumkuruniversity.in <http://www.tumkuruniversity.in> ಇ.ಮೇಲ್ ವಿಳಾಸ: academic@tumkuruniversity.in <mailto:academic@tumkuruniversity.in>

## ವೈದ್ಯಕೀಯ ಕಾಲೇಜು:

ಜಿಲ್ಲೆಯಲ್ಲಿರುವ ಏಕೈಕ ಅಲೋಪತಿ ವೈದ್ಯಕೀಯ ಕಾಲೇಜು (ಎಂ.ಬಿ.ಬಿ.ಎಸ್.) ಎಂದರೆ ಅದು 'ಶ್ರೀ ಸಿದ್ಧಾರ್ಥ ಎಜುಕೇಷನಲ್ ಸೊಸೈಟಿ' ನಡೆಸುತ್ತಿರುವ 'ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು'. ಈ ಶಿಕ್ಷಣ ಸಂಸ್ಥೆಯು ೧೯೫೯ರಲ್ಲಿ ಪ್ರಾರಂಭಗೊಂಡಿದ್ದು, ಇದರ ಸ್ಥಾಪಕರು ಜಿಲ್ಲೆಯ 'ಶಿಕ್ಷಣ ಭೀಷ್ಮ' ಎಂದೇ ಹೆಸರಾದ ಎಚ್.ಎಂ. ಗಂಗಾಧರಯ್ಯನವರು. ವೈದ್ಯಕೀಯ ಕಾಲೇಜಿನ ವೆಬ್‌ಸೈಟ್ ವಿಳಾಸ: www.ssmctumkur.org <http://www.ssmctumkur.org> ೧೯೮೮ರಲ್ಲಿ ಈ ವೈದ್ಯಕೀಯ ಕಾಲೇಜು ಆರಂಭಗೊಂಡಿದ್ದು, ನಗರ ಕೇಂದ್ರದಿಂದ ಆರು ಕಿಲೋಮೀಟರುಗಳ ದೂರದ ಹೆಗ್ಗೆರೆ ಗ್ರಾಮದಲ್ಲಿದೆ. ಈ ಕಾಲೇಜಿನ ಕ್ಯಾಂಪಸ್ಸನ್ನು ಬೆಂಗಳೂರು– ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯ ಪಕ್ಕದ ೨೨೦ ಎಕರೆಯಷ್ಟು ವಿಶಾಲವಾದ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಇದೇ ಆವರಣದಲ್ಲಿ ದಂತವೈದ್ಯಕೀಯ ಕಾಲೇಜು, ಆಸ್ಪತ್ರೆಗಳು, ಸುಸಜ್ಜಿತ ಸಭಾಗೃಹ– ಇತ್ಯಾದಿ ಕಟ್ಟಡಗಳು ಇವೆ. ಆವರಣದಲ್ಲಿ ಯೋಜಿತ ರೀತಿಯಲ್ಲಿ ಮರಗಳನ್ನು ಬೆಳೆಸಲಾಗಿದೆ. ಎಂ.ಬಿ.ಬಿ.ಎಸ್. ಕೋರ್ಸಿನ ಮೊದಲ ವರ್ಷಕ್ಕೆ ಎಲ್ಲ ವಿಭಾಗಗಳೂ ಸೇರಿ ೧೩೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿದೆ.

ಇಲ್ಲಿ ಕೆಳಕಂಡ ೧೩ ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಿಗೂ ಅವಕಾಶವಿದೆ. ಎಂ.ಎಸ್.–ಅನಾಟಮಿ, ಜನರಲ್ ಸರ್ಜರಿ, ಅರ್ಥೋಪಿಡಿಕ್ಸ್, ಇ.ಎನ್.ಟಿ. ಆಪ್ತಾಲ್ಮಾಲಜಿ, ಎಂ.ಡಿ.–ಫಿಸಿಯಾಲಜಿ, ಪೆಥಾಲಜಿ, ಮೈಕ್ರೋಬಯಾಲಜಿ, ಜನರಲ್ ಮೆಡಿಸಿನ್, ಪೀಡಿಯಾಟ್ರಿಕ್ಸ್, ಅನೆಸ್ತೇಷಿಯಾ, ರೇಡಿಯೋ ಡಯಾಗ್ನೋಸಿಸ್, ಓಬಿಜಿ (ಸ್ತ್ರೀರೋಗ ಮತ್ತು ಪ್ರಸೂತಿ ಶಾಸ್ತ್ರ) ಈ ಹದಿಮೂರು ಸ್ನಾತಕೋತ್ತರ ಕೋರ್ಸುಗಳಿಗೆ ಒಟ್ಟು ಕೇವಲ ೧೯ ಮಂದಿಗೆ ಮಾತ್ರ ಪ್ರವೇಶವಿದೆ. ಪ್ರಸ್ತುತ ಎಂ.ಡಿ. ಪೀಡಿಯಾಟ್ರಿಕ್ಸ್ (ಶಿಶುರೋಗ ತಜ್ಞ) ಮತ್ತು ಫಿಜಿಯಾಲಜಿ ವಿಭಾಗದಲ್ಲಿ ತಲಾ ಮೂರು ಜನರ ಪ್ರವೇಶಕ್ಕೆ, ಅನಾಟಮಿ ಮತ್ತು ಮೈಕ್ರೋಬಯಾಲಜಿ ವಿಭಾಗದಲ್ಲಿ ತಲಾ ಇಬ್ಬರು ವಿದ್ಯಾರ್ಥಿಗಳ ಪ್ರವೇಶಕ್ಕೆ ಮಾತ್ರ ಅನುಮತಿ ಇದೆ. ಉಳಿದೆಲ್ಲ ವಿಭಾಗಗಳಲ್ಲಿ ತಲಾ ಒಬ್ಬೊಬ್ಬ ವಿದ್ಯಾರ್ಥಿಗೆ ಮಾತ್ರ ಪ್ರವೇಶಾವಕಾಶವಿದೆ.

ಡಿಪ್ಲೋಮಾ ಕೋರ್ಸುಗಳು: ಈ ಕಾಲೇಜಿನಲ್ಲಿ ಏಳು ವೈದ್ಯಕೀಯ ಡಿಪ್ಲೋಮಾ ಕೋರ್ಸುಗಳಿದ್ದು ಪ್ರತಿ ಕೋರ್ಸ್‌ಗೆ ಸೇರಿಸಿಕೊಳ್ಳಬಹುದಾದ ವಿದ್ಯಾರ್ಥಿಗಳು ಈ ರೀತಿ ಇರುತ್ತದೆ. ೧) ಡಿಸಿ.ಎಚ್.– ೨; ೨) ಡಿ.ಎಂ.ಆರ್.ಡಿ.– ೨; ೩) ಡಿ.ಓ.ಎಂ.ಎಸ್.–೨; ೪) ಡಿ.ಎಲ್.ಓ.–೨; ೫) ಡಿ.ಎ.–೨; ೬) ಡಿ.ಆರ್ಥೋ –೧; ೭) ಡಿ.ಜಿ.ಓ.–೨; ಒಟ್ಟು–೧೩

ಅಧ್ಯಾಪಕ ವೃಂದ : ಈ ಕಾಲೇಜಿನಲ್ಲಿರುವ ಅಧ್ಯಾಪಕ ವೃಂದದವರ ಸಂಖ್ಯೆ, ವಿಭಾಗವಾರು ಹೀಗಿದೆ – (ಆಧಾರ: ಕಾಲೇಜಿನ ವೆಬ್‌ಸೈಟ್) ೧)ಅನಾಟಮಿ ವಿಭಾಗ – ಪ್ರಾಧ್ಯಾಪಕರು – ೨, ಸಹಪ್ರಾಧ್ಯಾಪಕರು –೮, ಒಟ್ಟು=೧೦ (೨) ಅನೆಸ್ತೇಷಿಯಾ ವಿಭಾಗ – ಪ್ರಾಧ್ಯಾಪಕರು – ೫, ಸಹಪ್ರಾಧ್ಯಾಪಕರು – ೭, (೩) ಬಯೋಕೆಮಿಸ್ಟ್ರಿ ವಿಭಾಗ ಸಹಪ್ರಾಧ್ಯಾಪಕರು – ೨, ಸಹಾಯಕ ಪ್ರಾಧ್ಯಾಪಕರು–೩, (೪) ಕಮ್ಯುನಿಟಿ ಮೆಡಿಸನ್ – ಪ್ರಾಧ್ಯಾಪಕರು–೬, ಸಹಪ್ರಾಧ್ಯಾಪಕರು– ೧೧, (೫) ಡರ್ಮಟಾಲಜಿ– ಪ್ರಾಧ್ಯಾಪಕರು–೧, ಸಹಪ್ರಾಧ್ಯಾಪಕರು–೨, (೬)ಅಪರಾಧ ವೈದ್ಯಶಾಸ್ತ್ರ–ಪ್ರಾಧ್ಯಾಪಕರು–೨, ಸಹಪ್ರಾಧ್ಯಾಪಕರು – ೨, (೭) ಓಬಿಜಿ ವಿಭಾಗ–ಪ್ರಾಧ್ಯಾಪಕರು ೧, ಸಹಪ್ರಾಧ್ಯಾಪಕರು–೪, ಸಹಾಯಕ ಪ್ರಾಧ್ಯಾಪಕರು–೫, (೮) ಮೆಡಿಸಿನ್ ವಿಭಾಗ – ಪ್ರಾಧ್ಯಾಪಕರು – ೬, ಸಹ ಪ್ರಾಧ್ಯಾಪಕರು–೨, ಸಹಾಯಕ ಪ್ರಾಧ್ಯಾಪಕರು –೧೧, (೯) ಕ್ಷಯ ಮತ್ತು ಎದೆ ರೋಗಗಳು– ಸಹಪ್ರಾಧ್ಯಾಪಕರು ೧, ಸೀನಿಯರ್ ರೆಸಿಡೆಂಟ್ಸ್–೨, ಜ್ಯೂನಿಯರ್ ರೆಸಿಡೆಂಟ್ಸ್ ೩, (೧೦) ಮೈಕ್ರೋಬಯಾಲಜಿ–ಪ್ರಾಧ್ಯಾಪಕರು – ೨, ಸಹಪ್ರಾಧ್ಯಾಪಕರು – ೧, ಸಹಾಯಕ ಪ್ರಾಧ್ಯಾಪಕರು–೫, , (೧೧) ಆಪ್ತಾಲ್ಮಾಲಜಿ – ಪ್ರಾಧ್ಯಾಪಕರು–೧, ಸಹಪ್ರಾಧ್ಯಾಪಕರು–೨, ಸಹಾಯಕ ಪ್ರಾಧ್ಯಾಪಕರು ೪, (೧೨) ಆರ್ಥೋಪಿಡಿಕ್ಸ್– ಪ್ರಾಧ್ಯಾಪಕರು–೪, ಸಹಪ್ರಾಧ್ಯಾಪಕರು–೩, ಸಹಾಯಕ ಪ್ರಾಧ್ಯಾಪಕರು–೪, (೧೩)ಇ.ಎನ್.ಟಿ. ಪ್ರಾಧ್ಯಾಪಕರು–೩, ಸಹ ಪ್ರಾಧ್ಯಾಪಕರು–೩,

ಆಡಿಯಾಲಜಿಸ್ಟ್–೧, (೧೪)ಪೀಡಿಯಾಟ್ರಿಕ್ಸ್– ಪ್ರಾಧ್ಯಾಪಕರು–೨, ಸಹ ಪ್ರಾಧ್ಯಾಪಕರು–೨, ಸಹಾಯಕ ಪ್ರಾಧ್ಯಾಪಕರು–೬, (೧೫)ಪೆಥಾಲಜಿ– ಪ್ರಾಧ್ಯಾಪಕರು–೪, ಸಹಪ್ರಾಧ್ಯಾಪಕರು–೨, ಸಹಾಯಕ ಪ್ರಾಧ್ಯಾಪಕರು–೫, (೧೬)ಫಾರ್ಮಕಾಲಜಿ ಪ್ರಾಧ್ಯಾಪಕರು–೧, ಸಹಪ್ರಾಧ್ಯಾಪಕರು–೧, ಸಹಾಯಕ ಪ್ರಾಧ್ಯಾಪಕರು–೩, (೧೭)ಫಿಸಿಯಾಲಜಿ– ಪ್ರಾಧ್ಯಾಪಕರು–೨, ಸಹ ಪ್ರಾಧ್ಯಾಪಕರು–೧, ಸಹಾಯಕ ಪ್ರಾಧ್ಯಾಪಕರು–೪, ಉಪನ್ಯಾಸಕ–೧, , (೧೮) ಸೈಕ್ರಿಯಾಟ್ರಿ– ಪ್ರಾಧ್ಯಾಪಕರು–೨, ಸಹಪ್ರಾಧ್ಯಾಪಕರು–೧, ರೆಸಿಡೆಂಟ್ಸ್–೪, (೧೯) ರೇಡಿಯಾಲಜಿ–ಪ್ರಾಧ್ಯಾಪಕರು–೩, ಸಹಪ್ರಾಧ್ಯಾಪಕರು–೨, ಸಹಾಯಕ ಪ್ರಾಧ್ಯಾಪಕರು–೪, ರೆಸಿಡೆಂಟ್ಸ್ ಪ್ರಾಧ್ಯಾಪಕರು–೬, (೨೦) ಸರ್ಜರಿ– ಪ್ರಾಧ್ಯಾಪಕರು–೪, ಸಹಪ್ರಾಧ್ಯಾಪಕರು–೩, ಸಹಾಯಕ ಪ್ರಾಧ್ಯಾಪಕರು–೧೧,

## ದಂತ ವೈದ್ಯಕೀಯ ಕಾಲೇಜು

ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಪಕ್ಕದಲ್ಲೇ ದಂತ ವೈದ್ಯಕೀಯ ಕಾಲೇಜು ಇದೆ. ಇದು–ಜಿಲ್ಲೆಯಲ್ಲಿನ ಏಕೈಕ ದಂತವೈದ್ಯ ಕಾಲೇಜು. ಇಲ್ಲಿ ಪ್ರತಿವರ್ಷ ೪೦ ವಿದ್ಯಾರ್ಥಿಗಳನ್ನು ಮೊದಲ ವರ್ಷಕ್ಕೆ ಸೇರಿಸಿಕೊಳ್ಳಲು ಅವಕಾಶವಿದೆ. ಅವಲ್ಲದೆ ಇಲ್ಲಿರುವ ನಾಲ್ಕು ಸ್ನಾತಕೋತ್ತರ ಕೋರ್ಸುಗಳು ೧) ಕನ್ಸರ್ವೇಟಿವ್ ಡೆಂಟಿಸ್ಟ್ರಿ (Conservative Dentistry), ೨) ಪೆರಿಆಡಾಂಟಿಕ್ಸ್ (Periodontics or Periodontology), ೩) ಆರ್ಥೋಡಾಂಟಿಕ್ಸ್ (Orthodontics), ೪) ಓರಲ್ ಅಂಡ್ ಮ್ಯಾಕ್ಸಿಲೋ ಫೇಶಿಯಲ್ ಸರ್ಜರಿ (Oral and maxillofacial surgery-OMF). ಇವುಗಳಿಗೆ ತಲಾ ಇಬ್ಬರು ವಿದ್ಯಾರ್ಥಿಗಳನ್ನು ಮಾತ್ರ ದಾಖಲಿಸಿಕೊಳ್ಳಲು ಅವಕಾಶವಿದೆ.

## ಅಶ್ವಿನಿ ಆಯುರ್ವೇದ ವೈದ್ಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ

ಇದು ತುಮಕೂರು ಜಿಲ್ಲೆಯಲ್ಲಿರುವ ಏಕೈಕ ಆಯುರ್ವೇದ ವೈದ್ಯಕೀಯ ಕಾಲೇಜು. ಇದು ಇತ್ತೀಚೆಗೆ ಸ್ಥಾಪನೆಯಾದುದಾಗಿದ್ದು ಕುಣಿಗಲ್‌ಗೆ ಹೋಗುವ ರಸ್ತೆಗೆ ತಾಗಿಕೊಂಡಿರುವ ಒಳ ವರ್ತುಲ ರಸ್ತೆ (Inner ring road) ಯಲ್ಲಿದೆ. ಈ ಕಾಲೇಜಿಗೆ ಹೊಂದಿಕೊಂಡು ದೊಡ್ಡದಾದ ಆಸ್ಪತ್ರೆ, ಅಶ್ವಿನಿ ನರ್ಸಿಂಗ್ ಕಾಲೇಜು ಮತ್ತು ಅರುಣ ನರ್ಸಿಂಗ್ ಕಾಲೇಜುಗಳಿವೆ. ಈ ಎಲ್ಲ ಸಂಸ್ಥೆಗಳ ಕಟ್ಟಡಗಳು, ಒಳಗಿರುವ ತರಗತಿ ಕೋಣೆಗಳು, ಪ್ರಯೋಗಶಾಲೆಗಳು, ಗ್ರಂಥಾಲಯಗಳು ಎಲ್ಲವೂ ಸುಸಜ್ಜಿತವಾಗಿದೆ. ಈ ಆಯುರ್ವೇದ ಕಾಲೇಜಿನಲ್ಲಿ ೩೫ ಮಂದಿಯ ಅಧ್ಯಾಪಕ ವೃಂದವಿದ್ದು ಅವರಲ್ಲಿ ಎಂಟು ಮಂದಿ ಪ್ರಾಧ್ಯಾಪಕರು, ಎಂಟುಮಂದಿ ರೀಡರ್‌ಗಳು ಹಾಗೂ ೧೯ ಮಂದಿ ಉಪನ್ಯಾಸಕರಿದ್ದಾರೆ. (ರಾಜೀವ್‌ಗಾಂಧಿ ವೈದ್ಯಕೀಯ ವಿ.ವಿ.ಯ ಜಾಲತಾಣದ ಪ್ರಕಾರ). ಈ ವೈದ್ಯಕೀಯ ವಿದ್ಯಾಲಯದ ವಿದ್ಯಾರ್ಥಿಗಳ ತರಬೇತಿಗೆಂದೇ ನಿರ್ಮಿಸಲಾಗಿರುವ 'ಅಶ್ವಿನಿ ಆಯುರ್ವೇದ ಆಸ್ಪತ್ರೆ' ಯಲ್ಲಿ ಶಾಸ್ತ್ರೀಯ ಆಯುರ್ವೇದದ ಪದ್ಧತಿಯಂತೆ 'ಪಂಚಕರ್ಮ ಚಿಕಿತ್ಸೆ' ಇತ್ಯಾದಿ ಚಿಕಿತ್ಸೆಗಳನ್ನು ನೀಡಲಾಗುತ್ತದೆ.

## ಫಾರ್ಮಸಿ ಕಾಲೇಜುಗಳು (Pharmacy Colleges)

ತುಮಕೂರು ಜಿಲ್ಲೆಯಲ್ಲಿ ಮೂರು ಫಾರ್ಮಸಿ ಕಾಲೇಜುಗಳಿವೆ. ಅದರಲ್ಲಿ ಹಳೆಯದೆಂದರೆ ಶ್ರೀ ಸಿದ್ಧಗಂಗಾ ಫಾರ್ಮಸಿ ಕಾಲೇಜು.ಇದು ನಗರದ ಮಧ್ಯಭಾಗದಲ್ಲಿ, ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತಕ್ಕೆ ಸಮೀಪವಾಗಿ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ೧೯೮೩–೮೪ರಲ್ಲಿ ಈ ಕಾಲೇಜು ಆರಂಭಗೊಂಡಿತು. ಈ ಕಾಲೇಜು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ (RGUHS) ದ ಸಂಯೋಜನೆಗೆ ಒಳಪಟ್ಟಿದೆ. ಈ ಕಾಲೇಜಿನ ಜಾಲತಾಣ ವಿಳಾಸ: www.scptumkur.ac.in <http://www.scptumkur.ac.in> ೨೦೦೯–೧೦ರಲ್ಲಿ ಕರ್ನಾಟಕ ಸರ್ಕಾರದ ವಿಜ್ಞಾನ ಹಾಗೂ ತಂತ್ರಜ್ಞಾನಕ್ಕಾಗಿ ಇರುವ 'ಯೋಜಕರ ಗುಂಪು' (Vision Group on Science and Technology) ಈ ಕಾಲೇಜನ್ನು 'ವಿಜ್ಞಾನ, ಎಂಜಿನಿಯರಿಂಗ್ ಹಾಗೂ ಔಷಧ' ಕ್ಷೇತ್ರದಲ್ಲಿನ 'ಶ್ರೇಷ್ಠ ಕೇಂದ್ರ' (Centre of excellence in Science, Engineering and Medicine) ಎಂದು ಗುರುತಿಸಿ ಪ್ರಶಸ್ತಿ ನೀಡಿದೆ. ಈ ಕಾಲೇಜಿನಲ್ಲಿ – ಡಿ.ಫಾರ್ಮ, ಬಿ.ಫಾರ್ಮ ಹಾಗೂ ಎಂ.ಫಾರ್ಮ ಕೋರ್ಸುಗಳನ್ನು ನಡೆಸಲಾಗುತ್ತಿದೆ. ಬಿ.ಫಾರ್ಮ ನಾಲ್ಕು ವರ್ಷದ ಕೋರ್ಸ್ ಆಗಿದ್ದು ಪ್ರತಿವರ್ಷ ೬೦ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವಕಾಶವಿದೆ. ಎಂ.ಫಾರ್ಮದ ಎರಡು ವಿಭಾಗಗಳಲ್ಲಿ ಒಂದಕ್ಕೆ ೧೫ ವಿದ್ಯಾರ್ಥಿಗಳಿಗೆ ಮತ್ತೊಂದಕ್ಕೆ ೧೩ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವಕಾಶವಿದೆ. ಈ ಕಾಲೇಜಿನಲ್ಲಿ ಹೊರರಾಜ್ಯದ ಹಾಗೂ ಹೊರದೇಶದ ವಿದ್ಯಾರ್ಥಿಗಳೂ ವ್ಯಾಸಂಗ ಮಾಡುತ್ತಿದ್ದರು.

ಇದು 'ಪ್ರಿಯದರ್ಶಿನಿ ಕಾಲೇಜ್ ಆಫ್ ಫಾರ್ಮಸಿ' ಕೊರಟಗೆರೆಯಲ್ಲಿ ಇದ್ದು, ಇದು ೨೦೧೧-೧೨ಕ್ಕೆ ನಾಲ್ಕುವರ್ಷಗಳನ್ನು ಪೂರೈಸಿರುತ್ತದೆ. ಇಲ್ಲಿ ಈವರೆಗೆ ಬಿ.ಫಾರ್ಮ ತರಗತಿಗಳು ನಡೆಯುತ್ತಿದ್ದು ೨೦೧೧-೧೨ರಿಂದ ಎಂ.ಫಾರ್ಮ ತರಗತಿಗಳನ್ನು ಪ್ರಾರಂಭಿಸಲಾಗಿದೆ. ೨೦೧೧-೧೨ರಿಂದ ಕೊರಟಗೆರೆಯಲ್ಲಿ 'ಶ್ರೀ ರಾಘವೇಂದ್ರ ಕಾಲೇಜ್ ಆಫ್ ಫಾರ್ಮಸಿ' ಸ್ಥಾಪನೆಯಾಗಿದ್ದು, ಇದನ್ನು ಮಧುಗಿರಿಯಲ್ಲಿ ನರ್ಸಿಂಗ್ ಕಾಲೇಜನ್ನು ನಡೆಸುತ್ತಿರುವ 'ಶ್ರೀ ರಾಘವೇಂದ್ರ ಎಜ್ಯುಕೇಷನ್ ಟ್ರಸ್ಟ್' ಈ ಕಾಲೇಜನ್ನು ನಡೆಸುತ್ತಿದೆ.

## ನರ್ಸಿಂಗ್ ಕಾಲೇಜುಗಳು (Nursing Colleges)

ಆಸ್ಪತ್ರೆಗಳಲ್ಲಿ ರೋಗಿಗಳ ಶುಶ್ರೂಷೆಗೆ ಹಾಗೂ ವೈದ್ಯರಿಗೆ ನೆರವಾಗಲು ತೀರಾ ಅಗತ್ಯವಾದ ಸಿಬ್ಬಂದಿ ಎಂದರೆ ಶುಶ್ರೂಷಕ/ಶುಶ್ರೂಷಕಿಯರದ್ದು. ಇದಕ್ಕೆ ಅಗತ್ಯವಾದ ನರ್ಸಿಂಗ್‌ನಲ್ಲಿ ಡಿಪ್ಲೊಮಾ ಅಥವಾ ಪದವಿ ಶಿಕ್ಷಣವನ್ನು ನರ್ಸಿಂಗ್ ಕಾಲೇಜುಗಳು ಒದಗಿಸಿಕೊಡುತ್ತವೆ. ಇವನ್ನು 'ಕಾಲೇಜ್ ಆಫ್ ನರ್ಸಿಂಗ್ ಸೈನ್ಸಸ್' (College of Nursing Sciences) (ಶುಶ್ರೂಷಾ ವಿಜ್ಞಾನ ಕಾಲೇಜು) ಎಂದು ಕರೆಯಲಾಗುತ್ತದೆ. ಔಷಧಿ ಹಾಗೂ ಚಿಕಿತ್ಸೆ ನೀಡುವುದಕ್ಕೆ ಸಂಬಂಧಿಸಿದ ವೃತ್ತಿ ಇದಾಗಿರುವುದರಿಂದ ಇವೂ ಕೂಡಾ ವೈದ್ಯಕೀಯ ಹಾಗೂ ಔಷಧ ವಿಜ್ಞಾನ (ಫಾರ್ಮಸಿ) ಕಾಲೇಜುಗಳಂತೆ 'ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ'ಕ್ಕೆ ಸಂಯೋಜನೆ ಹೊಂದಿರುತ್ತವೆ. ತುಮಕೂರು ಜಿಲ್ಲೆಯಲ್ಲಿ ೧) ಶ್ರೀದೇವಿ ಕಾಲೇಜ್ ಆಫ್ ನರ್ಸಿಂಗ್, ಶಿರಾ ರಸ್ತೆ, ತುಮಕೂರು, ೨) ಅರುಣ ಕಾಲೇಜ್ ಆಫ್ ನರ್ಸಿಂಗ್, ಮರಳೂರು, ತುಮಕೂರು. ೩) ಶ್ರೀ ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು. ೪) ರಾಘವೇಂದ್ರ ಕಾಲೇಜ್ ಆಫ್ ನರ್ಸಿಂಗ್, ಮಧುಗಿರಿ. ೫) ಶ್ರೀ ಸಿದ್ಧಾರ್ಥ ಕಾಲೇಜ್ ಆಫ್ ನರ್ಸಿಂಗ್, ಅಗಳಕೋಟೆ, ಬಿ.ಹೆಚ್.ರಸ್ತೆ, ತುಮಕೂರು. ೬) ಅಕ್ಷಯ ಕಾಲೇಜ್ ಆಫ್ ನರ್ಸಿಂಗ್, ಅಶೋಕನಗರ, ತುಮಕೂರು. ೭) ವರದರಾಜ ಕಾಲೇಜ್ ಆಫ್ ನರ್ಸಿಂಗ್, ಒಳವರ್ತುಲ ರಸ್ತೆ, ತುಮಕೂರು. ೮)ಅನಿರುದ್ಧ ಕಾಲೇಜ್ ಆಫ್ ನರ್ಸಿಂಗ್, ಅಶೋಕನಗರ, ತುಮಕೂರು. ೯)ಅಶ್ವಿನಿ ಕಾಲೇಜ್ ಆಫ್ ನರ್ಸಿಂಗ್, ಮರಳೂರು, ತುಮಕೂರು. ೧೦) ಶ್ರೀ ರಮಣ ಮಹರ್ಷಿ ಕಾಲೇಜ್ ಆಫ್ ನರ್ಸಿಂಗ್, ಮರಳೇನಹಳ್ಳಿ, ಶಿರಾ ರಸ್ತೆ, ತುಮಕೂರು. ೧೧) ಶ್ರೀ ಬಸವೇಶ್ವರ ಕಾಲೇಜ್ ಆಫ್ ನರ್ಸಿಂಗ್, ಕೆ.ಹೆಚ್.ಬಿ. ಕಾಲನಿ, ತಿಪಟೂರು. ೧೨) ಶ್ರೀ ಸಪ್ತಗಿರಿ ನರ್ಸಿಂಗ್ ಕಾಲೇಜ್, ಕುಣಿಗಲ್. ೧೩) ಸೌರಭ ಇನ್ಸ್‌ಟಿಟ್ಯೂಟ್ ಆಫ್ ನರ್ಸಿಂಗ್, ಶ್ರೀಮಾತಾ ಬಿಲ್ಡಿಂಗ್, ಎಸ್.ಐ.ಟಿ. ಮುಖ್ಯರಸ್ತೆ, ಸೋಮೇಶ್ವರ ಪುರಂ, ತುಮಕೂರು. ೧೪) ಶ್ರೀಕೃಷ್ಣ ಕಾಲೇಜ್ ಆಫ್ ನರ್ಸಿಂಗ್, ಬಟವಾಡಿ, ತುಮಕೂರು. ೧೫) ಭಾರತಿ ಕಾಲೇಜ್ ಆಫ್ ನರ್ಸಿಂಗ್, ಕೆ.ಆರ್. ಬಡಾವಣೆ, ತುಮಕೂರು ಹೀಗೆ ಒಟ್ಟು ೧೫ ನರ್ಸಿಂಗ್ ಕಾಲೇಜುಗಳಿವೆ. ಇವೆಲ್ಲವೂ ನರ್ಸಿಂಗ್ ಸೈನ್ಸ್‌ನಲ್ಲಿ ಬಿ.ಎಸ್‌ಸಿ ಪದವಿ ಶಿಕ್ಷಣವನ್ನು ಹಾಗೂ ಇತರೆ ಸಂಬಂಧಿತ ಕೋರ್ಸ್‌ಗಳನ್ನು ನಡೆಸುತ್ತಿವೆ.

ಈ ಎಲ್ಲ ಕಾಲೇಜುಗಳೂ 'ಇಂಡಿಯನ್ ನರ್ಸಿಂಗ್ ಕೌನ್ಸಿಲ್ (Indian Nursing Council)'ನ ಮಾನ್ಯತೆ ಹೊಂದಿರಬೇಕಾದ್ದು ಕಡ್ಡಾಯವಾಗಿದೆ. ಅಕ್ಷಯ ಕಾಲೇಜ್ ಆಫ್ ನರ್ಸಿಂಗ್, ಅನಿರುದ್ಧ ಕಾಲೇಜ್ ಆಫ್ ನರ್ಸಿಂಗ್, ಶ್ರೀರಮಣಮಹರ್ಷಿ ಕಾಲೇಜ್ ಆಫ್ ನರ್ಸಿಂಗ್, ಶ್ರೀ ಬಸವೇಶ್ವರ ಕಾಲೇಜ್ ಆಫ್ ನರ್ಸಿಂಗ್, ಸೌರಭ ಇನ್ಸ್‌ಟಿಟ್ಯೂಟ್ ಕಾಲೇಜ್ ಆಫ್ ನರ್ಸಿಂಗ್ ಈ ಕಾಲೇಜುಗಳಲ್ಲಿ ಮೊದಲ ವರ್ಷದ 'ಬಿ.ಎಸ್‌ಸಿ ನರ್ಸಿಂಗ್ ಸೈನ್ಸ್'ಗೆ ತಲಾ ೪೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅನುಮತಿ ಇದೆ. 'ಸಪ್ತಗಿರಿ ಕಾಲೇಜ್ ಆಫ್ ನರ್ಸಿಂಗ್'-ಗೆ ಮಾತ್ರ ೫೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಅನುಮತಿ ಇದೆ. ಉಳಿದ ಕಾಲೇಜುಗಳಿಗೆ ತಲಾ ೬೦ ವಿದ್ಯಾರ್ಥಿಗಳನ್ನು ಮೊದಲ ವರ್ಷದ ಬಿ.ಎಸ್‌ಸಿ. ನರ್ಸಿಂಗ್‌ಗೆ ಸೇರಿಸಿಕೊಳ್ಳುವ ಅನುಮತಿಯನ್ನು ಭಾರತೀಯ ನರ್ಸಿಂಗ್ ಕೌನ್ಸಿಲ್ ನೀಡಿದೆ.

ಮೇಲ್ಕಂಡ ಕೆಲವು ಕಾಲೇಜುಗಳಲ್ಲಿ 'ಡಿಪ್ಲೊಮಾ ಇನ್ ನರ್ಸಿಂಗ್ ಸೈನ್ಸಸ್' (Diploma in Nursing Sciences) ಕೋರ್ಸ್ ಸಹಾ ನಡೆಯುತ್ತಿದೆ. ೨೦೧೦ರ ವೇಳೆಗೆ ಈ ಕೋರ್ಸನ್ನು ರದ್ದು ಮಾಡಿ ಕೇವಲ ಬಿ.ಎಸ್‌ಸಿ., ಮತ್ತು ಎಂ.ಎಸ್‌ಸಿ., ಇನ್ ನರ್ಸಿಂಗ್ ಸೈನ್ಸ್ - ಕೋರ್ಸ್‌ಗಳನ್ನು ಉಳಿಸಿಕೊಳ್ಳಬೇಕೆಂದು ಭಾರತೀಯ ನರ್ಸಿಂಗ್ ಕೌನ್ಸಿಲ್ ಬಯಸಿತ್ತು. ಅದೇ ರೀತಿಯ ಸೂಚನೆಗಳನ್ನು ನರ್ಸಿಂಗ್ ಕಾಲೇಜುಗಳಿಗೆ ನೀಡಲಾಗಿತ್ತು. ಆದರೆ ಹಾಗೆ ಮಾಡಿದರೆ ಆಸ್ಪತ್ರೆಗಳಿಗೆ ಬೇಕಾಗುವಷ್ಟು ಶುಶ್ರೂಷಕರು ಸಿಗದೆ ಹೋಗಬಹುದೆಂಬ ದೃಷ್ಟಿಯಿಂದ ಇನ್ನೂ ಸ್ವಲ್ಪ ಕಾಲ ಡಿಪ್ಲೋಮಾ ಕೋರ್ಸನ್ನು ಉಳಿಸಿಕೊಳ್ಳುವ ನಿರ್ಧಾರವನ್ನು ಭಾರತೀಯ ನರ್ಸಿಂಗ್ ಕೌನ್ಸಿಲ್ ಮಾಡಿದೆ. ಆದ್ದರಿಂದ ಹಲವು ಕಾಲೇಜುಗಳು ಡಿಪ್ಲೊಮಾ ಹಾಗೂ ಪದವಿ ತರಗತಿಗಳೆರಡನ್ನೂ ನಡೆಸುತ್ತಿವೆ. ಕೆಲವು ಕಾಲೇಜುಗಳಲ್ಲಿ ನರ್ಸಿಂಗ್

ಸೈನ್ಸ್‌ನಲ್ಲಿ ಎಂ.ಎಸ್‌ಸಿ ಪದವಿಯೂ ಇದೆ. ಎಂಎಸ್‌ಸಿ ಪದವಿ ತರಗತಿಗಳು ನಡೆಯುವ ಕಾಲೇಜು ಹಾಗೂ ಅಲ್ಲಿನ ಪ್ರವೇಶಾವಕಾಶಗಳ ವಿವರ ಹೀಗಿದೆ. ೧) ಶ್ರೀದೇವಿ ಕಾಲೇಜ್ ಆಫ್ ನರ್ಸಿಂಗ್ – ತುಮಕೂರು ಹಾಗೂ ೨) ಅರುಣ ಕಾಲೇಜ್ ಆಫ್ ನರ್ಸಿಂಗ್, ತುಮಕೂರು: ಈ ಕಾಲೇಜುಗಳಲ್ಲಿ ಐದು ವಿಷಯಗಳಿಗೆ ಸಂಬಂಧಿಸಿದಂತೆ ತಲಾ ಐದು ವಿದ್ಯಾರ್ಥಿಗಳಂತೆ ಒಟ್ಟು ೨೫ ವಿದ್ಯಾರ್ಥಿಗಳಿಗೆ ಎಂ.ಎಸ್‌ಸಿ ನರ್ಸಿಂಗ್ ಅಧ್ಯಯನದ ಅವಕಾಶವಿದೆ. ೩) ರಾಘವೇಂದ್ರ ಕಾಲೇಜ್ ಆಫ್ ನರ್ಸಿಂಗ್, ಮಧುಗಿರಿ – ನಾಲ್ಕು ವಿಷಯಗಳಲ್ಲಿ ತಲಾ ಮೂವರಂತೆ ಒಟ್ಟು ೧೨ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ೪) ಅಕ್ಷಯ ಕಾಲೇಜ್ ಆಫ್ ನರ್ಸಿಂಗ್, ತುಮಕೂರು – ಒಂದೇ ವಿಷಯದಲ್ಲಿ ೨೦ ಜನರಿಗೆ ಸ್ನಾತಕೋತ್ತರ ಅಧ್ಯಯನದ ಅವಕಾಶವಿದೆ. ೫) ಶ್ರೀರಮಣಮಹರ್ಷಿ ಕಾಲೇಜ್ ಆಫ್ ನರ್ಸಿಂಗ್, ತುಮಕೂರು ಮತ್ತು ೬) ಶ್ರೀ ಬಸವೇಶ್ವರ ಕಾಲೇಜ್ ಆಫ್ ನರ್ಸಿಂಗ್, ಈ ಕಾಲೇಜುಗಳಲ್ಲಿ ಮೂರು ವಿಷಯಗಳಲ್ಲಿ ತಲಾ ಐದರಂತೆ ಒಟ್ಟು ೧೫ ವಿದ್ಯಾರ್ಥಿಗಳಿಗೆ ಎಂ.ಎಸ್ಸಿ ನರ್ಸಿಂಗ್‌ಗೆ ಅವಕಾಶವಿದೆ. ೭) ಭಾರತಿ ಕಾಲೇಜ್ ಆಫ್ ನರ್ಸಿಂಗ್, ತುಮಕುರು – ಇಲ್ಲಿ ಮೂರು ವಿಷಯಗಳಲ್ಲಿ ಒಟ್ಟು ಎಂಟು ವಿದ್ಯಾರ್ಥಿಗಳಿಗೆ ಮಾತ್ರ ಎಂ.ಎಸ್ಸಿ. ನರ್ಸಿಂಗ್ ಅಧ್ಯಯಕ್ಕೆ ಅವಕಾಶವಿದೆ. ೮) ೧೯೯೩ ಶ್ರೀ ಸಿದ್ದಗಂಗಾ ಇನ್ಸ್‌ಟಿಟ್ಯೂಟ್ ಆಫ್ ನರ್ಸಿಂಗ್ ಅಂಡ್ ರಿಸರ್ಚ್ ಸೆಂಟರ್ ಪ್ರಾರಂಭವಾಗಿದ್ದು, ಇದರಲ್ಲಿ ಜನರಲ್ ನರ್ಸಿಂಗ್, ಬೇಸಿಕ್ ಬಿ.ಎಸ್ಸಿ (ನರ್ಸಿಂಗ್), ಪೋಸ್ಟ್ ಬೇಸಿಕ್ ಬಿ.ಎಸ್ಸಿ. ನರ್ಸಿಂಗ್ ಹಾಗೂ ಜ್ಯೂನಿಯರ್ ಹೆಲ್ತ್ ಅಸಿಸ್ಟೆಂಟ್ (ಎ.ಎನ್.ಎಂ) ಕೋರ್ಸ್‌ಗಳಿವೆ. ಜೊತೆಗೆ ಐದು ವಿಷಯಗಳಲ್ಲಿ ಎಂ.ಎಸ್‌ಸಿ., ನರ್ಸಿಂಗ್ ಅಧ್ಯಯನಕ್ಕೆ ಅವಕಾಶವಿದ್ದು ತಲಾ ಐವರಂತೆ ಒಟ್ಟು ೨೫ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ.

## ಎಂಜಿನಿಯರಿಂಗ್ ಶಿಕ್ಷಣ

ತುಮಕೂರು ಜಿಲ್ಲೆಯಲ್ಲಿ ಎಂಜಿನಿಯರಿಂಗ್ ಪದವಿ ಶಿಕ್ಷಣದ ನಾಂದಿ ಹಾಡಿದ್ದು ಶ್ರೀ ಸಿದ್ದಗಂಗಾ ಶಿಕ್ಷಣ ಸಂಸ್ಥೆಯು ಸ್ಥಾಪಿಸಿದ ಸಿದ್ದಗಂಗಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಸ್.ಐ.ಟಿ.). ಇದು ಉತ್ತಮ ಕ್ಯಾಂಪಸ್ಸನ್ನು ಹೊಂದಿರುವುದಲ್ಲದೆ ಭಾರತದ ಗಣ್ಯ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದೆನಿಸಿದೆ. ಇದೂ ಸೇರಿದಂತೆ ತುಮಕೂರು ಜಿಲ್ಲೆಯಲ್ಲಿ ಒಟ್ಟು ಎಂಟು ಎಂಜಿನಿಯರಿಂಗ್ ಕಾಲೇಜುಗಳಿವೆ. ಇವುಗಳಲ್ಲಿ ಐದು ತುಮಕೂರು ನಗರದ ವ್ಯಾಪ್ತಿಯಲ್ಲಿದ್ದರೆ, ಗುಬ್ಬಿಯಲ್ಲಿ ಒಂದು ಹಾಗೂ ತಿಪಟೂರಿನಲ್ಲಿ ಎರಡು ಕಾಲೇಜುಗಳಿವೆ. ೨೦೧೦ರ ಮಾರ್ಚ್ ೩೧ ರಲ್ಲಿದ್ದಂತೆ ಈ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಮುಂದಿನಂತಿದೆ.

| ಕ್ರ.ಸಂ. | ಕಾಲೇಜು | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು | ಒಟ್ಟು |
|---|---|---|---|---|
| ೧ | **ಚೆನ್ನಬಸವೇಶ್ವರ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಗುಬ್ಬಿ** | ೧೧೨ | ೭೭ | ೧೮೯ |
| ೨ | **ತುಮಕೂರಿನಲ್ಲಿನ ಐದು ಕಾಲೇಜುಗಳು** | ೪೯೬೯ | ೩೬೫ | ೮೫೮೪ |
| ೩ | **ತಿಪಟೂರಿನಲ್ಲಿನ ಎರಡು ಕಾಲೇಜು** | ೯೨೧ | ೮೦೫ | ೧೭೨೬ |

**ಆಧಾರ: ಜಿಲ್ಲಾ ಅಂಕಿ ಅಂಶಗಳ ನೋಟ–೨೦೦೯–೧೦, ಪುಟ–೬೫**

## ಶ್ರೀ ಸಿದ್ದಗಂಗಾ ತಾಂತ್ರಿಕ ಶಿಕ್ಷಣ ಕಾಲೇಜು (Sri Siddaganga Institute of Technology)

ಇದು 'ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ'ಯು ಅಧಿಕೃತವಾಗಿ ನೋಂದಾವಣೆಗೊಂಡ ಬಳಿಕ ಅದರಡಿಯಲ್ಲಿ ಸ್ಥಾಪಿತವಾದ ಮೊದಲ ಕಾಲೇಜು. ಶ್ರೀ ಸಿದ್ಧಗಂಗಾ ವೇದಸಂಸ್ಕೃತ ಪಾಠಶಾಲೆ ೧೯೧೭ರಲ್ಲೇ ಆರಂಭವಾಗಿತ್ತು. ನಂತರ ಶ್ರೀ ಮಠವು ಕೆಲವು ಶಾಲೆಗಳನ್ನು ಸ್ಥಾಪಿಸಿತು. ಆದರೆ ನೇರವಾಗಿ ಅವು ಶ್ರೀ ಮಠದ ವತಿಯಿಂದ ನಡೆಯುತ್ತಿದ್ದವು. ಹೀಗೆ ನಡೆಯುತ್ತಿದ್ದ ಒಟ್ಟು ಶಾಲೆಗಳ ಸಂಖ್ಯೆ ಹತ್ತು ಮಾತ್ರ. ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸುವುದಕ್ಕಾಗಿ ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯನ್ನು ಹುಟ್ಟುಹಾಕಲಾಯಿತು. ನಂತರ ಶ್ರೀಮಠವು ಮುಂಚಿನಿಂದ ನಡೆಸುತ್ತಿದ್ದ ಶಾಲೆಗಳನ್ನು ಈ ಸಂಸ್ಥೆಯ ಸುಪರ್ದಿಗೆ ಹಸ್ತಾಂತರಿಸಲಾಯಿತು.

೧೯೬೩ರ ಜೂನ್ ತಿಂಗಳಲ್ಲಿ ಈ ಕಾಲೇಜು ಪ್ರಾರಂಭವಾಗಿದ್ದು, ಮೈಸೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿತ್ತು. ಕೆಲವು ವರ್ಷ ಪ್ರೌಢಶಾಲೆಯೊಂದರ ಕಟ್ಟಡದಲ್ಲಿ ಕಾಲೇಜು ನಡೆಯಿತು. ನಗರದ ಎಂ.ವಿ. ಶಿವಪ್ಪ ಎಂಬುವರು ನಗರದ ಮಧ್ಯಭಾಗದಲ್ಲಿದ್ದ ತಮ್ಮ ೪೫ ಎಕರೆ ಭೂಮಿಯನ್ನು ಈ ಕಾಲೇಜಿಗಾಗಿ ದೇಣಿಗೆ ನೀಡಿದರು. ಆ ಸ್ಥಳದಲ್ಲಿ ಅನೇಕ ದಾನಿಗಳ ದೇಣಿಗೆಗಳಿಂದ ವಿವಿಧ ಕಟ್ಟಡಗಳನ್ನು ನಿರ್ಮಿಸಲಾಯಿತು. ಪ್ರಾರಂಭದಲ್ಲಿ ಕೇವಲ ಆರು ಜನ ಅಧ್ಯಾಪಕರು

ಹಾಗೂ ೧೨೦ ವಿದ್ಯಾರ್ಥಿಗಳನ್ನು ಈ ಕಾಲೇಜು ಹೊಂದಿತ್ತು. ಈಗಿನ ಆವರಣಕ್ಕೆ ಕಾಲೇಜು ಸ್ಥಳಾಂತರಗೊಂಡಿದ್ದು ೧೯೬೬ರಲ್ಲಿ. ೧೯೬೬-೬೭ರಲ್ಲಿ ಕಾಲೇಜಿನಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ೪೭೦. ೧೯೮೮-೮೯ರಲ್ಲಿ ಇದು ೩೩೬೫ ಆಯಿತು. ೨೦೦೬-೦೭ರಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ ೩೫೧೨. ಇದರಲ್ಲಿ ೭೪೯ ವಿದ್ಯಾರ್ಥಿನಿಯರಿದ್ದರು. ಭಾರತದ ಬೇರೆ ಬೇರೆ ರಾಜ್ಯಗಳಿಂದಲ್ಲದೆ ವಿದೇಶದ ಕೆಲವು ವಿದ್ಯಾರ್ಥಿಗಳೂ ಇಲ್ಲಿ ಶಿಕ್ಷಣ ಪಡೆಯುತ್ತಾರೆ. ೧೯೬೩ರಲ್ಲಿ ಆರು ಮಂದಿ ಶಿಕ್ಷಕರಿದ್ದರೆ ೧೯೬೬-೬೭ರಲ್ಲಿ ೩೫ ಜನ ಖಾಯಂ ಹಾಗೂ ೧೯ ತಾತ್ಕಾಲಿಕ ಅಧ್ಯಾಪಕರು ಈ ಕಾಲೇಜಿನಲ್ಲಿದ್ದರು. ೨೦೦೭ರ ವೇಳೆಗೆ ಇಲ್ಲಿನ ಅಧ್ಯಾಪಕರ ಸಂಖ್ಯೆ ೨೬೦ನ್ನು ತಲುಪಿತ್ತು. ಇವರಲ್ಲಿ ಪ್ರಾಧ್ಯಾಪಕರು ೨೭, ಡಾಕ್ಟರೇಟ್ ಪಡೆದವರು ೨೪ ಜನರಿದ್ದರು. ಆಡಳಿತ ಹಾಗೂ ತಾಂತ್ರಿಕ ವಿಭಾಗದವರೂ ಸೇರಿ ಈಗ ಈ ಕಾಲೇಜಿನಲ್ಲಿ ೫೪೫ ಜನ ಸಿಬ್ಬಂದಿ ವರ್ಗವು ಕಾರ್ಯನಿರ್ವಹಿಸುತ್ತಿರುತ್ತದೆ. ಕಾಲೇಜಿನಲ್ಲಿ ಸುಸಜ್ಜಿತವಾದ ಮೂರು ಮಹಡಿಯ ೯೨,೨೭೩ ಪುಸ್ತಕಗಳನ್ನೊಳಗೊಂಡ ಎರಡು ಗ್ರಂಥಾಲಯಗಳಿವೆ. ಗ್ರಂಥಾಲಯದಲ್ಲಿ ೫೦೦ ಜನರು ಕುಳಿತು ಓದಬಹುದಾದಷ್ಟು ಸ್ಥಳಾವಕಾಶವಿದ್ದು. ಈ ಕಾಲೇಜಿನ ಆವರಣದಲ್ಲಿ ೧೨೦೦ ಜನರು ಕೂರಬಹುದಾದ 'ಬಿರ್ಲಾ ಆಡಿಟೋರಿಯಂ' ಇದೆ. ಹೊರಾಂಗಣ, ಒಳಾಂಗಣ ಕ್ರೀಡಾಂಗಣಗಳಿವೆ. ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳು, ಪ್ರಾಧ್ಯಾಪಕರ ನಿವಾಸಗಳು ಹಾಗೂ ೧೬೦೦ ಕಂಪ್ಯೂಟರ್‌ಗಳು ಅಧ್ಯಾಪಕ ಹಾಗೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿದ್ದವು. ಇಲ್ಲಿ ಸಿವಿಲ್, ಮೆಕ್ಯಾನಿಕಲ್, ಕೆಮಿಕಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್, ಬಯೋಟೆಕ್ನಾಲಜಿ, ಟೆಲಿಕಮ್ಯುನಿಕೇಷನ್, ಆರ್ಕಿಟೆಕ್ಚರ್, ಕಂಪ್ಯೂಟರ್ ಸೈನ್ಸ್, ಮಾಹಿತಿ ವಿಜ್ಞಾನ- ಇತ್ಯಾದಿಗಳಲ್ಲಿ ಎಂಜಿನಿಯರಿಂಗ್ ಶಿಕ್ಷಣ ನೀಡುವ ವಿಭಾಗಗಳಿವೆ. ಆರ್ಕಿಟೆಕ್ಚರ್ ಮಾತ್ರ ಐದು ವರ್ಷದ ಪದವಿ ಕೋರ್ಸ್ ಉಳಿದೆಲ್ಲವೂ ನಾಲ್ಕು ವರ್ಷಗಳದ್ದಾಗಿವೆ. ಬಯೋಟೆಕ್ನಾಲಜಿಗೆ ೩೦, ಆರ್ಕಿಟೆಕ್ಚರ್‌ಗೆ ೪೦, ಮೆಕ್ಯಾನಿಕಲ್‌ಗೆ ೧೪೦, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ಎಂಜಿನಿಯರಿಂಗ್‌ಗೆ ೧೨೦, ಕಂಪ್ಯೂಟರ್ ಸೈನ್ಸ್‌ಗೆ ೧೨೦ ಉಳಿದ ಏಳು ವಿಭಾಗಗಳಿಗೆ ೬೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ.

ಈ ಸಂಸ್ಥೆಯಲ್ಲಿ ಏಳು ವಿಷಯಗಳಲ್ಲಿ ಎಂ.ಟೆಕ್ ಅಧ್ಯಯನ ಮಾಡಲು ಅವಕಾಶವಿದ್ದು, ತಲಾ ೧೮ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಇದಲ್ಲದೆ ಎಂ.ಸಿ.ಎ., ಹಾಗೂ ಎಂ.ಬಿ.ಎ., ಕೋರ್ಸ್‌ಗಳು ಇದ್ದು ಅವುಗಳಿಗೆ ಅನುಕ್ರಮವಾಗಿ ೬೦ ಹಾಗೂ ೧೨೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಎಂ.ಸಿ.ಎ.- ಮೂರು ವರ್ಷದ ಪದವಿಯಾಗಿದ್ದು ಉಳಿದೆಲ್ಲ ಕೋರ್ಸುಗಳೂ ಎರಡು ವರ್ಷದ ಅವಧಿಯವು. ಈ ಸಂಸ್ಥೆಯಲ್ಲಿ ಎಂಜಿನಿಯರಿಂಗ್‌ನ ವಿವಿಧ ವಿಭಾಗಗಳಲ್ಲಿ ಹಾಗೂ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರದಲ್ಲಿ ಪಿಎಚ್.ಡಿ. ಮಾಡಲು ಅವಕಾಶವಿದೆ.

ಪ್ರತಿವರ್ಷ ಹಲವು ಪ್ರತಿಷ್ಠಿತ ಕಂಪೆನಿಗಳು ಬಂದು ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ೨೦೦೭-೦೮ನೇ ಸಾಲಿನಿಂದ ಈ ಕಾಲೇಜಿಗೆ 'ಸ್ವಯಂ ಆಡಳಿತ' ದ ಮಾನ್ಯತೆಯನ್ನು ಕೊಟ್ಟಿದೆ. ಈ ಕಾಲೇಜಿನ ಜಾಲತಾಣದ ವಿಳಾಸ: www.sit.ac.in <http://www.sit.ac.in>

## ಶ್ರೀದೇವಿ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ

ಇದು ೧೯೯೨ರಲ್ಲಿ ಸ್ಥಾಪನೆಯಾದದ್ದು. 'ಶ್ರೀ ಶ್ರೀದೇವಿ ಚಾರಿಟಬಲ್ ಟ್ರಸ್ಟ್' ನಿಂದ ನಡೆಸಲ್ಪಡುತ್ತಿರುವ ಹಲವಾರು ಸಂಸ್ಥೆಗಳಲ್ಲಿ ಒಂದು. ಇದರ ಅಧ್ಯಕ್ಷರು ಡಾ. ಎಂ.ಆರ್. ಹುಲಿನಾಯ್ಕರ್. ಈ ಎಂಜಿನಿಯರಿಂಗ್ ಕಾಲೇಜು ೨೦೦೨ರಲ್ಲಿ ಸ್ಥಾಪನೆಯಾಯಿತು. ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿದೆ. ಈ ಕಾಲೇಜಿನ ಜಾಲತಾಣದ ವಿಳಾಸ: www.shrideviengineering.org <http://www.shrideviengineering.org>. ಈ ಕಾಲೇಜು ಏಳು ಪದವಿ ಹಾಗೂ ಮೂರು ಸ್ನಾತಕೋತ್ತರ ಕೋರ್ಸುಗಳನ್ನು ನಡೆಸುತ್ತಿದೆ. ಪ್ರತಿವರ್ಷ ಒಟ್ಟು ೬೩೬ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದೆ. ಎಂಜಿನಿಯರಿಂಗ್ ಸ್ನಾತಕ ಪದವಿ ಕೋರ್ಸುಗಳು ಬಿ.ಇ.- ೧) ಬಯೋಟೆಕ್ನಾಲಜಿ, ೨) ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್, ೩) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್, ೪) ಸಿವಿಲ್ ಎಂಜಿನಿಯರಿಂಗ್, ೫) ಎಲೆಕ್ಟ್ರಿಕಲ್ಸ್ ಅಂಡ್ ಎಲೆಕ್ಟ್ರಾನಿಕ್ಸ್, ೬) ಇನ್‌ಫರ್ಮೇಷನ್ ಸೈನ್ಸ್ ಅಂಡ್ ಎಂಜಿನಿಯರಿಂಗ್, ೭) ಮೆಕ್ಯಾನಿಕಲ್ ಎಂಜಿನಿಯರಿಂಗ್. ೧) ಎಂ.ಬಿ.ಎ., ೨) ಎಂ.ಟೆಕ್-ಬಯೋಕೆಮಿಸ್ಟ್ರಿ, ೩) ಎಂ.ಟೆಕ್-ಮೆಕ್ಯಾನಿಕಲ್ ಎಂಜಿನಿಯರಿಂಗ್ ಇದಲ್ಲದೆ, ಈ ೧) ಬಯೋಟೆಕ್ನಾಲಜಿ, ೨) ಮೆಕ್ಯಾನಿಕಲ್ ಎಂಜಿನಿಯರಿಂಗ್, ೩) ಕೆಮಿಸ್ಟ್ರಿ, ೪) ಫಿಸಿಕ್ಸ್ ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆಗೂ ಕೂಡ ಮಾನ್ಯತೆ ಪಡೆದಿದೆ. ಈ ಕಾಲೇಜಿಗೆ ಉತ್ತಮ ಅಭ್ಯರ್ಥಿಗಳ ಆಯ್ಕೆಗಾಗಿ ಹಲವು ಪ್ರತಿಷ್ಠಿತ ಕಂಪೆನಿಗಳು ಪ್ರತಿವರ್ಷ ಭೇಟಿಕೊಡುತ್ತವೆ. ಈ ಕಾಲೇಜಿನಲ್ಲಿ ಒಟ್ಟು ೯೫ ಮಂದಿ ಬೋಧಕರಿದ್ದರು.

## ಚನ್ನಬಸವೇಶ್ವರ ತಾಂತ್ರಿಕ ಶಿಕ್ಷಣ ಕಾಲೇಜು – ಗುಬ್ಬಿ

ತುಮಕೂರು ನಗರದಿಂದ ೨೫ ಕಿ.ಮೀ. ದೂರದಲ್ಲಿ ಗುಬ್ಬಿ ಪಟ್ಟಣದ ಹತ್ತಿರ ಬೆಂಗಳೂರು – ಹೊನ್ನಾವರ ರಸ್ತೆಯ ಪಕ್ಕದಲ್ಲಿ ೫೬ ಎಕರೆಗಳ ಪ್ರದೇಶದಲ್ಲಿ ಈ ಕಾಲೇಜು ಇರುತ್ತದೆ. ೨೦೦೧ನೇ ಇಸವಿಯಲ್ಲಿ ಆರಂಭವಾದ ಈ ಕಾಲೇಜು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಪಡೆದಿದೆ. ಇದರ ವೆಬ್‌ಸೈಟ್ ವಿಳಾಸ www.cittumkur.org <http://www.cittumkur.org> ಐ.ಎಸ್.ಓ. ೯೦೦೧:೨೦೦೦ ಪ್ರಮಾಣಪತ್ರವನ್ನು ಪಡೆದಿದೆ. ಸಂಸದ ಶ್ರೀ ಜಿ.ಎಸ್. ಬಸವರಾಜು ಅವರು ಈ ಸಂಸ್ಥೆಯ ಅಧ್ಯಕ್ಷರು. ಇದು ಎಂಜಿನಿಯರಿಂಗ್‌ನ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣಗಳ ಕೋರ್ಸುಗಳನ್ನು ಹೊಂದಿದೆ. ಇಲ್ಲಿರುವ ಎಂಜಿನಿಯರಿಂಗ್ ಪದವಿ ಕೋರ್ಸುಗಳು ಹಾಗೂ ಅವುಗಳಿಗೆ ದಾಖಲು ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಕಂಪ್ಯೂಟರ್ ಸೈನ್ಸ್ – ೧೨೦, ಮಾಹಿತಿ ವಿಜ್ಞಾನ – ೧೨೦, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ – ೬೦, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್ – ೧೨೦, ಮೆಕ್ಯಾನಿಕಲ್ ಎಂಜಿನಿಯರಿಂಗ್ – ೬೦, ಸಿವಿಲ್ ಎಂಜಿನಿಯರಿಂಗ್ – ೬೦ ಸ್ನಾತಕೋತ್ತರ ಕೋರ್ಸುಗಳು: ೧) ಎಂ.ಟೆಕ್ – ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ – ೧೮; ೨) ಎಂಟೆಕ್ – ಎಲೆಕ್ಟ್ರಾನಿಕ್ಸ್–೧೮; ೩) ಎಂ.ಬಿ.ಎ. ಈ ಕಾಲೇಜಿನಲ್ಲಿ ಹದಿನೈದು ಕಂಪ್ಯೂಟರ್ ಕೇಂದ್ರಗಳಿದ್ದು ೬೦೦ಕ್ಕೂ ಹೆಚ್ಚು ಕಂಪ್ಯೂಟರ್‌ಗಳಿವೆ. ಕಟ್ಟಿರುವ ಕಟ್ಟಡಗಳ ಒಟ್ಟು ನೆಲವಿಸ್ತಾರ ಮೂರು ಲಕ್ಷ ಚದರಡಿಗಳಿಗಿಂತ ಹೆಚ್ಚಿದೆ. ವಿಶಾಲವಾದ ಗ್ರಂಥಾಲಯದಲ್ಲಿ ೪೫,೦೦೦ಕ್ಕೂ ಹೆಚ್ಚು ಪುಸ್ತಕಗಳಿವೆ. ಡಿಜಿಟಲ್ ಲೈಬ್ರರಿ ಸೌಕರ್ಯವೂ ಇದ್ದು ಇ–ಜರ್ನಲ್‌ಗಳನ್ನು ಇಂಟರ್‌ನೆಟ್‌ನಲ್ಲಿ ನೋಡಬಹುದಾಗಿದೆ. ನಾಲ್ಕುನೂರು ಜನ ಕೂಡಬಹುದಾದ ಸಭಾಂಗಣವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಹಾಸ್ಟೆಲ್‌ಗಳಿದ್ದು ಜನರೇಟರ್ ಹಾಗೂ ಇಂಟರ್‌ನೆಟ್ ಸೌಲಭ್ಯಗಳಿವೆ. ಈ ಕಾಲೇಜಿನಲ್ಲಿ ಒಂದು ಭಾಷಾ ಪ್ರಯೋಗಾಲಯ ಇದ್ದು ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆಯ ಸರಿಯಾದ ಉಚ್ಚಾರಣೆಯನ್ನು ಕಲಿಯಲು ಸಹಾಯಕವಾಗಿದೆ. 'ಪ್ಲೇಸ್‌ಮೆಂಟ್ ಅಂಡ್ ಟ್ರೈನಿಂಗ್ ಸೆಲ್' ಎಂಬ ವಿಭಾಗವನ್ನು ಕಾಲೇಜು ಹೊಂದಿದ್ದು, ಇದು ಕಂಪೆನಿಗಳೊಡನೆ ಸಂಪರ್ಕವಿಟ್ಟುಕೊಂಡು ಮಾಹಿತಿ ವಿನಿಮಯ, ತರಬೇತಿ, ಉದ್ಯೋಗ, ಮಾರ್ಗದರ್ಶನದಂತಹ ಕೆಲಸಗಳನ್ನು ಮಾಡುತ್ತಿದೆಯಲ್ಲದೆ ವರ್ಷಕ್ಕೊಮ್ಮೆ 'ಜಾಬ್‌ಮೇಳ'ವನ್ನು ೨೦೦೭ ರಿಂದ ವ್ಯವಸ್ಥೆ ಮಾಡುತ್ತಿದೆ.

## ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ

ತುಮಕೂರು ನಗರದ ಕುಣಿಗಲ್ ರಸ್ತೆಯಲ್ಲಿ ೫೫ ಎಕರೆ ಹಸಿರು ಆವರಣದಲ್ಲಿ ೧೯೭೯ರಲ್ಲಿ ಸ್ಥಾಪಿತವಾಗಿರುವ ಈ ಕಾಲೇಜು ಜಿಲ್ಲೆಯ ಎರಡನೆಯ ಅತಿ ಹಳೆಯ ಎಂಜಿನಿಯರಿಂಗ್ ಕಾಲೇಜು. ಇದರ ಜಾಲತಾಣ ವಿಳಾಸ– www.ssit.edu.in <http://www.ssit.edu.in> ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಇದಕ್ಕೆ ೨೦೦೭ರಲ್ಲಿ ಸ್ವಯಂ ಆಡಳಿತದ ಮಾನ್ಯತೆ ನೀಡಿತು. ನಂತರ ೨೦೦೯ರಲ್ಲಿ ಯುಜಿಸಿ, ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನ ನೀಡಿದ್ದರಿಂದ, ಯು.ಜಿ.ಸಿ.ಗೆ ಸಂಯೋಜನೆಗೊಂಡ ವಿಶ್ವವಿದ್ಯಾಲಯವಾಗಿ ಈ ಎಂಜಿನಿಯರಿಂಗ್ ಕಾಲೇಜು ಕಾರ್ಯನಿರ್ವಹಿಸುತ್ತಿದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಎಂಜಿನಿಯರಿಂಗ್ ಕಾಲೇಜುಗಳ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್ ನೆರವು ನೀಡುವ ಯೋಜನೆಯಲ್ಲಿ ಆಯ್ಕೆಯಾದ ಕರ್ನಾಟಕದ ೧೪ ಕಾಲೇಜುಗಳಲ್ಲಿ ಈ ಕಾಲೇಜು ಒಂದಾಗಿದ್ದು, ವಿಶ್ವಬ್ಯಾಂಕ್‌ನಿಂದ ಹತ್ತು ಕೋಟಿ ರೂಪಾಯಿಗಳ ಅನುದಾನ ಪಡೆದಿದೆ.

ಈ ಕಾಲೇಜಿನಲ್ಲಿ ಎಂಜಿನಿಯರಿಂಗ್ ಸ್ನಾತಕ (ಪದವಿ) ವಿಭಾಗದಲ್ಲಿ ಒಂಬತ್ತು ಕೋರ್ಸುಗಳಿವೆ. ಪ್ರತಿ ಕೋರ್ಸಿಗೆ ಸೇರಿಸಿಕೊಳ್ಳಬಹುದಾದ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ. ಸಿವಿಲ್ ಎಂಜಿನಿಯರಿಂಗ್–೪೦, ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಅಂಡ್–೪೦, ಮೆಕ್ಯಾನಿಕಲ್ ಎಂಜಿನಿಯರಿಂಗ್–೬೦, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್–೬೦, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ –೧೨೦, ಕಂಪ್ಯೂಟರ್ ಸೈನ್ಸ್–೧೨೦, ಟೆಲಿಕಮ್ಯೂನಿಕೇಷನ್–೯೦, ಮಾಹಿತಿ ವಿಜ್ಞಾನ– ೯೦, ಮೆಡಿಕಲ್ ಎಲೆಕ್ಟ್ರಾನಿಕ್ಸ್–೩೦ ಮೊದಲ ವರ್ಷದ ಎಂಜಿನಿಯರಿಂಗ್‌ಗೆ ಒಟ್ಟು ೬೧೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಈ ಕಾಲೇಜಿನಲ್ಲಿ ಒಟ್ಟು ಎಂಟು ವಿಭಾಗಗಳಲ್ಲಿ ಸ್ನಾತಕೋತ್ತರ ಎಂಜಿನಿಯರಿಂಗ್ ಪದವಿ ಅಭ್ಯಾಸ ಮಾಡಲು ಅವಕಾಶವಿದೆ. ಈ ವಿಭಾಗಗಳೆಂದರೆ ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಮಾಸ್ಟರ್ ಪದವಿ (ಎಂ.ಸಿ.ಎ.) ಹಾಗೂ ಡಿಜಿಟಲ್ ಎಲೆಕ್ಟ್ರಾನಿಕ್ಸ್, ಥರ್ಮಲ್ ಪವರ್ ಎಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಷನ್ಸ್ ಇನ್ ಎಂಜಿನಿಯರಿಂಗ್

ಡ್ರೈವ್ಸ್, ಕಂಪ್ಯೂಟರ್ ಏಡೆಡ್ ಡಿಜೈನ್ ಆಫ್ ಸ್ಟ್ರಕ್ಚರ್ಸ್, ಪ್ರಾಡಕ್ಟ್ ಡಿಜೈನ್ ಹಾಗೂ ಉತ್ಪಾದನೆ ವಿ.ಎಲ್.ಎಸ್.ಐ ಮತ್ತು ಅದರ ಒಳ ವ್ಯವಸ್ಥೆಗಳು (Embedded systems) ಗಣಕ ವಿಜ್ಞಾನ. ಎಂ.ಸಿ.ಎ. ತರಗತಿಗೆ ೬೦ ಜನಕ್ಕೆ ಪ್ರವೇಶಾವಕಾಶವಿದ್ದರೆ, ಉಳಿದೆಲ್ಲ ಎಂ.ಟೆಕ್ ಕೋರ್ಸುಗಳಿಗೆ ತಲಾ ೧೮ ವಿದ್ಯಾರ್ಥಿಗಳಿಗೆ ಅಧ್ಯಯನದ ಅವಕಾಶವಿದೆ. ಮೆಕ್ಯಾನಿಕಲ್ ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್, ಗಣಿತ, ಹಾಗೂ ಭೌತಶಾಸ್ತ್ರ ಈ ಐದು ವಿಭಾಗಗಳಲ್ಲಿ ಡಾಕ್ಟೊರಲ್ ಅಧ್ಯಯನ ನಡೆಸಲು ಇಲ್ಲಿ ಅವಕಾಶವಿದೆ.

ಇಲ್ಲಿ ಒಟ್ಟು ೩೪,೦೦೦ ಚ.ಮೀ. ವಿಸ್ತಾರದ ವೃತ್ತಿಪರ ಶೈಲಿಯ ಕಟ್ಟಡಗಳಿವೆ. ಗ್ರಂಥಾಲಯದಲ್ಲಿ ಸುಮಾರು ೮೬,೦೦೦ ಪುಸ್ತಕಗಳಿದ್ದು, ೨೧೬ ರಾಷ್ಟ್ರೀಯ / ಅಂತಾರಾಷ್ಟ್ರೀಯ ಮಟ್ಟದ ವಿದ್ವತ್ ಪತ್ರಿಕೆಗಳು ಬರುತ್ತಿವೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ತಲಾ ಎರಡೆರಡು ಹಾಸ್ಟೆಲ್‌ಗಳಿವೆ. ಅಂತರ್ಜಾಲ ಸಂಪರ್ಕ ಸೌಲಭ್ಯವುಳ್ಳ ೯೦೦ ಕಂಪ್ಯೂಟರ್‌ಗಳಿವೆ. ಡಿಜಿಟಲ್ ಗ್ರಂಥಾಲಯವಿದೆ. ಬ್ಯಾಂಕ್, ಎ.ಟಿ.ಎಂ ಸೌಲಭ್ಯ, ಅಂಚೆಕಚೇರಿ, ಇನ್ನೂರು ಮಂದಿ ಕೂರಬಲ್ಲ ವಿಶಾಲ ಕ್ಯಾಂಟೀನ್, ಲಾಂಡ್ರಿ, ನುರಿತ ಅಧ್ಯಾಪಕ ವೃಂದ, ಆಟದ ಮೈದಾನ, ವ್ಯಾಯಾಮ ಶಾಲೆ ಇರುತ್ತವೆ.

### ಕಲ್ಪತರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತಿಪಟೂರು

೧೯೮೬ರಲ್ಲಿ ಸ್ಥಾಪಿತವಾದ ಈ ಕಾಲೇಜು ತಿಪಟೂರಿನಿಂದ ಕೇವಲ ಎರಡು ಕಿಲೋಮೀಟರು ದೂರದಲ್ಲಿದೆ. ಈಗ ರಜತೋತ್ಸವವನ್ನಾಚರಿಸುತ್ತಿರುವ ಈ ಸಂಸ್ಥೆಯ ಜಾಲತಾಣದ ವಿಳಾಸ www.kittiptur.ac.in <http://www.kittiptur.ac.in>. ಇದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿದೆ. ಐದು ವಿಷಯಗಳಲ್ಲಿ ಎಂಜಿನಿಯರಿಂಗ್ ಅಧ್ಯಯನಕ್ಕೆ ಅವಕಾಶವಿದ್ದು ಒಟ್ಟು ೪೮೦ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಪ್ರವೇಶಾವಕಾಶವಿದೆ. ಇಲ್ಲಿರುವ ವಿಭಾಗಗಳು, ಆರಂಭವಾದ ವರ್ಷ ಹಾಗೂ ಪ್ರವೇಶದ ವಿವರ ಈ ಮುಂದಿನಂತಿದೆ.

| ಕ್ರ.ಸಂ. | ವಿಭಾಗದ ಹೆಸರು | ಪ್ರಾರಂಭವಾದ ವರ್ಷ | ಪ್ರವೇಶ ಪರಿಮಿತಿ (ಸೀಟುಗಳ ಸಂಖ್ಯೆ |
|---|---|---|---|
| ೧ | ಕಂಪ್ಯೂಟರ್ ವಿಜ್ಞಾನ | ೧೯೮೬ | ೧೨೦ |
| ೨ | ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ | ೧೯೮೬ | ೧೨೦ |
| ೩ | ಮೆಕ್ಯಾನಿಕಲ್ ಎಂಜಿನಿಯರಿಂಗ್ | ೧೯೯೨ | ೧೨೦ |
| ೪ | ಮಾಹಿತಿ ತಂತ್ರಜ್ಞಾನ | ೧೯೯೫ | ೬೦ |
| ೫ | ಟೆಲಿಕಮ್ಯುನಿಕೇಷನ್ | ೧೯೯೫ | ೬೦ |
| ಒಟ್ಟು | | | ೪೮೦ |

ಇದಲ್ಲದೆ ೨೦೦೮ರಿಂದ ಎಂ.ಬಿ.ಎ. ಅಧ್ಯಯನಕ್ಕೆ ಅವಕಾಶವಿದ್ದು ೧೨೦ ವಿದ್ಯಾರ್ಥಿಗಳ ಪ್ರವೇಶಾವಕಾಶಕ್ಕೆ ಅನುಮತಿ ಪಡೆಯಲಾಗಿದೆ. ಇಲ್ಲಿನ ವಿವಿಧ ವಿಭಾಗಗಳಲ್ಲಿ ಒಟ್ಟು ೭೩ ಜನ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕ/ಉಪನ್ಯಾಸಕರಿದ್ದಾರೆ. ಇಲ್ಲಿನ ಗ್ರಂಥಾಲಯ ೧೦೦೦ ಚ.ಮಿ.ಗಳಷ್ಟು ವಿಸ್ತಾರವಾಗಿದ್ದು, ಸುಮಾರು ೫೫,೦೦೦ ಪುಸ್ತಕಗಳಿವೆ. ಅಲ್ಲದೆ ಪ್ರತ್ಯೇಕ ಡಿಜಿಟಲ್ ಗ್ರಂಥಾಲಯ ವಿಭಾಗವೂ ಇದ್ದು ಅಂತರ್ಜಾಲ ಸೌಲಭ್ಯವುಳ್ಳ ೨೫ ಕಂಪ್ಯೂಟರ್‌ಗಳಿವೆ. ಒಂದು ನೂರು ವಿದ್ವತ್ ಪತ್ರಿಕೆ (ಜರ್ನಲ್) ಗಳನ್ನು ತರಿಸಲಾಗುತ್ತಿದೆಯಲ್ಲದೆ ಕೆಲವು ಇ–ಜರ್ನಲ್‌ಗಳನ್ನೂ ಪಡೆದುಕೊಳ್ಳಲಾಗಿದೆ. ಕಾಲೇಜಿನ ಆವರಣದಲ್ಲಿ ಸಣ್ಣ ಚಿಕಿತ್ಸಾಲಯವಿದೆ. ಇಲ್ಲಿ ನಾಲ್ಕು ಹಾಸ್ಟೆಲ್‌ಗಳಿದ್ದು ೩೫೦ ವಿದ್ಯಾರ್ಥಿಗಳು ಹಾಗೂ ೪೫೦ ವಿದ್ಯಾರ್ಥಿನಿಯರಿಗೆ ಊಟ ವಸತಿಯ ಸೌಲಭ್ಯವಿದೆ. ಅಭ್ಯರ್ಥಿಗಳ ಕ್ಯಾಂಪಸ್ ಆಯ್ಕೆಗಾಗಿ ಕಂಪೆನಿಗಳು ಇಲ್ಲಿಗೆ ಭೇಟಿಕೊಡುತ್ತಿವೆ.

ಈ ಕಾಲೇಜು ೨೦೦೯–೧೦ರಲ್ಲಿ ಪ್ರಾರಂಭಗೊಂಡಿದ್ದು, ಶ್ರೀ ಬಸವೇಶ್ವರ ಎಜುಕೇಷನ್ ಸೊಸೈಟಿ (ರಿ) ಹಲಕುರ್ಕೆಯಿಂದ ನಡೆಸಲ್ಪಡುತ್ತದೆ. ಇದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯಕ್ಕೆ ಸಂಯೋಜನೆ ಹೊಂದಿದ್ದು, ಮೆಕ್ಯಾನಿಕಲ್, ಸಿವಿಲ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಎಂಜಿನಿಯರಿಂಗ್ ಪದವಿ ಕೋರ್ಸುಗಳಿರುತ್ತವೆ. ಈ ಎಲ್ಲಾ ವಿಭಾಗಗಳಿಗೆ ತಲಾ ೬೦ ವಿದ್ಯಾರ್ಥಿಗಳ ಪ್ರವೇಶಾವಕಾಶವಿರುತ್ತವೆ. ಇಲ್ಲಿ ಗ್ರಂಥಾಲಯ ಸೌಲಭ್ಯ, ಕಾಲೇಜು ಬಸ್ ಸೌಕರ್ಯ, ವಿದ್ಯಾರ್ಥಿ ವಿದ್ಯಾರ್ಥಿನಿಯಲರಿಗೆ ಪ್ರತ್ಯೇಕ ಹಾಸ್ಟೆಲ್ ಸೌಕರ್ಯವಿರುತ್ತದೆ.

## ಅಕ್ಷಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ

ತುಮಕೂರಿನಿಂದ ನಾಲ್ಕೈದು ಕಿಲೋಮೀಟರುಗಳ ದೂರದಲ್ಲಿ, ಮಧುಗಿರಿ ರಸ್ತೆಯಲ್ಲಿರುವ 'ಅಕ್ಷಯ ಎಜ್ಯುಕೇಷನ್ ಟ್ರಸ್ಟ್' ಎಂಬ ಸಂಸ್ಥೆ ಈ ಕಾಲೇಜನ್ನು ೨೦೦೯ರಲ್ಲಿ ಪ್ರಾರಂಭಿಸಿದೆ, ಈ ಕಾಲೇಜಿನ ಜಾಲತಾಣದ ವಿಳಾಸ: www.ait-tumkur.ac.in <http://www.ait-tumkur.ac.in>. ಈ ಕಾಲೇಜು ೧ ಎಕರೆ ಪ್ರದೇಶದಲ್ಲಿದೆ. ಇಲ್ಲಿ ನಾಲ್ಕು ವಿಭಾಗಗಳಲ್ಲಿ ಅಧ್ಯಯನಕ್ಕೆ ಅವಕಾಶವಿದೆ. ಮೆಕ್ಯಾನಿಕಲ್ ಎಂಜಿನಿಯರಿಂಗ್–೧೨೦, ೨) ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್–೧೨೦, ೩) ಸಿವಿಲ್ ಎಂಜಿನಿಯರಿಂಗ್– ೬೦, ೪) ಕಂಪ್ಯೂಟರ್ ಸೈನ್ಸ್– ೬೦, ಈ ಕಾಲೇಜು ಆವರಣದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಹಾಸ್ಟೆಲ್‌ಗಳಿವೆ. ಒಟ್ಟು ೩೦೦ ವಿದ್ಯಾರ್ಥಿ ಹಾಗೂ ೧೫೦ ವಿದ್ಯಾರ್ಥಿನಿಯರಿಗೆ ಅಲ್ಲಿ ಊಟ ವಸತಿಯ ಸೌಲಭ್ಯವಿದೆ. ಈ ಕಾಲೇಜಿನ ಗ್ರಂಥಾಲಯ ಕಟ್ಟಡ ೫೮೭ ಚ.ಮೀ. ವಿಸ್ತಾರದಲ್ಲಿದ್ದು, ಇಲ್ಲಿರುವ ಪುಸ್ತಕಗಳ ಸಂಖ್ಯೆ ಸುಮಾರು  ೬೫೪೯. ೧೨ ಜರ್ನಲ್‌ಗಳನ್ನು ತರಿಸುತ್ತಿದ್ದು ಇಂಟರ್‌ನೆಟ್ ಕೇಂದ್ರವೂ ಇದೆ.

## ಹೆಚ್.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ತುಮಕೂರು

ಹೆಚ್.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ ವಿದ್ಯಾಸಂಸ್ಥೆಯು ೧೯೯೭ ರಿಂದ ಪ್ರಾರಂಭವಾಗಿ ಹಂತಹಂತವಾಗಿ ಬೆಳೆದು ತುಮಕೂರಿನ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಕಾಲೇಜುಗಳಲ್ಲಿ ಒಂದಾಗಿರುತ್ತದೆ. ಈ ಸಂಸ್ಥೆಯಲ್ಲಿ ಹೊರ ರಾಜ್ಯದ ಮತ್ತು ಹೊರದೇಶದ ವಿದ್ಯಾರ್ಥಿಗಳು ಸೇರಿದಂತೆ ೧,೫೦೦ಕ್ಕೂ ಮೇಲ್ಪಟ್ಟು ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಈ ಸಂಸ್ಥೆಯಲ್ಲಿ ಅತ್ಯಂತ ಅನುಭವಿ ಮತ್ತು ನುರಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ವಿದ್ಯಾರ್ಥಿಗಳ ಫಲಿತಾಂಶವನ್ನು ಒಳಗೊಂಡಂತೆ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಇದರ ಜೊತೆಗೆ ಈ ಕಾಲೇಜಿನಲ್ಲಿ ಅತ್ಯಂತ ಗುಣಮಟ್ಟದ ಪ್ರಯೋಗಶಾಲೆ ಮತ್ತು ಉಪಕರಣಗಳು ಹಾಗೂ ಗ್ರಂಥಾಲಯ ಮತ್ತು ಹಾಸ್ಟೆಲ್ ಅನುಕೂಲಗಳು ಇದ್ದು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಇದರ ಜೊತೆಗೆ ಉನ್ನತ ಗುಣಮಟ್ಟದ ಮೂಲಭೂತ ಸೌಕರ್ಯಗಳೂ ಇವೆ. ಈ ವಿದ್ಯಾಸಂಸ್ಥೆಯಿಂದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಶಿಕ್ಷಣಕ್ಷೇತ್ರ, ಉದ್ಯೋಗ ಕ್ಷೇತ್ರ, ಕ್ರೀಡಾ ಚಟುವಟಿಕೆಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸ್ಥಾನವನ್ನು ಗಳಿಸಿದ್ದು ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ.

## ವಿಕಲಚೇತನ ಮಕ್ಕಳ ಶಾಲೆಗಳು:

## ವಿಕಲಚೇತನರಾದ ಮಕ್ಕಳಿಗೆ ಕೆಲವು ಶಾಲೆಗಳು ತುಮಕೂರು ಜಿಲ್ಲೆಯಲ್ಲಿವೆ.

೧. **ರೆಡ್‌ಕ್ರಾಸ್ ಕಿವುಡ–ಮೂಗ ಮಕ್ಕಳ ಶಾಲೆ:** ರೆಡ್‌ಕ್ರಾಸ್ ಸಂಸ್ಥೆಯ ತುಮಕೂರು ಶಾಖೆಯು ಈ ಶಾಲೆಯನ್ನು ೧೯೮೨–೮೩ರಲ್ಲಿ ಪ್ರಾರಂಭಿಸಿತು. ಜಿಲ್ಲಾಧಿಕಾರಿ ಈ ಸಂಸ್ಥೆಯ ಪದನಿಮಿತ್ತ ಅಧ್ಯಕ್ಷರು. ಮೊದಲ ವರ್ಷದಲ್ಲಿ ಈ ಶಾಲೆಯಲ್ಲಿದ್ದದ್ದು ಕೇವಲ ಐವರು ವಿದ್ಯಾರ್ಥಿಗಳು, ೨೦೧೧–೧೨ರಲ್ಲಿ ೧೪೦ ಮಂದಿ ವಿದ್ಯಾರ್ಥಿಗಳಿದ್ದರು. ಒಂದರಿಂದ ೧೦ನೇ ತರಗತಿಯವರೆಗೂ ಶಿಕ್ಷಣದ ಸೌಲಭ್ಯ ಇಲ್ಲಿದೆ. ೨೦೧೧–೧೨ರಲ್ಲಿ ಇಲ್ಲಿನ ಪ್ರೌಢಶಾಲಾ ವಿಭಾಗದಲ್ಲಿ ೫೫ ವಿದ್ಯಾರ್ಥಿಗಳಿದ್ದರು. ಹನ್ನೊಂದು ಜನ ಖಾಯಂ ಶಿಕ್ಷಕರು ಹಾಗೂ ಇಬ್ಬರು ತಾತ್ಕಾಲಿಕ ಶಿಕ್ಷಕರಿದ್ದು, ಖಾಯಂ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗೆ ಸರ್ಕಾರದಿಂದ ವೇತನಾನುದಾನ ಬರುತ್ತದೆ. ಇದು ಸನಿವಾಸ ಶಾಲೆಯಾಗಿದ್ದು ಪ್ರತಿ ವಿದ್ಯಾರ್ಥಿಗೆ ಊಟ–ವಸತಿಗಾಗಿ ತಿಂಗಳಿಗೆ ರೂ ೬೦೦/– ರಂತೆ ೨೦೧೧–೧೨ರಲ್ಲಿ ಆರು ಲಕ್ಷ ರೂ.ಗಳ ಅನುದಾನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಬಂದಿರುತ್ತದೆ. ೨೦೧೦–೧೧ರಲ್ಲಿ ಈ ಬಾಬ್ತಿಗೆ ಬಂದ ಮೊಬಲಗು ರೂ ೩,೫೦,೦೦೦/– ಆಗಿತ್ತು. ೨೦೧೧–೧೨ನೇ ಸಾಲಿನಲ್ಲಿ ಈ ಶಾಲೆಯ ೧೪೦ ಮಕ್ಕಳ ಪೈಕಿ ೧೦೮ ಜನ ವಸತಿ ಗೃಹದಲ್ಲಿದ್ದು, ಉಳಿದವರು ತಮ್ಮ ಮನೆಗಳಿಂದ ಬಂದು ಹೋಗುತ್ತಿದ್ದರು. ೧೯೯೨–೯೩ರಲ್ಲಿ ಈ ಶಾಲೆಯಿಂದ ಒಂಬತ್ತು ವಿದ್ಯಾರ್ಥಿಗಳ ಮೊದಲ ತಂಡವು ಹತ್ತನೇ ತರಗತಿ ಪರೀಕ್ಷೆಯನ್ನು ತೆಗೆದುಕೊಂಡಿದ್ದು, ಅವರಲ್ಲಿ ಆರು ಮಂದಿ ತೇರ್ಗಡೆಯಾಗಿದ್ದರು. ೨೦೧೦–೧೧ರಲ್ಲಿ ಹತ್ತುಮಂದಿ ಪರೀಕ್ಷೆ ತೆಗೆದುಕೊಂಡಿದ್ದು ಮೊದಲ ಬಾರಿಗೆ ಯಾರೂ ತೇರ್ಗಡೆಯಾಗದೆ ನಂತರ ನಡೆದ ಪೂರಕ ಪರೀಕ್ಷೆಯಲ್ಲಿ ಆರು ಮಂದಿ ತೇರ್ಗಡೆಯಾಗಿದ್ದರು.

## ಅಂಧಮಕ್ಕಳ ಶಾಲೆಗಳು

ತುಮಕೂರು ಜಿಲ್ಲೆಯಲ್ಲಿ ಎರಡು ಅಂಧಮಕ್ಕಳ ಶಾಲೆಗಳು ಇರುತ್ತವೆ. ಇವೆರಡೂ ಶ್ರೀ ಸಿದ್ದಗಂಗಾ ಮಠದಿಂದ ನಡೆಸಲ್ಪಡುತ್ತಿದ್ದು, ಸರ್ಕಾರದ ಅನುದಾನ ದೊರೆಯುತ್ತದೆ. ಒಂದು ಶಾಲೆಯು ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲೇ ೧೯೭೮ರಿಂದ ನಡೆಯುತ್ತಿದೆ. ಮತ್ತೊಂದು 'ನವಚೇತನ ಅಂಧಮಕ್ಕಳ ಶಾಲೆ' ಕುಣಿಗಲ್‌ನಲ್ಲಿದೆ. ಕುಣಿಗಲ್‌ನ ಈ ಶಾಲೆಯನ್ನು ಮೊದಲು ಬೇರೊಂದು ಸಂಸ್ಥೆ ಪ್ರಾರಂಭಿಸಿತ್ತು. ಅವರಿಗೆ ಅದನ್ನು ನಡೆಸಲು ತೊಂದರೆಯಾದ್ದರಿಂದ ಶ್ರೀಮಠಕ್ಕೆ ಅದನ್ನು ೧೯೯೯-೨೦೦೦ನೇ ವರ್ಷದಲ್ಲಿ ವಹಿಸಿಕೊಟ್ಟರು. ಶ್ರೀ ಸಿದ್ದಗಂಗಾ ಕ್ಷೇತ್ರದಲ್ಲಿರುವ ಅಂಧಶಾಲೆಯಲ್ಲಿ ೨೦೧೧-೧೨ನೇ ಸಾಲಿನಲ್ಲಿ ೭೦ ವಿದ್ಯಾರ್ಥಿಗಳಿದ್ದು ಎಂಟು ಮಂದಿ ಅಧ್ಯಾಪಕರಿದ್ದರು. ಕುಣಿಗಲ್‌ನಲ್ಲಿರುವ ಶಾಲೆಯಲ್ಲಿ ೨೦೧೦-೧೧ನೇ ಸಾಲಿನಲ್ಲಿ ೬೪ ವಿದ್ಯಾರ್ಥಿಗಳೂ ಆರು ಮಂದಿ ಅಧ್ಯಾಪಕರೂ ಇದ್ದರು.

## ಬುದ್ಧಿಮಾಂದ್ಯ ಮಕ್ಕಳ ಶಾಲೆಗಳು

ಜಿಲ್ಲೆಯಲ್ಲಿ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಾಲ್ಕು ಶಾಲೆಗಳನ್ನು ವಿವಿಧ ಸಂಸ್ಥೆಗಳು ನಡೆಸುತ್ತಿವೆ.

೧. ಪ್ರಗತಿ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ಶಿರಾ: ಇದು ಶಿರಾ ಪಟ್ಟಣದ ರಂಗನಾಥನಗರದಲ್ಲಿದೆ. ೨೦೧೧-೧೨ರಲ್ಲಿ ಇಲ್ಲಿ ೫೦ ಮಕ್ಕಳು ಹಾಗೂ ಐವರು ಶಿಕ್ಷಕರಿದ್ದರು. ಇದು ೨೦೦೭-೦೮ರಲ್ಲಿ ಕಾರ್ಯವಾರಂಭಿಸಿದೆ.

೨. ಶ್ರೀಮಾತಾ ವಸತಿಯುತ ಬುದ್ಧಿಮಾಂದ್ಯ ಮಕ್ಕಳ ಶಾಲೆ: ಇದು ಕೊರಟಗೆರೆ ತಾಲ್ಲೂಕಿನ ಕೋಳಾಲ ಗ್ರಾಮದಲ್ಲಿದೆ. ಇಲ್ಲಿ ೨೦೧೧-೧೨ನೇ ಸಾಲಿನಲ್ಲಿ ೩೬ ಮಕ್ಕಳಿದ್ದು, ಏಳನೇ ತರಗತಿವರೆಗೆ ಅವರಿಗೆ ಶಿಕ್ಷಣ ನೀಡಲಾಗುತ್ತದೆ.

೩. ಮಾನಸ ಬುದ್ಧಿಮಾಂದ್ಯ ಮಕ್ಕಳ ಶಾಲೆ: ಇದು ತುಮಕೂರು ನಗದಲ್ಲಿದ್ದು ಹತ್ತು ವರ್ಷಗಳಿಂದ ನಡೆಯುತ್ತಿದೆ. ೨೦೧೦-೧೧ನೇ ಸಾಲಿನಲ್ಲಿ ಪ್ರೀ-ಪ್ರೈಮರಿ ಹಂತದ ೧೯ ಹಾಗೂ ಪ್ರೈಮರಿ ಹಂತದ ೧೯ಮಕ್ಕಳು ಇಲ್ಲಿದ್ದರು.

೪. ಸ್ಪಂದನ ಬುದ್ಧಿಮಾಂದ್ಯ ಮಕ್ಕಳ ಶಾಲೆ

ತುಮಕೂರು ನಗರದ ಬಟವಾಡಿ ಸಮೀಪದ ಮಹಾಲಕ್ಷ್ಮೀನಗರದ ೧೦ನೇ ಕ್ರಾಸ್‌ನಲ್ಲಿರುವ ಈ ಶಾಲೆಯನ್ನು ಖಾಸಗಿ ಟ್ರಸ್ಟ್ ಒಂದು ನಡೆಸುತ್ತಿದೆ. ೨೦೧೧-೧೨ನೇ ಸಾಲಿನಲ್ಲಿ ಇಲ್ಲಿ ೧೪೫ ಮಕ್ಕಳಿದ್ದರು. ಇವರಿಗೂ ಸರ್ಕಾರದ ಅನುದಾನ ದೊರೆಯುತ್ತಿದೆ.

## ಕ್ರೀಡೆಗಳು

ಪ್ರಾಚೀನ ಕಾಲದಿಂದಲೂ ಹಲವಾರು ಜಾನಪದ ಆಟಗಳು ಜಿಲ್ಲೆಯಲ್ಲಿ ಪ್ರಚಲಿತವಿವೆ. ಈ ಮಧ್ಯೆ ಕೆಲವು ಹೊಸ ಆಟಗಳು ಹುಟ್ಟಿಕೊಂಡಿವೆ. ಪುರಾಣ ಹಾಗೂ ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖಿಸಿರುವ ಕುದುರೆ ಸವಾರಿ, ಬೇಟೆ, ಕತ್ತಿವರಸೆ, ಧನುರ್ವಿದ್ಯೆ, ಈಜು, ಅಂಗ ಸಾಧನೆ, ವ್ಯಾಯಾಮ, ಮಲ್ಲಯುದ್ಧ, ಜಲಯುದ್ಧ, ದೃಷ್ಟಿಯುದ್ಧ, ಗದಾಯುದ್ಧಗಳನ್ನು ಕ್ರೀಡೆಗಳೆಂದೇ ಪರಿಗಣಿಸಬಹುದು. ಕ್ರೀಡೆಗಳು ಮನರಂಜನೆಯೊಂದಿಗೆ ಆರೋಗ್ಯ ಪಾಲನೆಗೆ ನೆರವಾಗುತ್ತವೆ. ಜನರು ತಮ್ಮ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ವ್ಯಾಯಾಮ, ಗರಡಿ, ಸಾಮು, ಸೂರ್ಯನಮಸ್ಕಾರ ಇನ್ನಿತರ ಕ್ರೀಡಾ ಚಟುವಟಿಕೆಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡಿದ್ದು, ವಯಸ್ಸಿನ ಬೇಧವಿಲ್ಲದೇ ನಿತ್ಯ ಬೆಳಗ್ಗೆ ವೇಗದ ನಡಿಗೆ ನಡೆಯುವುದು ಎಲ್ಲಾ ಕಡೆ ಕಂಡು ಬರುವ ಸಾಮಾನ್ಯ ದೃಶ್ಯವಾಗಿದೆ. ಹಿಂದಿನಿಂದಲೂ ಹಬ್ಬ ಹರಿದಿನಗಳಂದು, ಧಾರ್ಮಿಕ ಸಮಾರಂಭ ಹಾಗೂ ಜಾತ್ರೆಗಳಲ್ಲಿ ವಿವಿಧ ಬಗೆಯ ಸ್ಪರ್ಧೆಗಳು ನಡೆಯುತ್ತಿದ್ದವು. ತುಮಕೂರು ಜಿಲ್ಲೆಯಲ್ಲಿ ಹಲವು ಪಾರಂಪರಿಕ ಹಾಗೂ ಸ್ಥಳೀಯ ಕ್ರೀಡೆಗಳನ್ನು ಆಡುತ್ತಿದ್ದುದು ಗೋಚರವಾಗುತ್ತದೆ. ಜಿಲ್ಲೆಯ ಸ್ಥಳೀಯ ಕ್ರೀಡೆಗಳಲ್ಲಿ ತಾಲೂಕಿನಿಂದ ತಾಲೂಕಿಗೆ ಹೆಚ್ಚಿನ ವ್ಯತ್ಯಾಸ ಕಂಡು ಬರುವುದಿಲ್ಲ. ಜಿಲ್ಲೆಯಲ್ಲಿ ಪ್ರಚಲಿತವಿರುವ ಪ್ರಮುಖ ಹೊರಾಂಗಣ ಜಾನಪದ ಕ್ರೀಡೆಗಳು ಚಿನ್ನಿ-ದಾಂಡು, ಬುಗುರಿ, ಗೋಲಿ ಆಟ, ದೊಣ್ಣೆವರಸೆ, ಕಬಡ್ಡಿ, ಗುಂಡು ಎತ್ತುವುದು, ಮಲ್ಲಕಂಬ, ಪಿರಮಿಡ್ ಮಡಿಕೆಗಳನ್ನು ಜೋಡಿಸಿ ಹೊಡೆಯುವುದು, ಕುಂಟಾಟ, ಗುಲ್ಜೋರಿಯಾ, ಲಗೋರಿ, ಸೂರ್‌ಚೆಂಡ್ (ಬೆನ್ನು ಚೆಂಡು) ಗೋಣಿಚೀಲದಾಟ, ಕುಂಟೆಬಿಲ್ಲೆ, ಮೂರು ಕಾಲಿನ ಓಟ, ಪಿಲಿಚೆಂಡು, ಕಳ್ಳ-ಪಟ್ಟಿ, ಮರಕೋತಿ, ಆನೆಕಿರ್ರಿ, ಕುಸ್ತಿ, ಕೋಲಾಟ, ಇತ್ಯಾದಿ. ಒಳಾಂಗಣ ಆಟಗಳಲ್ಲಿ ಪ್ರಮುಖವಾದವುಗಳೆಂದರೆ ಚೌಕಾಬಾರ, ಪಗಡೆ, ಚದುರಂಗ, ಹುಲಿಮನೆ(ಹುಲಿಕಟ್ಟು), ಕವಡೆ ಆಟ, ಹುಣಸೇಬೀಜದ ಆಟ, ಅಟ್ಟುಗುಳಿ, ಹಾವು-ಏಣಿ ಆಟ, ಆಣೆ-ಕಲ್ಲಾಟ, ಇತ್ಯಾದಿ, ಗೋಲಿ ಆಟವನ್ನು ಹುಡುಗರು ಆಡುತ್ತಿದ್ದು, ಇದರಿಂದ ಗುರಿ ಸಾಧನೆ ಮಾಡುವ ಗುಣ ಉಂಟಾಗುತ್ತದೆ. ಕೋಲಾಟದಲ್ಲಿ ಜಡೆ ಕೋಲಾಟ, ಉಯ್ಯಾಲೆ ಕೋಲಾಟ ಇತ್ಯಾದಿ ವಿಧಗಳಿದ್ದು, ಸಾಮಾನ್ಯವಾಗಿ ಇವುಗಳನ್ನು ಹಾಡುಗಳ ಸಮೇತವೇ

ಆಡುತ್ತಾರೆ. ಹಲವಾರು ಆಟಗಳನ್ನು ಆಡುವಾಗ ಹಾಡುಗಳನ್ನು ಹೇಳುವುದುಂಟು. ಸರಳ ಸುಂದರ ಹಾಡು ಮತ್ತು ಗೀತೆಗಳನ್ನು ಆಟಗಾರರಿಗೆ ಮತ್ತು ಮಕ್ಕಳಿಗೆ ಬಾಯಿಪಾಠ ಮಾಡಿಸುವ ಶೈಕ್ಷಣಿಕ ಉದ್ದೇಶವನ್ನು ಇಲ್ಲಿ ಕಾಣಬಹುದು. ಜನಪದ ಆಟಗಳ ಮುಖ್ಯ ಅನುಕೂಲವೆಂದರೆ ಇವುಗಳನ್ನು ಆಡಲು ಯಾವುದೇ ಖರ್ಚು ವೆಚ್ಚಗಳಿಲ್ಲ. ಉಪಕರಣಗಳ ಅವಶ್ಯಕತೆ ಇಲ್ಲ. ಸಮಾಜದ ಎಲ್ಲಾ ಸ್ತರಗಳವರು ಆಡಬಹುದು. ಜಿಲ್ಲೆಯಲ್ಲಿ ಬಾಲಕರು ಮತ್ತು ಯುವಕರು ಪ್ರಮುಖವಾಗಿ ಆಡುವ ಆಟಗಳೆಂದರೆ ಕಬಡ್ಡಿ ಮತ್ತು ಖೋಖೋ. ಬಯಲಲ್ಲಿ ಆಡುವ ಆಧುನಿಕ ಕಾಲದ ಆಟಗಳಲ್ಲಿ ಫುಟ್‌ಬಾಲ್, ಕ್ರಿಕೆಟ್, ಬ್ಯಾಡ್‌ಮಿಂಟನ್, ಶೆಟಲ್‌ಕಾಕ್, ಟೆನ್ನಿಸ್ ಮತ್ತು ವಾಲಿಬಾಲ್ ಪ್ರಮುಖವಾದವು. ಒಳಾಂಗಣ ಆಟಗಳಲ್ಲಿ ಚೆಸ್, ಇಸ್ಪೀಟು, ಕೇರಂ, ಟೇಬಲ್ ಟೆನ್ನೀಸ್ ಇತ್ಯಾದಿ ಆಟಗಳು ರೂಢಿಯಲ್ಲಿವೆ. ಜಿಲ್ಲೆಯಲ್ಲಿ ಕುಸ್ತಿಯ ಪರಂಪರೆ ಇದ್ದು, ಕುಸ್ತಿ ಅಖಾಡಗಳು ಗರಡಿ ಮನೆಗಳೆಂದು ಪ್ರಸಿದ್ದವಾಗಿದ್ದವು. ತುಮಕೂರಿನ ಕುಸ್ತಿಪಟುಗಳು ದೇಶದ ಪ್ರಸಿದ್ದ ಜಟ್ಟಿಗಳೊಡನೆ ಕುಸ್ತಿ ಮಾಡಿ ಪ್ರಸಿದ್ಧರಾಗಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿಯ ಜನರು ತಮ್ಮ ಕೃಷಿ ಜೀವನದ ಮಧ್ಯೆ ದೊರೆಯುತ್ತಿದ್ದ ವಿರಾಮ ಕಾಲದಲ್ಲಿ ಬೊಂಬೆಯಾಟ, ಬಯಲಾಟ, ಯಕ್ಷಗಾನ ಕುಣಿತ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ವೈಜ್ಞಾನಿಕ ತಳಹದಿಯ ಮೇಲೆ ದೈಹಿಕ ಶಿಕ್ಷಣ ಮತ್ತು ವ್ಯವಸ್ಥಿತ ತರಬೇತಿ ನೀಡುವುದಕ್ಕಾಗಿ ದೈಹಿಕ ಶಿಕ್ಷಣವನ್ನು ಶಿಕ್ಷಣ ಕ್ರಮದಲ್ಲಿ ಸೇರಿಸಲಾಗಿದ್ದು, ಅದಕ್ಕಾಗಿ ವಿದ್ಯಾರ್ಥಿಗಳಿಗೆ ಸೂಕ್ತ ಶಿಕ್ಷಣ, ತರಬೇತಿ ನೀಡುವುದಕ್ಕಾಗಿ ಎಲ್ಲಾ ಶಾಲಾ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರಿರುತ್ತಾರೆ.

**ಚದುರಂಗ (ಚೆಸ್):** ತುಮಕೂರು ಪ್ರಸ್ತುತದಲ್ಲಿ ಹಲವಾರು ಚದುರಂಗ ಪ್ರತಿಭೆಗಳ ಆಡುಂಬೊಲವಾಗಿದೆ. ಇದರಲ್ಲಿ ಎಳೆಯರೂ, ಹಿರಿಯರೂ ಇದ್ದಾರೆ. ವಿಶೇಷವಾಗಿ ಕಿರಿಯರು ಉಲ್ಲೇಖನೀಯ ಸಾಧನೆಯನ್ನು ಮಾಡಿ ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೌರವಾರ್ಹವಾದ ಸ್ಥಾನ ಗಳಿಸಿದ್ದಾರೆ. ಅಂತರಾಷ್ಟ್ರೀಯ ಚೆಸ್ ಫೆಡರೇಶನ್ನಿನ (ಫಿಡೆ) ರ್‍ಯಾಂಕಿಂ-ಗ್ ಪಡೆಯುವುದೇ ಒಂದು ಸಾಧನೆ ಹಾಗೂ ಅದು ವೆಚ್ಚದಾಯಕವೂ ಹೌದು. ಅಂಥ ಕೆಲವು ಪ್ರತಿಭೆಗಳ ಬಗ್ಗೆ ಇಲ್ಲಿ ಸಂಕ್ಷಿಪ್ತ ಪರಿಚಯವಿದೆ.

**ಶೇಟ್ ಪ್ರಜ್ವಲ್ ಪಿ.:** ಏಳು ವರ್ಷಕ್ಕಿಂತ ಕೆಳಗಿನವರ ವಿಭಾಗದಲ್ಲಿ ರಾಜ್ಯ ಛಾಂಪಿಯನ್ ಆಗಿದ್ದು, (೨೦೦೮). ೨೦೦೯-೧೦, ೧೦-೧೧ ಹಾಗೂ ೨೦೧೧-೧೨ರ ರ್‍ಯಾಪಿಡ್ ಓಪನ್ ಟೂರ್ನಿಯಲ್ಲಿ ನಿರಂತರವಾಗಿ ಮೊದಲ ಸ್ಥಾನ ಪಡೆದು ಛಾಂಪಿಯನ್ ಆಗಿ ಹ್ಯಾಟ್ರಿಕ್ ಸಾಧನೆ ಮಾಡಿದ್ದನು. ಈ ಸಾಧನೆಗಳನ್ನು ಮಾನ್ಯ ಮಾಡಿರುವ ಭಾರತದ ಕೇಂದ್ರೀಯ ವಿದ್ಯಾಲಯ ಸಂಘಟನೆ ೨೦೧೦ರಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕೇಂದ್ರೀಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕ್ರೀಡಾ ಪಂಜು ಹಿಡಿದು ಮುಂಚೂಣಿಯಲ್ಲಿ ನಡೆವ ಗೌರವವನ್ನು ನೀಡಿತ್ತು.

**ಕುಮಾರಿ ಸ್ವಾತಿ ಎಂ.ಆರ್.:** ೨೦೧೦ರ ಸಾಲಿನಲ್ಲಿ ಚೆನ್ನೈನಲ್ಲಿ ನಡೆದ ೧೩ ವರ್ಷದೊಳಗಿನವರ ಫಿಡೆ ರೇಟಿಂಗ್ ಟೂರ್ನಮೆಂಟ್‌ನಲ್ಲಿ ಐದನೇ ಸ್ಥಾನ ಪಡೆದಿದ್ದಳು. ೨೦೦೯ರ ಸಾಲಿನಲ್ಲಿ ನಡೆದ ಅಂತರಾಷ್ಟ್ರೀಯ ಫಿಡೆ ರ್‍ಯಾಂಕಿಂಗ್ ಟೂರ್ನಮೆಂಟ್‌ನಲ್ಲಿ ಈಕೆ ೧೬೪೭ನೇ ರ್‍ಯಾಂಕ್ ಪಡೆದುಕೊಂಡಿದ್ದು, ಜಿಲ್ಲೆಯಲ್ಲಿ ಫಿಡೆ ರ್‍ಯಾಂಕಿಂಗ್ ಗಳಿಸಿದ ಮೊದಲ ಹೆಣ್ಣುಮಗಳಾಗಿದ್ದಳು. ೨೦೧೦ರ ಸಾಲಿನಲ್ಲಿ ರಾಜ್ಯಮಟ್ಟದ ದಸರಾ ಕ್ರೀಡಾ ಮಹೋತ್ಸವದಲ್ಲಿ ನಡೆದ ಓಪನ್ ಚೆಸ್‌ನಲ್ಲಿ ಎಲ್ಲ ವಯೋಮಾನದವರೊಂದಿಗೂ ಆಡಿ ಮಹಿಳಾ ವಿಭಾಗದ ಮೂರನೇ ಬಹುಮಾನ ಪಡೆದುಕೊಂಡಿದ್ದಳು. ಅದೇ ವರ್ಷ ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಓಪನ್‌ಚೆಸ್ ಟೂರ್ನಮೆಂಟ್‌ನಲ್ಲಿ ೧೪ಕ್ಕಿಂತ ಕೆಳಗಿನ ವಯೋಮಾನದವರ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿದ್ದಳು. ಅದೇ ಸಾಲಿನಲ್ಲಿ ಬೆಂಗಳೂರಿನಲ್ಲಿ ನಡೆದ 'ವಾರಿಯರ್ ಕಪ್' ಟೂರ್ನಮೆಂಟ್‌ನಲ್ಲಿ (೧೪ ವರ್ಷಕ್ಕಿಂತ ಕೆಳಗಿನವರಿಗಾಗಿ ನಡೆವ ಸ್ಪರ್ಧೆ) ಪ್ರಥಮ ಸ್ಥಾನ ಪಡೆದಿದ್ದಳು. ೨೦೧೦ನೇ ಸಾಲಿನಲ್ಲಿ ಸರ್ಕಾರದ ಕ್ರೀಡಾ ಇಲಾಖೆಯು ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ ಮೂಲಕ ಪ್ರಾಯೋಜಿಸಿ ಗೋವಾದಲ್ಲಿ ನಡೆಸಿದ ೫೬ನೇ ಚೆಸ್ ಕ್ರೀಡಾಕೂಟದಲ್ಲಿ ೧೭ ವರ್ಷದೊಳಗಿನ ಮಹಿಳೆಯರ ರಾಷ್ಟ್ರಮಟ್ಟದ ಟೂರ್ನಮೆಂಟ್‌ನಲ್ಲಿ 'ಬೋರ್ಡ್'ಪ್ರೈಜ್'ನ್ನೂ ಟೂರ್ನಿಯ ಬೆಳ್ಳಿ ಪದಕವನ್ನೂ ಪಡೆದುಕೊಂಡಿದ್ದಳು.

**ಟಿ.ಸಿ. ಸುಹಾಸ್ ಉಪಾಧ್ಯಾಯ:** ೨೦೦೮ರಲ್ಲಿ ಕಾನ್‌ಪುರದಲ್ಲಿ ನಡೆದ ರಾಷ್ಟ್ರಮಟ್ಟದ ಅಂತರ ವಿಶ್ವವಿದ್ಯಾಲಯ ಚೆಸ್ ಟೂರ್ನಿಯಲ್ಲಿ 'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ' (ವಿಟಿಯು)ವನ್ನು ಪ್ರತಿನಿಧಿಸಿದ್ದು, ಆ ತಂಡವು ರಾಷ್ಟ್ರಮಟ್ಟದಲ್ಲಿ ೫ನೇ ಸ್ಥಾನ ಪಡೆದಿರುತ್ತದೆ.

**ವೆಂಕಟೇಶ್ ಉಪಾಧ್ಯಾಯ:** ಇವರು ಅಂಚೆ ಇಲಾಖೆಯ ಕರ್ನಾಟಕ ಸರ್ಕಲ್‌ನ ಚದುರಂಗ ಛಾಂಪಿಯನ್‌ಶಿಪ್ ಅನ್ನು ನಿರಂತರವಾಗಿ ಎರಡು ಬಾರಿ (೨೦೦೯ ಮತ್ತು ೨೦೧೦) ಗೆದ್ದುಕೊಂಡಿದ್ದು, ಅಂಚೆ ಇಲಾಖೆಯ ರಾಷ್ಟ್ರಮಟ್ಟದ ಚೆಸ್ ಟೂರ್ನಿಯಲ್ಲಿ ಕರ್ನಾಟಕ ಸರ್ಕಲ್ ಅನ್ನು ಎಂಟು ಬಾರಿ ಪ್ರತಿನಿಧಿಸಿದ್ದರು.

**ಚಂದ್ರಶೇಖರ ಉಪಾಧ್ಯಾಯ:** ಇವರು ಕೇವಲ ಆಟಗಾರರಷ್ಟೇ ಅಲ್ಲದೆ, ಚೆಸ್ ಆರ್ಬಿಟರ್ (ತೀರ್ಪುಗಾರ) ಆಗಿದ್ದು ಸುಮಾರು ೧೫೦ ಬಾಲಕರಿಗೆ ತರಬೇತಿ ನೀಡಿದ್ದಾರೆ. ತುರುವೇಕೆರೆಯ ಡಾ॥ ಎ. ನಾಗರಾಜ್ 'ತುರುವೇಕೆರೆ ಸ್ಪೋರ್ಟ್ಸ್ ಕ್ಲಬ್' ನ್ನು ಹುಟ್ಟುಹಾಕಿ ತುರುವೇಕೆರೆಯಲ್ಲಿ ರಾಜ್ಯಮಟ್ಟದ ಚೆಸ್‌ಟೂರ್ನಿಯನ್ನು ವ್ಯವಸ್ಥೆಗೊಳಿಸಿದ್ದಾರೆ.

**ಫಣೀಂದ್ರ ಟಿ.ಎಸ್.:** ೨೦೦೧ರ ಸಾಲಿನಲ್ಲಿ ಮುಂಬೈನಲ್ಲಿ ನಡೆದ ನ್ಯಾಷನಲ್ ರ್‍ಯಾಪಿಡ್ ಚೆಸ್ ಛಾಂಪಿಯನ್‌ಶಿಪ್‌ನಲ್ಲಿ ೨೬ನೇ ಸ್ಥಾನ ಪಡೆದು ಅತ್ಯುತ್ತಮ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ೨೦೦೩ರಲ್ಲಿ ೧೫ ವರ್ಷದೊಳಗಿನವರ ರಾಜ್ಯಮಟ್ಟದ ಓಪನ್ ಟೂರ್ನಿಯಲ್ಲಿ ಮೊದಲ ಹಾಗೂ ೧೪ ವರ್ಷದೊಳಗಿನವರ ರಾಜ್ಯಮಟ್ಟದ ಛಾಂಪಿಯನ್‌ಶಿಪ್‌ನಲ್ಲಿ ಎರಡನೇ ಮತ್ತು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಂತರ ಶಾಲಾ ಚೆಸ್ ಪಂದ್ಯಾವಳಿಯಲ್ಲಿ (ಎಸ್.ಜಿ.ಎಫ್.ಐ. ಪ್ರಾಯೋಜಿತ) ಪ್ರಥಮ ಸ್ಥಾನ ಪಡೆದಿದ್ದರು. ಈ ಎಲ್ಲ ಸಾಧನೆಯನ್ನು ಪರಿಗಣಿಸಿ ೨೦೦೪ರ ನವೆಂಬರ್‌ನಲ್ಲಿ ಬೆಂಗಳೂ-ರಿನ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರವು ಚಿನ್ನದ ಪದಕ ಹಾಗೂ ಐದು ಸಾವಿರ ರೂಪಾಯಿ ನಗದು ನೀಡಿ ಸನ್ಮಾನಿಸಿದೆ.

**ಅಥ್ಲೆಟಿಕ್ಸ್:** ತುಮಕೂರು ಜಿಲ್ಲೆಯ ಹಲವಾರು ಪುರುಷ ಹಾಗೂ ಮಹಿಳಾ ಅಥ್ಲಿಟ್‌ಗಳು ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಅಥ್ಲೆಟಿಕ್ ಕೂಟಗಳಲ್ಲಿ ಭಾಗವಹಿಸಿದ್ದು ಪ್ರಮುಖರಾದವರ ವಿವರ ಈ ಕೆಳಗಿನಂತಿದೆ.

ತುಮಕೂರು ಜಿ.ಎಸ್. ಪರಮೇಶ್ವರ್ ಎನ್ನುವವರು ಜಿಮ್ನಾಸ್ಟಿಕ್ಸ್‌ನಲ್ಲಿ ರಾಜ್ಯ ಛಾಂಪಿಯನ್ ಆಗಿದ್ದು, ರಾಜ್ಯ ಜಿಮ್ನಾಸ್ಟಿಕ್ಸ್ ತಂಡದ ಕ್ಯಾಪ್ಟನ್ ಸಹಾ ಆಗಿದ್ದರು ಮತ್ತು ರಾಷ್ಟಮಟ್ಟದ ವೇಯ್ಟ್‌ಲಿಫ್ಟಿಂಗ್‌ನಲ್ಲಿ ಮೂರನೇ ಸ್ಥಾನ ಗಳಿಸಿದ್ದರು. ಲೋಕೇಶ್ ಮತ್ತು ಜೀವನ್‌ಪ್ರಿಯ ಇವರುಗಳು ಜಿಮ್ನಾಸ್ಟಿಕ್ಸ್‌ನಲ್ಲಿ ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಅಖಿಲಭಾರತ ಅಂತರ್ ಕೃಷಿ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ ೧೦೦ ಮೀಟರ್ ಓಟದ ಸ್ಪರ್ಧೆಯಲ್ಲಿ ಬೆಂಗಳೂರು ಕೃಷಿ ವಿ.ವಿ.ಯನ್ನು ಪ್ರತಿನಿಧಿಸಿದ್ದ ಡಾ॥ ಪರಮೇಶ್ವರ್ ಕೇವಲ ೧೦.೯ ಸೆಕೆಂಡ್‌ಗಳಲ್ಲಿ ಆ ದೂರವನ್ನು ಕ್ರಮಿಸಿ ದಾಖಲೆ ಸ್ಥಾಪಿಸಿದ್ದರು. ವಿ.ಎಲ್. ಭಾರತಿಯವರು ೮೦೦ ಮೀಟರ್ ಓಟದಲ್ಲಿ ರಾಜ್ಯಮಟ್ಟ, ಹಾಗೂ ಅಂತರಾಷ್ಟ್ರೀಯ ಮಟ್ಟದ ಓಟದ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸಿ ಇಟಲಿ ಹಾಗೂ ಜಪಾನ್‌ಗಳಲ್ಲಿ ನಡೆದ ಅಥ್ಲೆಟಿಕ್ಸ್ ಕೂಟಗಳಲ್ಲಿ ಪಾಲ್ಗೊಂಡಿದ್ದರು. ಇವರಿಗೆ ಕರ್ನಾಟಕ ಸರ್ಕಾರ ದಸರಾ ಉತ್ಸವದಲ್ಲಿ 'ಕ್ರೀಡಾರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ. ಟಿ.ಕೆ. ಈಶ್ವರಪ್ಪ: ೧೦೦ ಮೀ. ಓಟದಲ್ಲಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಗೆದ್ದವರು. ಟಿ.ವಿ. ವೆಂಕಟರಾಜ್; ಇವರು ದಸರಾ ಕ್ರೀಡಾಕೂಟದ ಹೈಜಂಪ್ ಸ್ಪರ್ಧೆಯಲ್ಲಿ ದಾಖಲೆ ಸ್ಥಾಪಿಸಿದ್ದರು. ಜಿಲ್ಲೆಯ ಇನ್ನುಳಿದ ಕೆಲವು ಉಲ್ಲೇಖಾರ್ಹ ಅಥ್ಲಿಟ್‌ಗಳ ವಿವರ ಹೀಗಿದೆ. ಶ್ರೀಕಾಂತ್ (ತುಮಕೂರು) – ೧೦೦ ಮೀ. ಓಟ, ಟಿ.ಪಿ. ಕಿರಣ್ (ತುಮಕೂರು) – ೨೦೦ ಮೀ. ಸ್ಟೀಪಲ್ ಚೆಸ್, ಜಯಶೀಲ (ತಿಪಟೂರು ತಾಲೂಕು) – ಜಾವೆಲಿನ್ ಎಸೆತ, ಅನ್ನಪೂರ್ಣ (ತಿಪಟೂರು ತಾಲೂಕು) – ೫೦೦೦ ಮೀಟರ್ ಓಟ, ರಶ್ಮಿ (ತುಮಕೂರು) – ೫೦೦೦ ಮೀಟರ್ ಓಟ, ವಿಶ್ವಾಸ್ ಟಿ.ಜಿ. (ತುಮಕೂರು) ಷಾಟ್‌ಪುಟ್, ಮಲ್ಲಯ್ಯ (ತುಮಕೂರು – ೧೦೦೦೦ ಮೀ. ಓಟ, ದಿವ್ಯಶ್ರೀ (ತುಮಕೂರು) ೫೦೦೦ ಮೀಟರ್ ಓಟ, ಸುಮ (ತಿಪಟೂರು ತಾಲೂಕು) – ೫೦೦೦ ಮೀ. ನಡಿಗೆ ಸ್ಪರ್ಧೆ, ಸುಮಂತ್ ಎಂ.ಕೆ. (ತುಮಕೂರು) ೧೧೦ ಮೀ ಹರ್ಡಲ್ಸ್, ಮಂಜುಳಾ (ತುಮಕೂರು) ೧೦೦ ಮೀಟರ್ ಹರ್ಡಲ್ಸ್, ಫಕೃದ್ದೀನ್ (ಚಿ.ನಾ. ಹಳ್ಳಿ) ಹೈಜಂಪ್, ಧನಂಜಯ (ತಿಪಟೂರು) ೧೦೦೦೦ ಮೀ. ಮತ್ತು ೫೦೦೦ ಮೀ. ಓಟ, ಹಂಸರಾಜಶೇಖರ್ (ತುಮಕೂರು) ಷಾಟ್‌ಪುಟ್, ರಂಜಿತಾ (ತುಮಕೂರು) ಷಾಟ್‌ಪುಟ್, ರೋಹಿತ್, ಕ್ಯಾತ್ಸಂದ್ರ (ತುಮಕೂರು) ೮೦೦ ಮೀಟರ್ಸ್. ಇವರಲ್ಲದೆ ಚಂದನ, ಚಂದ್ರಿಕಾ, ಸುಮಂತ. ಎಸ್.ಜೆ, ತರುಣಶೇಖರ್, ವಿನಾಯಕ ರಾಜಶೇಖರ್, ಶ್ರೀನಿವಾಸ ರೆಡ್ಡಿ, ನಯಾಜ್, ರಾಘವೇಂದ್ರ, ಸ್ನೇಹ, ಶ್ರೀನಿಧಿ ಇವರು ರಾಷ್ಟ್ರಮಟ್ಟದ ಅಥ್ಲೆಟಿಕ್ ಕ್ರೀಡಾ ಪಟುಗಳಾಗಿದ್ದರು.

**ಭಾರ ಎತ್ತುವಿಕೆ (ವೇಯ್ಟ್ ಲಿಫ್ಟಿಂಗ್):** ಈ ಕ್ರೀಡೆಯಲ್ಲಿ ಹೆಸರುಗಳಿಸಿದವರೆಂದರೆ ೧) ಟಿ.ವಿ. ಶ್ರೀನಿವಾಸ್ ೨) ಚಿಕ್ಕಸಿದ್ಧಯ್ಯ, ೩) ಟಿ.ವಿ. ಲಕ್ಕಪ್ಪ, ೪) ಟಿ.ವಿ. ಮಂಜುನಾಥ್, ೫) ಪಾರ್ಶ್ವನಾಥ್.

**ಹಾಕಿ:** ಜಿಲ್ಲೆಯ ಉಲ್ಲೇಖಾರ್ಹ ಹಾಕಿ ಪ್ರತಿಭೆ ಎಂದರೆ ಶ್ರೀಮತಿ ಎಂ.ಆರ್. ಅಂಬಿಕಾ ಇವರು ಹಲವು ವರ್ಷಗಳ ಹಿಂದೆ ಇವರು ರಾಜ್ಯ ಮಹಿಳಾ ಹಾಕಿ ತಂಡದ ಸದಸ್ಯೆಯಾಗಿದ್ದರು. ಉದಯ್, ರುದ್ರೇಶ್, ನಚಿಕೇತ, ರಾಕೇಶ್, ಅಫ್ತಾಬ್ ಇವರು ರಾಷ್ಟ್ರಮಟ್ಟದ ಹಾಕಿ ಕ್ರೀಡಾ ಪಟುಗಳು.

**ಫುಟ್‌ಬಾಲ್:** ಫುಟ್‌ಬಾಲ್ ತುಮಕೂರಿನ ಜನರ ಅಚ್ಚುಮೆಚ್ಚಿನ ಕ್ರೀಡೆಯಾಗಿತ್ತು. ೧೯೪೦ ರಿಂದ ೧೯೮೦ರವರೆಗೂ ಈ ಕ್ರೀಡೆ ಇಲ್ಲಿ ವೈಭವದಿಂದ ಮೆರೆದಿದ್ದುಂಟು. ಜಿಲ್ಲೆಯ ಪ್ರಮುಖ ಫುಟ್‌ಬಾಲ್ ಪ್ರತಿಭೆಗಳ ವಿವರ ಹೀಗಿದೆ.

**ಬಿ. ಜಯರಾಂ:** ೧೯೪೦–೫೦ರ ಅವಧಿಯಲ್ಲಿ ಬಿ. ಜಯರಾಂ ಜಿಲ್ಲೆಯಲ್ಲಿ ಫುಟ್‌ಬಾಲ್ ದಂತಕತೆಯಾಗಿದ್ದವರು. ಎ.ಡಿ. ನಾಗೇಂದ್ರ, ಎ.ಡಿ. ಶ್ರೀನಿವಾಸ್, ಎ.ಡಿ. ದೇವರಾಜ್: ಈ ಮೂವರು ಸಹೋದರರು ಕರ್ನಾಟಕ ರಾಜ್ಯ ಫುಟ್‌ಬಾಲ್ ತಂಡದ ಸದಸ್ಯರಾಗಿದ್ದು ಹೊರರಾಜ್ಯಗಳಲ್ಲೂ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಎ.ಡಿ.ನಾಗೇಂದ್ರ ಅವರು ಭಾರತದಿಂದ ಫುಟ್‌ಬಾಲ್ ಕೋಚ್ ಆಗಿ ಜರ್ಮನಿಗೆ ತೆರಳಿ ಅಲ್ಲಿನ ತಂಡಕ್ಕೆ ತರಬೇತಿ ನೀಡಿದ್ದಾರೆ. ಅಜಿತ್‌ಕುಮಾರ್– ರಾಜ್ಯತಂಡದಲ್ಲಿ ಗೋಲ್‌ಕೀಪರ್ ಆಗಿದ್ದವರು. ಮುಸ್ತಾಫಾ– ಫುಟ್‌ಬಾಲ್ ತಂಡದಲ್ಲಿ ಫಾರ್ವರ್ಡ್ ಆಟಗಾರರಾಗಿ ಆಡುತ್ತಿದ್ದವರು. ಟಿ.ವೈ.ಮುನಿಗಂಗಯ್ಯ ಮತು ಟಿ.ವಿ.ನಾಗರಾಜುಲು, ಟಿ.ವಿ.ಗೋಪಿನಾತ್, ರಂಗಸ್ವಾಮಿ, ಅಸಾದ್, ಕೃಷ್ಣಪ್ಪ, ಕುಮಾರ್ ಮಂಜುನಾಥ್, ಲಕ್ಷ್ಮಿನರಸಿಂಹಯ್ಯ, ಜಬ್ಬಾರ್ ಖಾನ್ ೧೯೭೦ ರ ದಶಕದಲ್ಲಿ ರಾಜ್ಯ ತಂಡದಲ್ಲಿ ಸ್ಥಾನ ಪಡೆದಿದ್ದ ತುಮಕೂರಿಗರು. ಜಿ. ಎಸ್. ರೇಣುಕಾರಾಧ್ಯ ಶಾಂತಪ್ಪ, ವೀರಣ್ಣ. ಸೈಯದ್, ಬಿ.ಆರ್.ವಿಶ್ವನಾಥ್, ಸೋಮಶೇಖರ್, ನೀಲಕಂತಪ್ಪ, ರಾಮಣ್ಣ, ಸಣ್ಣ ರಂಗಯ್ಯ, ಕೃಷ್ಣಪ್ಪ, ಪೊನ್ನಸ್ವಾಮಿ, ಚಂದ್ರಶೇಖರ, ರಂಗಸ್ವಾಮಿ, ರಾಜಶೇಖರ, ಕೆ.ಕೃಷ್ಣಪ್ಪ, ಟಿ.ಎಲ್.ಗಂಗಣ್ಣ, ಶಿವಸ್ವಾಮಿ, ರಾಜಣ್ಣ ಡಬ್ಲ್ಯೂ, ದೇವಪ್ರಸಾದ್ ಮತ್ತು ಸಿಂಗ್ ತ್ರಯಯರೆಂದು ಪ್ರಸಿದ್ಧರಾದ ರಾಂಸಿಂಗ್, ಲಕ್ಷ್ಮಣ ಸಿಂಗ್, ಶಾಂಸಿಂಗ್, ಮುಂತಾದವರು ಹಳೆಯ ಹಾಗೂ ನುರಿತ ಆಟಗಾರರಾಗಿದ್ದರು. ಟಿ.ಎಲ್.ಗಂಗಣ್ಣ ಉತ್ತಮ ಆಟಗಾರನಾಗಿದ್ದಲ್ಲದೆ ರಾಜ್ಯ ಫುಟ್‌ಬಾಲ್‌ಗೆ ಉತ್ತಮ ಕೋಚ್ ಆಗಿದ್ದರು.

ಆ ದಿನಗಳಲ್ಲಿ ತುಮಕೂರಿನ ವರ್ತಕರು ಬಹು ಪ್ರೀತಿಯಿಂದ ಫುಟ್‌ಬಾಲ್ ಆಟಕ್ಕೆ ಪ್ರೋತ್ಸಾಹ ಕೊಟ್ಟಿದ್ದರು ಮತ್ತು ತುಮಕೂರಿನಲ್ಲಿ ೧೯ ಫುಟ್‌ಬಾಲ್ ತಂಡಗಳಿದ್ದವು. ಕೆಲವು ಪ್ರಸಿದ್ದ ತಂಡಗಳ ಹೆಸರುಗಳು ಹೀಗಿವೆ. ಮರ್ಚೆಂಟ್ಸ್ ಕ್ಲಬ್, ಹಿಂದೂ ಯೂನಿಯನ್, ಸ್ಪೋರ್ಟಿಂಗ್ ಎಸ್.ಸಿ. ಮಾರ್ಸ್ ಕ್ಲಬ್, ವೆಸ್ಲಿ ತಂಡ, ಗುಲ್ಜಾರಿ ತಂಡ, ವಿಜಯ ಕ್ಲಬ್, ವಿಜಯ ಯೂನಿಯನ್, ಬ್ಲೂಸ್ ತಂಡ, ಯಂಗ್ ಮೆನ್ಸ್ ತಂಡ, ಗ್ರೈನ್ ಮರ್ಚಂಟ್ಸ್ ತಂಡ, ತಿಪಟೂರಿನ ಫ್ರೆಂಡ್ಸ್ ಯೂನಿಯನ್, ಅಮ್ಮಸಂದ್ರದ ಸಿಮೆಂಟ್ ಫ್ಯಾಕ್ಟರಿ ತಂಡ, ಮಧುಗಿರಿ ತಂಡ, ಗುಬ್ಬಿತಂಡ, ಕ್ಯಾತ್ಸಂದ್ರದ ಮೂನ್‌ಲೈಟ್ ಫ್ರೆಂಡ್ಸ್ ಯೂನಿಯನ್, ಕ್ಯಾತ್ಸಂದ್ರ ಇಲವೆನ್ ತಂಡ, ತುಮಕೂರು ಜಿಲ್ಲಾ ಸಮಿತಿ ಫುಟ್‌ಬಾಲ್ ತಂಡ ಇತ್ಯಾದಿ. ಬೆಂಗಳೂರಲ್ಲಿ ಪ್ರತಿವರ್ಷ ಪುಟ್ಟಯ್ಯ ಸ್ಮಾರಕ ರಾಜ್ಯಮಟ್ಟದ ಫುಟ್‌ಬಾಲ್ ಟೂರ್ನಮೆಂಟ್' ನಡೆಯುತ್ತದೆ. ಇದು ತುಮಕೂರಿನವರಾದ ಹಲವಾರು ವರ್ಷ ರಾಜ್ಯತಂಡದ ಗೋಲ್‌ಕೀಪ ಆಗಿ ಅದ್ಭುತ ಪ್ರದರ್ಶನ ನೀಡಿದ್ದ ಖ್ಯಾತ ಫುಟ್‌ಬಾಲ್ ಆಟಗಾರ, ಗೋಲ್‌ಕೀಪರ್ ಪುಟ್ಟಯ್ಯನವರ ಸ್ಮರಣಾರ್ಥ ನಡೆಸುವಂಥದ್ದು.

ಡಾ॥ ಟಿ.ಎಸ್. ಮಲ್ಲಿಕಾರ್ಜುನಯ್ಯ ಹಾಗೂ ಬಿ.ವಿ. ಶಂಕರಪ್ಪ ಇವರುಗಳು ತುಮಕೂರಿನಲ್ಲಿ ಫುಟ್‌ಬಾಲ್ ಅಸೋಸಿಯೇಷನ್‌ನ್ನು ಸ್ಥಾಪಿಸಿದ್ದರು, ಬಿ.ಪಿ. ಚಂದ್ರಪ್ಪ ಇವರು ಜಿಲ್ಲೆಯಿಂದ ಹೊರಹೊಮ್ಮಿದ ಮೊಟ್ಟಮೊದಲ ಫುಟ್‌ಬಾಲ್ ರೆಫರಿ. ಬಿಂದು, ಚಂದನ, ಪೂಜಾ, ಕೋಮಲ, ದಿವ್ಯಗೌರಿ, ಆಸ್ರ, ಗೌತಮಿ, ಚೈತ್ರ, ಸೃಷ್ಟಿ, ಇವರು ರಾಷ್ಟ್ರಮಟ್ಟದ ಫುಟ್‌ಬಾಲ್ ಕ್ರೀಡಾ ಪಟುಗಳಾಗಿದ್ದರು.

**ವಾಲಿಬಾಲ್:** ಜಿಲ್ಲೆಯ ಕೆಲವು ಕ್ರೀಡಾ ಪಟುಗಳು ವಾಲಿಬಾಲ್ ಕ್ರೀಡೆಯಲ್ಲಿ ರಾಜ್ಯ, ರಾಷ್ಟ್ರ ಹಾಗೂ ಏಷ್ಯಾ ಮಟ್ಟದಲ್ಲಿ ಸಾಧನೆ ಮಾಡಿ ಜಿಲ್ಲೆಗೆ ಖ್ಯಾತಿ ತಂದಿದ್ದಾರೆ. ಅವರ ಹೆಸರುಗಳು ಹೀಗಿವೆ – ಟಿ.ಡಿ.ರವಿಕುಮಾರ್ – ಇವರು ೨೦೧೦ರಲ್ಲಿ ಜಪಾನ್‌ನಲ್ಲಿ ನಡೆದ ಜ್ಯೂನಿಯರ್ ಏಷ್ಯನ್ ವಾಲಿಬಾಲ್ ಛಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಆಡಿದ ಭಾರತ ತಂಡದ ಸದಸ್ಯರಾಗಿದ್ದರು. ಇವರು ಏಕಲವ್ಯ ಪ್ರಶಸ್ತಿ ಪುರಸ್ಕೃತರು.

ಕುಮಾರಿ ಸುಪ್ರಿಯ – ಇವರು ರಾಜ್ಯದ ಮಹಿಳಾ ವಾಲಿಬಾಲ್ ತಂಡದ ಸದಸ್ಯರಾಗಿದ್ದ ಜಿಲ್ಲೆಯ ಕ್ರೀಡಾಪಟು. ರಷ್ಯಾಕ್ಕೆ ಹೋಗಿ ಬಂದಿದ್ದ ಭಾರತ ಮಹಿಳಾ ವಾಲಿಬಾಲ್ ಟೀಂನಲ್ಲೂ ಇದ್ದರು. ಏಕಲವ್ಯ ಪ್ರಶಸ್ತಿ ಪಡೆದಿರುವ ಜಿಲ್ಲೆಯ ನಾಲ್ವರಲ್ಲಿ ಒಬ್ಬರು ಹಾಗೂ ಆ ಪ್ರಶಸ್ತಿಗೆ ಪಾತ್ರರಾದ ಜಿಲ್ಲೆಯ ಏಕೈಕ ಮಹಿಳಾ ಕ್ರೀಡಾಪಟು. ಗಂಗಾಧರ ಗೌಡ

– ರಾಜ್ಯವಾಲಿಬಾಲ್ ತಂಡದ ಸದಸ್ಯರಾಗಿದ್ದವರು. ಟಿ.ಬಿ. ರವೀಂದ್ರ – ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ಇವರು ನಾಲ್ಕುಬಾರಿ ರಾಜ್ಯವಾಲಿಬಾಲ್ ತಂಡದ ನಾಯಕರಾಗಿದ್ದರು.

ಶಂಕರನಾರಾಯಣ ಭಟ್, ವೆಂಕಟೇಶಮೂರ್ತಿ, ಬೆಳವಯ್ಯ, ಆರ್.ಎಸ್. ಸದಾನಂದ, ಜಿ. ಸೋಮಶೇಖರ್, ವೆಂಕಟರಾಂ, ಹನುಮಂತಯ್ಯ, ಸೀನೂ ಮಗರ್, ಮಧುಗಿರಿಯ ರವಿ, ರಾಮಚಂದ್ರ, ಮಹಾಲಿಂಗ, ಗೂಳೂರು ವೆಂಕಟೇಶ್, ರುದ್ರಯ್ಯ, ದೇವೇಗೌಡ, ಮಹಾಲಿಂಗಪ್ಪ, ಜಿ. ಜಗದೀಶ್, ಎಂ. ಚಂದ್ರಪ್ಪ, ನಿಜಲಿಂಗಪ್ಪ – ಇವರೆಲ್ಲ ರಾಜ್ಯಮಟ್ಟದಲ್ಲಿ ವಾಲಿಬಾಲ್ ಆಡಿ ಹೆಸರು ಮಾಡಿದವರು.

**ಕಬಡ್ಡಿ:** ಜಿಲ್ಲೆಯ ಸಾಕಷ್ಟು ಜನ ಈ ದೇಸೀ ಕ್ರೀಡೆಯಲ್ಲಿ ಆಸಕ್ತರಾಗಿದ್ದು ಜಿಲ್ಲೆಗೆ ಹೆಚ್ಚಿನ ಕೀರ್ತಿಯನ್ನು ತಂದಿರುತ್ತಾರೆ. ಕೆ.ಎಸ್.ಶಂಕರರವರು ಜಿಲ್ಲೆಯಲ್ಲಿ ಪ್ರಥಮವಾಗಿ ಕಬಡ್ಡಿ ಸಂಘವನ್ನು ಸ್ಥಾಪಿಸಿದ್ದರು. ಜಿಲ್ಲೆಯಲ್ಲಿರುವ ಕಬಡ್ಡಿ ತಂಡಗಳಲ್ಲಿ ಮದುತಂಡ, ಯಂಗ್ ಡೈಮಂಡ್ಸ್, ಯಂಗ್ ಛಾಲೇಂಜರ್ಸ್, ಅಜಂತ, ಸಂತೋಷ, ಸಂಜಯ್, ಸಿದ್ಧಿ ವಿನಾಯಕ ತಂಡ, ಸಿದ್ದಗಂಗಾ ಕ್ರೀಡಾತಂಡ, ಬಿ.ಎಂ.ಎಸ್.ಕ್ರೀಡಾ ಸಂಸ್ಥೆ, ಕಂಠೀರವ, ಕರ್ನಾಟಕ ನ್ಯಾಷನಲ್ಸ್, ವಿದ್ಯುತ್ ಮಂಡಲಿ ಮತ್ತು ಪಯೋನೀರ್ಸ್, ಇವುಗಳ ಪ್ರಮುಖವಾಗಿದ್ದವು. ಇವಲ್ಲದೆ ಕುಣಿಗಲ್ಲಿನ ಲಯನ್ಸ್ ಮತ್ತು ಕಿರ್ಬಾಲಿ ತಂಡಗಳು, ತಿಪಟೂರಿನ ಗುರುಕುಲ ಕ್ರೀಡಾ ಸಂಸ್ಥೆ, ಮಧುಗಿರಿಯ ರವಿ, ಹನುಮಾನ್ ಕ್ರೀಡಾ ಸಂಸ್ಥೆಗಳು, ಗುಬ್ಬಿ ಚೆನ್ನಬಸವೇಶ್ವರ ಸ್ವಾಮಿ ಕ್ರೀಡಾ ತಂಡಗಳು ಪ್ರಮುಖವಾಗಿದ್ದವು. ಜಿಲ್ಲೆಯಲ್ಲಿ ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಟೂರ್ನಿಗಳನ್ನು ಸಂಘಟಿಸಲಾಗುತ್ತಿತ್ತು. ಜಿಲ್ಲೆಯಲ್ಲಿಯ ಪ್ರಮುಖ ಕ್ರೀಡಾಪಟುಗಳೆಂದರೆ ಸೀಬಿ ನರಸಿಂಹಯ್ಯ, ಡಿ.ಆರ್.ಸಿದ್ದಯ್ಯ, ಜಿ.ಸೋಮಶೇಖರ್, ಎಂ.ಚಂದ್ರಪ್ಪ, ಶಿವಣ್ಣ, ಅಂದಾನಯ್ಯ, ಸದಾನಂದ, ದಯಾನಂದ, ಮಹಲಿಂಗಯ್ಯ, ವೆಂಕಟೇಶ, ಮಹದೇವ, ಶಂಕರನಾರಾಯಣ ಭಟ್ಟ, ಕೃಷ್ಣಮೂರ್ತಿ, ಎಂ.ಡಿ.ಮನೋರಾಜ್ ಇತ್ಯಾದಿ, ಎಚ್.ಎಂ. ಕೃಷ್ಣಮೂರ್ತಿ ಇವರು ಹದಿನಾಲ್ಕು ವರ್ಷಗಳಷ್ಟು ದೀರ್ಘಕಾಲ ರಾಜ್ಯ ಕಬಡ್ಡಿ ತಂಡದ ಸದಸ್ಯರಾಗಿದ್ದು ಅನ್ಯ ರಾಜ್ಯಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ. ತುಮಕೂರಿನ ಶಾಸಕರಾಗಿದ್ದ ಎಸ್. ಶಿವಣ್ಣನವರು ನಾಲ್ಕು ಬಾರಿ ರಾಜ್ಯ ಕಬಡ್ಡಿ ತಂಡದ ಸದಸ್ಯರಾಗಿದ್ದರು.

**ಖೋಖೋ:** ಫುಟ್‌ಬಾಲ್ ನಂತರ ತುಮಕೂರು ಜಿಲ್ಲೆ ಪ್ರತಿನಿಧಿಸಿದ ಇನ್ನೊಂದು ಕ್ರೀಡೆ ಎಂದರೆ ಖೋಖೋ. ವಿದ್ಯಾರ್ಥಿಗಳ ನಡುವೆ ಸಾಕಷ್ಟು ಪ್ರಿಯವಾಗಿರುವ, ಈ ಕ್ರೀಡೆಗೆ ಶಾಲಾಕಾಲೇಜುಗಳಲ್ಲಿ ಪ್ರೋತ್ಸಾಹ ದೊರೆಯುತ್ತಿದೆ. ಜಿಲ್ಲೆಯಲ್ಲಿಯ ಪ್ರಮುಖ ಖೋಖೋ ಕ್ರೀಡಾ ಪಟುಗಳ ವಿವರಗಳು ಇಂತಿವೆ.

**ಎಸ್.ಡಿ. ರಾಜಶೇಖರ್:** ಇವರು ಜಿಲ್ಲೆಯಲ್ಲಿ ಮೊದಲಿಗೆ ಆಟಗಾರರನ್ನು ತಯಾರು ಮಾಡಿದ ಖೋಖೋ ಗುರುಗಳು .ಇವರು ಎರಡು ಬಾರಿ ರಾಜ್ಯತಂಡದಲ್ಲಿ ಸ್ಥಾನ ಪಡೆದಿದ್ದರು. ತುಮಕೂರಿನ ಸುಪ್ರಸಿದ್ಧ ಯಂಗ್ ಛಾಲೆಂಜರ್ಸ್ ಖೋಖೋ ಟೀಮಿನ ಆಟಗಾರನಾಗಿ, ನಾಯಕನಾಗಿ, ಕೋಚ್ ಆಗಿ ೧೯೭೨ ರಿಂದ ೮೦ರವರೆಗೆ ಅದನ್ನು ಮುನ್ನಡೆಸಿದ್ದರು. ೧೯೮೦ರಲ್ಲಿ ಶ್ರೀ ವಿವೇಕಾನಂದ ಕ್ರೀಡಾ ಸಂಸ್ಥೆ ಎಂಬ ತಂಡವನ್ನು ಹುಟ್ಟುಹಾಕಿ ೧೮ ವರ್ಷಗಳ ಕಾಲ (೧೯೯೮ರವರೆಗೆ) ಅದರ ಕಾರ್ಯದರ್ಶಿ/ಕೋಚ್ ಆಗಿ ಸೇವೆಸಲ್ಲಿಸಿದ್ದರು. ಎ.ಎನ್. ಪ್ರಭಾಕರ್ – ಹೈದರಾಬಾದ್ (೧೯೭೬) ಹಾಗೂ ಬರೋಡಾ (೧೯೭೪) ದಲ್ಲಿ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು.

ವೆಂಕಟರಾಂ– ಇವರು ಮೂರು ಬಾರಿ ಮೈಸೂರು ವಿ.ವಿ. ತಂಡದಲ್ಲಿ ಹಾಗೂ ಮೂರು ಬಾರಿ ರಾಜ್ಯ ತಂಡದಲ್ಲಿದ್ದು ಆಡಿದವರು. ೧೯೭೧ ರಲ್ಲಿ ೧೦ನೇ ರಾಷ್ಟ್ರೀಯ ಖೋಖೋ ರನ್ನರ್ ಅಪ್ ಪ್ರಶಸ್ತಿ ಪಡೆದ ರಾಜ್ಯ ತಂಡದಲ್ಲಿದ್ದರು.

ಕೆ. ಉಮಾ–೧೯೭೮ರ ದಸರಾ ಉತ್ಸವದಲ್ಲಿ ರಾಜ್ಯ ಕ್ರೀಡಾಪ್ರಶಸ್ತಿ ಪಡೆದ ಇವರು ಎಂಟು ಬಾರಿ ರಾಜ್ಯ ಮಹಿಳಾ ಖೋಖೋ ತಂಡದ ಸದಸ್ಯೆಯಾಗಿದ್ದುದಲ್ಲದೆ ಎರಡು ಬಾರಿ ನಾಯಕಿಯೂ ಆಗಿದ್ದರು. ರಾಷ್ಟ್ರಮಟ್ಟದ ಮಹಿಳಾ ಖೋಖೋ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಈಕೆ ಖೋಖೋನಲ್ಲಿ ರಾಜ್ಯ ಪ್ರಶಸ್ತಿ ಪಡೆದ ಮೊದಲ ಮಹಿಳೆ. ಕೆ.ಆರ್. ಉಮಾ– ಎರಡು ಬಾರಿ ರಾಜ್ಯ ತಂಡಕ್ಕೆ ಆಯ್ಕೆಯಾಗಿದ್ದರು. ಒಂದು ಬಾರಿ ರಾಜ್ಯ ತಂಡದ ಸದಸ್ಯೆಯಾಗಿ ಬರೋಡಾದಲ್ಲಿ ನಡೆದ ಅಂತರ ರಾಜ್ಯ ಖೋಖೋ ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತಮವಾಗಿ ಆಡಿ ರಾಜ್ಯ ಪ್ರಶಸ್ತಿ ಪಡೆದಿದ್ದರು. ಸುಮನ್ ಸ್ವಾಮಿ– ಈಕೆ ಆರು ಬಾರಿ ರಾಜ್ಯ ಮಹಿಳಾ ಖೋಖೋ ತಂಡದಲ್ಲಿ ಸ್ಥಾನ ಪಡೆದಿದ್ದ ಜಿಲ್ಲೆಯ ಆಟಗಾರ್ತಿ.ಎಸ್. ಚೇತನಾ – ಎಂಟು ಬಾರಿ ರಾಜ್ಯತಂಡದಲ್ಲಿ ಸ್ಥಾನ ಪಡೆದಿದ್ದ ಇವರು ಒಂದು ಬಾರಿ ತಂಡದ ನಾಯಕಿಯೂ ಆಗಿದ್ದರು. ರಾಷ್ಟ್ರೀಯ ಜ್ಯೂನಿಯರ್ ವಿಭಾಗದ ಶ್ರೇಷ್ಠ ಆಟಗಾರ್ತಿಗೆ ಕೊಡಲಾಗುವ 'ಜಾನಕಿ ಪ್ರಶಸ್ತಿ'

ಶ್ರೇಷ್ಠ ಖೋ ಖೋ ಆಟಗಾರ್ತಿಗೆ ನೀಡಲಾಗುವ 'ಒನಕೆ ಓಬವ್ವ' ಪ್ರಶಸ್ತಿ, ಎಸ್. ಚೇತನಾ ಅವರಿಗೆ ದೊರಕಿದೆ.

ಎಸ್. ಸಿದ್ಧಲಿಂಗಸ್ವಾಮಿ– ಇವರು ೧೯೮೦–೯೦ ರ ಅವಧಿಯಲ್ಲಿ ರಾಜ್ಯ ಖೋಖೋ ತಂಡದ ಅತ್ಯುತ್ತಮ ಆಟಗಾರರಲ್ಲೊಬ್ಬರಾಗಿದ್ದರು. ಐದು ವರ್ಷ ರಾಜ್ಯತಂಡದ ನಾಯಕರಾಗಿ ಅದನ್ನು ಅದ್ಭುತವಾಗಿ ಮುನ್ನಡೆಸಿದ್ದರು. ಕ್ರೀಡಾ ಕ್ಷೇತ್ರದಲ್ಲಿನ ಸಾಧನೆಗಾಗಿ 'ಏಕಲವ್ಯ ಪ್ರಶಸ್ತಿ' ಯನ್ನು ಪಡೆದವರು. ಇವರು ಭಾರತ ಖೋಖೋ ತಂಡದ ಸದಸ್ಯರಾಗಿ ಬಾಂಗ್ಲಾದೇಶ, ನೇಪಾಳ ಹಾಗೂ ಪಾಕಿಸ್ಥಾನಗಳಲ್ಲಿ ಆಡಿದ್ದಾರೆ. ತುಮಕೂರಿನವರಾದ ಎಚ್.ಎಲ್. ಧ್ರುವಕುಮಾರ್ ಖೋಖೋ ಆಟಗಾರು. ರಾಷ್ಟ್ರೀಯ ಖೋಖೋ ಫೆಡರೇಷನ್‌ನಿಂದ 'ವೀರ ಅಭಿಮನ್ಯು' ಪ್ರಶಸ್ತಿ ಪಡೆದವರು. ಸಿ.ಪಿ. ಪ್ರಕಾಶ್ –ಹತ್ತನೇ ರಾಷ್ಟ್ರೀಯ ಖೋಖೋ ಛಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ರಾಜ್ಯ ತಂಡದ ಸದಸ್ಯರಾಗಿ ರನ್ನರ್–ಅಪ್ ಪ್ರಶಸ್ತಿ ಪಡೆದರು. ಕಲ್ಯಾಣಿ – ಆರು ಬಾರಿ ರಾಜ್ಯ ಮಹಿಳಾ ಖೋ ಖೋ ತಂಡದಲ್ಲಿದ್ದರು. ಪದ್ಮಿನಿ– ಐದು ಬಾರಿ ರಾಜ್ಯ ಮಹಿಳಾ ತಂಡಕ್ಕೆ ಆಡಿದ್ದರು. ಲೋಕೇಶ್ವರ್ – ತಿಪಟೂರು ತಾಲ್ಲೂಕಿನವರಾದ ಇವರು ರಾಜ್ಯತಂಡದ ಸದಸ್ಯರಾಗಿದ್ದರು ಮತ್ತು ತಿಪಟೂರಿನ ಕಲ್ಪತರು ಕ್ರೀಡಾ ಸಂಸ್ಥೆಯ ಆಟಗಾರರಾಗಿದ್ದರು. ಶೀಲಾದಾಸ್ –ಮೂರು ಬಾರಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು. ಎ.ಎನ್. ಗಾಯಿತ್ರಿ – ಎರಡು ಬಾರಿ ರಾಜ್ಯತಂಡದಲ್ಲಿ ಸ್ಥಾನ ಪಡೆದಿದ್ದರು. ಎಸ್. ನಿರ್ಮಲಾ –ಎರಡು ಬಾರಿ ರಾಜ್ಯ ಮಹಿಳಾ ಖೋಖೋ ತಂಡದಲ್ಲಿ ಆಡಿದ್ದರು. ಸುಂದರಿ – ಮೂರು ಬಾರಿ ರಾಜ್ಯ ಮಹಿಳಾ ಖೋ ಖೋ ತಂಡದ ಸದಸ್ಯೆಯಾಗಿ ಆಡಿದವರು. ಎನ್.ಆರ್. ಪುಷ್ಪಲತಾ –ನಾಲ್ಕು ಸಲ ರಾಜ್ಯ ತಂಡದಲ್ಲಿದ್ದು ಆಡಿದ್ದರು. ಧರ್ಮಪಾಲ್ –೧೫ನೇ ರಾಷ್ಟ್ರೀಯ ಖೋಖೋ ಪಂದ್ಯಾವಳಿ ಹೈದರಾಬಾದ್‌ನಲ್ಲಿ ನಡೆದಾಗ ರಾಜ್ಯ ತಂಡ ಅದರಲ್ಲಿ ರನ್ನರ್ – ಅಪ್ ಸ್ಥಾನ ಪಡೆಯಿತು (೧೯೭೬). ಆ ತಂಡದಲ್ಲಿ ಎ.ಎನ್. ಪ್ರಭಾಕರ್‌ರೊಂದಿಗೆ ಧರ್ಮಪಾಲ್ ಸಹ ಆಡಿದ್ದರು. ಕೆ. ಲತಾ– ಮೂರು ಬಾರಿ ರಾಜ್ಯ ಮಹಿಳಾ ಖೋ ಖೋ ತಂಡದಲ್ಲಿ ಆಡಿದ್ದರು.

ತುಮಕೂರು ಜಿಲ್ಲೆಯಲ್ಲಿ ಖೋಖೋಗಾಗಿ ಪರಿಶ್ರಮಿಸುತ್ತಿದ್ದ ತಂಡಗಳಲ್ಲಿ ಯಂಗ್ ಛಾಲೆಂಜರ್ಸ್, ವಿವೇಕಾನಂದ, ಡೈನಮೋಸ್. ಪಯೋನಿಕ್ಸ್, ನ್ಯಾಷನಲ್ಸ್ ಪ್ರಮುಖವಾದವು, ಇವಲ್ಲದೆ ತಿಪಟೂರಿನ ಕಲ್ಪತರು ಕ್ರೀಡಾ ಸಂಸ್ಥೆ, ಫ್ರೆಂಡ್ಸ್ ಯೂನಿಯನ್ ತಂಡಗಳು, ಗುಬ್ಬಿಯ ಚೆನ್ನಬಸವೇಶ್ವರಸ್ವಾಮಿ ಖೋಖೋ ತಂಡಗಳು ಜಿಲ್ಲೆಯಲ್ಲಿ ಇದ್ದವು. ಸಂಜಯರ್ ಯಾದವ್, ನಾಗೇಶ್.ಕೆ.ಆರ್, ರವಿಕುಮಾರ್.ಜಿ. ವಿನಯಕುಮಾರ್.ಕೆ., ಪ್ರಜ್ವಲ್ ಕೆ.ಹೆಚ್., ಅಭಿಲಾಷ್, ಕುಮಾರ್ ಕೆ.ಎ., ಸಂಪತ್ ಕುಮಾರ್, ಮನೋಹರ್, ವಿನಾಯಕ, ಪವನ್ ಪಿ.ವೈ., ಜಮುನಾ, ನಾಗರತ್ನ, ಇವರುಗಳು ಜಿಲ್ಲೆಯ ರಾಷ್ಟ್ರಮಟ್ಟದ ಖೋ–ಖೋ–ಕ್ರೀಡಾ ಪಟುಗಳಾಗಿದ್ದರು.

**ಬಾಲ್‌ಬ್ಯಾಡ್ಮಿಂಟನ್** – ಜಿ.ಎನ್.ಪ್ರಿಯಾಂಕ ಈ ಕ್ರೀಡೆಯಲ್ಲಿ ಭಾರತವನ್ನು ಪ್ರತಿನಿಧಿಸಿದ ಪ್ರತಿಭೆ. ಉತ್ತಮ ಬಾಲ್‌ಬ್ಯಾಡ್ಮಿಂಟನ್ ಆಟಗಾರರಾಗಿ ಏಕಲವ್ಯ ಪ್ರಶಸ್ತಿ ಪಡೆದ ಮಹದೇವಗೌಡ ತುಮಕೂರು ತಾಲೂಕಿನವರು. ಜಿಲ್ಲೆಯಲ್ಲಿ ೧೯೯೦ರಲ್ಲಿ ಜಿಮ್ನಾಸ್ಟಿಕ್ಸ್ ಅಸೋಸಿಯೇಷನ್ ಸ್ಥಾಪಿಸಿ ಅದರ ಅಧ್ಯಕ್ಷರಾದ ಜಿ. ಸೋಮಶೇಖರ್ (ಸೋಮಣ್ಣ) ಒಳ್ಳೆಯ ಕ್ರೀಡಾ ಪ್ರೋತ್ಸಾಹಕರು. ಮುಖ್ಯವಾಗಿ ಬಾಲ್‌ಬ್ಯಾಡ್ಮಿಂಟನ್ ಆಟಗಾರರಾಗಿದ್ದ ಇವರು ರಾಜ್ಯ ಜ್ಯೂನಿಯರ್ ತಂಡದಲ್ಲಿ ಆಡಿದವರು.

**ಟೆನಿಸ್:** ದಿ. ಪಿ.ಎನ್. ರುದ್ರಪ್ಪ ಅವರು ಲಾನ್ ಟೆನಿಸ್ ಆಟಗಾರರಾಗಿದ್ದು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾಗಿದ್ದರು. ತುಮಕೂರಿನ ಡಾ. ಚೆರಿಯನ್, ಹಾರ್ಡ್‌ಕೋರ್ಟ್ ಟೆನಿಸ್ ಆಟಗಾರರು ಮತ್ತು ಹಿರಿಯ ಆಟಗಾರರ ಸ್ಪರ್ಧೆಯಲ್ಲಿ ಛಾಂಪಿಯನ್ ಆಗಿದ್ದವರು (ವೆಟರ್ನ್ ಛಾಂಪಿಯನ್).ರಂಗಣ್ಣ, ಎನ್.ಆರ್.ಜಗದೀಶ್, ಕೃಪಾನಿಧಿ ಮುಂತಾದವರು ಪ್ರಮುಖ ಟೆನ್ನಿಸ್ ಆಟಗಾರರಾಗಿದ್ದರು.

**ಕುಸ್ತಿ:** ತುಮಕೂರು ಕುಸ್ತಿ ಕ್ರೀಡೆಗೆ ತವರು. ಇಲ್ಲಿನ ಗರಡಿಗಳಲ್ಲಿ ತಯಾರಾದ ಪೈಲ್ವಾನರು ಅನೇಕ ಕಡೆ ಪ್ರದರ್ಶನಗಳನ್ನು ನೀಡಿ ಪ್ರಶಸ್ತಿ ಗಳಿಸಿದ್ದಾರೆ. ಜಿಲ್ಲೆಯ ಹಿರಿಯ ಕುಸ್ತಿ ಪಟುಗಳಾದ ಕೆ.ಜಿ.ಯಡಿಯೂರಪ್ಪ ಜಿಲ್ಲಾಕುಸ್ತಿ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಕ್ರೀಡಾ ಪಂದ್ಯಗಳ ಪೋಷಕರೂ, ಯುವಕರಿಗೆ ಮಾರ್ಗದರ್ಶಕರೂ ಆಗಿದ್ದರು. ತುಮಕೂರಿನಲ್ಲಿ ಕೋಟೆ ಗರಡಿ, ಪೇಟೆ ಗರಡಿ ಮತ್ತು ಜಿಲ್ಲಾ ಕುಸ್ತಿ ಸಂಸ್ಥೆ ಗರಡಿಗಳಿದ್ದು, ಇವುಗಳಲ್ಲಿ ತಯಾರಾದವರು ಜಿಲ್ಲಾಮಟ್ಟ, ರಾಜ್ಯಮಟ್ಟಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ತುಮಕೂರಿನ ಮಂಡಿಪೇಟೆ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ದೊಡ್ಡ ಗರಡಿಯು ೧೮೭೫ರಲ್ಲಿ ಚಾಟಿಗೆ ಮರಿಯಪ್ಪನವರಿಂದ ಆರಂಭವಾಯಿತು. ನಂತರ ಪೈ॥ ಕಾಡಯ್ಯ, ನಂತರ ೧೯೪೫ರಲ್ಲಿ ನರಸಿಂಹಯ್ಯ ಇದರ ಉಸ್ತುವಾರಿ ವಹಿಸಿದ್ದರು. ಕಾಲಕ್ರಮೇಣ ಗರಡಿ ಶಿಥಿಲವಾಯಿತು. ತುಮಕೂರಿನ

ಪ್ರಸಿದ್ಧ ಮಲ್ಲರೆಂದರೆ ಕೋನಿರೇವಣ್ಣ, ಗರಡಿ ಚಿಕ್ಕಣ್ಣ, ಭರ್ಮಾಜಿ, ಒಡೆಯರಯ್ಯ, ಕಾಡಯ್ಯ ಮತ್ತು ಸಿದ್ದಯ್ಯ, ಖಾದರ್, ಸಂಜೀವಯ್ಯ, ದೇಶದ ಮಠದಯ್ಯ, ನಾಗರಾಜು, ಅಜ್ಜು, ಚಂದ್ರಮೋಹನ್, ಅಸ್ಲೋಸಾಬ್ ಮತ್ತು ಅಮೀರ್‌ಸಾಬ್, ಜಯಪ್ರಭು ಉರುಫ್ ಗುಂಡಣ್ಣ, ಪೈ॥ ಕೋನಿ ರೇವಣ್ಣವರ ಶಿಷ್ಯರಾದ ದೊಡ್ಡ ಚಿಕ್ಕೀರಣ್ಣ, ಪಾಪಣ್ಣ, ಶ್ರೀನಿವಾಸ ಶೆಟ್ಟಿ, ಸುಬ್ಬಣ್ಣ, ಪೀರ್‌ಸಾಬಿ, ಪುಟ್ಟಣ್ಣ ಪೈ॥ ಕಾಡಯ್ಯ ಮತ್ತು ಸಿದ್ದಯ್ಯನವರ ಶಿಷ್ಯರಾದ ದೊಡ್ಡಸಿದ್ದಯ್ಯ, ಶಿವಣ್ಣ, ಕೆಂಪಣ್ಣ, ಪೈ॥ ಪುಟ್ಟಣ್ಣನವರ ಶಿಷ್ಯರಾದ ನಂಜಯ್ಯ, ಲಕ್ಷ್ಮಾಚಾರಿ, ವೆಂಕಟಾಚಾರಿ, ರಾಮಣ್ಣ, ಕೃಷ್ಣಪ್ಪ, ಸಿದ್ಧರಂಗಣ್ಣ, ನಾರಾಯಣಸಿಂಗ್, ದೇವೀಸಿಂಗ್, ಜಹೀರ್, ಲಿಂಗಣ್ಣ, ಗಂಗಣ್ಣ, ಪುಟ್ಟಪ್ಪ, ಪುಟ್ಟನರಸಯ್ಯ, ಹೋಟೆಲ್ ಶಿವಣ್ಣ– ಮೊದಲಾದವರು. ಮದ್ದಿನ ಪಾಪಣ್ಣ ಅವರು ಈ ಕ್ಷೇತ್ರಕ್ಕೆ ಅಪರೂಪವಾದ ಜೈನ ಸಮುದಾಯದವರು. ಈಗ ಜಿಲ್ಲೆಯಲ್ಲಿ ಗರಡಿಮನೆಗಳ ಸಂಖ್ಯೆ ಗಮನಾರ್ಹವಾಗಿ ಕ್ಷೀಣಿಸಿದೆ.

**ವ್ಯಾಯಾಮ ಶಾಲೆ (ಬಾಡಿ ಬಿಲ್ಡರ್):** ಈಗ ಹೆಸರಾಂತ ಬಾಡಿ ಬಿಲ್ಡರುಗಳು ತುಮಕೂರಿನಲ್ಲಿ ಯಾರೂ ಇಲ್ಲ. ಆದರೆ ೧೯೫೦–೬೦ರ ದಶಕದಲ್ಲಿ ತುಮಕೂರಿನ ಜಯದೇವ ಹಾಸ್ಟೆಲ್‌ನ ಆವರಣದಲ್ಲಿ 'ರಾಷ್ಟ್ರೀಯ ವ್ಯಾಯಾಮ ಶಾಲೆ' ಎಂಬೊಂದು ವ್ಯಾಯಾಮ ಶಾಲೆ ಇತ್ತು. ಡಿ.ಪಿ. ರಾಜು ಎಂಬ ಜೈನರು ಈ ಶಾಲೆಯನ್ನು ಸ್ಥಾಪಿಸಿ ಯುವಕರಿಗೆ ತರಬೇತಿ ಕೊಡುತ್ತಿದ್ದರು. ದತ್ತರಾಜ್ ಎಂಬುವರು ತುಮಕೂರಿನ ಮತ್ತೊಬ್ಬ ಬಾಡಿಬಿಲ್ಡರ್. ಇವರು ತುಮಕೂರಿನಲ್ಲಿ 'ಮಾದರಿ ವ್ಯಾಯಾಮಶಾಲೆ'ಯನ್ನು ಸ್ಥಾಪಿಸಿ ಅನೇಕರನ್ನು ತರಬೇತುಗೊಳಿಸಿದ್ದಾರೆ.

**ಕ್ರಿಕೆಟ್:** ಜಿಲ್ಲೆಯಲ್ಲಿ ಹಲವಾರು ಯುವಕ ಕ್ರಿಕೆಟ್ ತಂಡಗಳಿದ್ದು, ತುಮಕೂರಿನ ಅಕೇಷನಲ್ ತಂಡವು ಅನೇಕ ಆಟಗಾರರನ್ನು ತಯಾರು ಮಾಡಿದ ಸಂಸ್ಥೆಯಾಗಿದೆ. ಭಾರತ ಕ್ರಿಕೆಟ್ ತಂಡದ ಪ್ರಸಿದ್ಧ ಆಟಗಾರರಾಗಿದ್ದ ಜಿ.ಆರ್.ವಿಶ್ವನಾಥ ಜಿಲ್ಲೆಯ ಗುಬ್ಬಿಯವರು ಮತ್ತು ರಾಜ್ಯ ರಣಜಿತಂಡದ ಪ್ರಸಿದ್ಧ ಆಟಗಾರರಾಗಿದ್ದ ಜಿ.ವಿ.ಕುಮಾರ್ ತುಮಕೂರಿನವರು. ದೀಪು ಅವರು ರಾಷ್ಟ್ರಮಟ್ಟದ ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟು ಆಗಿದ್ದರು. ಜಿಲ್ಲೆಯ ಅರ್ಚನ ಜಿ., ಪ್ರಕೃತಿ, ಲಕ್ಷ್ಮಿ ಹೆ.ಕೆ. ಮಿಲನ, ನೇಹ ಎನ್.ಡಿ. ಅಭಿಷೇಕ್, ಗಿರೀಶ್ ಎಂ, ಜೀವನ್.ಬಿ.ಎಂ. ಜೀವನ್ ಪ್ರಿಯ, ರಘುನಂದನ್.ಎಂ., ಗಿರೀಶ್ ಕೆ.ಆರ್, ತೇಜಸ್.ಎಸ್, ತನ್ಮಯ ಓಜಾ, ಲೋಕೇಶ್ ಎಲ್, ಯೋಗೀಶ್ ಟಿ.ಎಂ, ಸಚಿನ್, ಶ್ರೀಧರ್ ಎಸ್, ವಿಶ್ವಜಿತ್. ಎಲ್. ಕೆ.ಮೇಘನ, ಹೆಚ್.ಎನ್.ಮೇಘನ ಮೌಲ್ಯ ಎಂ.ಕೆ, ಮಮತ ಜಿ.ಆರ್, ಉಷಾ.ಕೆ.ಆರ್, ಮಕ್‌ಸೂದ್‌ಪಾಷ ರವರುಗಳು ಜಿಮ್ನಾಸ್ಟಿಕ್ ಕ್ರೀಡೆಯ ರಾಷ್ಟ್ರಮಟ್ಟದ ಕ್ರೀಡಾ ಪಟುಗಳಾಗಿದ್ದರು.

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಸಿಎ ೦೭ ಎಆರ್‌ಬಿ ೨೦೧೩ ದಿನಾಂಕ: ೨೩–೦೭–೨೦೧೩ ರ ಅನ್ವಯ ಯುವಜನ ಸೇವಾ ಇಲಾಖೆ ಶೀರ್ಷಿಕೆಯ ಬದಲಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಎಂದು ದಿನಾಂಕ: ೧–೦೪–೨೦೧೩ ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಿರುತ್ತದೆ. ಈ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ತುಮಕೂರಿನಲ್ಲಿದ್ದು, ಜಿಲ್ಲಾ ಪಂಚಾಯತಿಯ ಆಡಳಿತಕ್ಕೆ ಒಳಪಟ್ಟಿರುತ್ತದೆ. ಈ ಇಲಾಖೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಯುವಜನರನ್ನು ಸಂಘಟಿಸಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಇವರ ಸೇವೆಯನ್ನು ತೊಡಗಿಸಿಕೊಳ್ಳಲು ಅನುವಾಗುವಂತೆ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲಾಗುತ್ತದೆ. ಈ ಯೋಜನೆಗಳಲ್ಲಿ ಯುವ ಸಂಘಗಳ ಸ್ಥಾಪನೆ, ಕ್ರೀಡಾ ಕಾರ್ಯಕ್ರಮಗಳು, ಸ್ವಯಂ ಉದ್ಯೋಗದ ಬಗ್ಗೆ ಯುವ ಪ್ರೇರಣಾ ಶಿಬಿರಗಳು ಸೇರುತ್ತವೆ. ಈ ಇಲಾಖೆಯ ವತಿಯಿಂದ ಬೇಸಿಗೆ ತರಬೇತಿ ಶಿಬಿರ ಕ್ರೀಡಾ ಶಾಲೆಗೆ ಆಯ್ಕೆ ಶಿಬಿರ, ದಸರಾ ಕ್ರೀಡಾಕೂಟ, ತಾಲೂಕು ಮತ್ತು ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡಾ ಕೂಟ, ಮಹಿಳಾ ಕ್ರೀಡಾ ಕುಟ, ಯುವಜನ ಮೇಳ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

## ಕ್ರೀಡಾಂಗಣಗಳು

ಜಿಲ್ಲಾ ಕೇಂದ್ರ ತುಮಕೂರಿನಲ್ಲಿ ಜಿಲ್ಲಾ ಮಟ್ಟದ ಕ್ರೀಡಾಂಗಣವಿದ್ದು, ಉಳಿದಂತೆ ಗುಬ್ಬಿ ತಾಲೂಕು ಹೊರತುಪಡಿಸಿ ಉಳಿದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ತಾಲೂಕು ಮಟ್ಟದ ಕ್ರೀಡಾಂಗಣಗಳು ಇಲಾಖಾವತಿಯಿಂದ ನಿರ್ಮಾಣಗೊಂಡಿರುತ್ತವೆ. ಇದಲ್ಲದೆ ಅನೇಕ ಖಾಸಗೀ ವಿದ್ಯಾಸಂಸ್ಥೆಗಳೂ ಹಾಗೂ ಸರ್ಕಾರಿ ಶಾಲಾ ಕಾಲೇಜುಗಳು ತಮ್ಮದೇ ಆದ ಕ್ರೀಡಾಂಗಣಗಳನ್ನು ಹೊಂದಿವೆ.